

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 15 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 237 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಹಿರಿಯ ಕಾಂಗ್ರೆಸ್ ಮುಖಂಡ
ಶಾಮನೂರು ಶಿವಶಂಕರಪ್ಪ ಇನ್ನಿಲ್ಲ

ಬೆಂಗಳೂರು, ಡಿ.14– ದೇಶದ ಅತಿ ಹಿರಿಯ ಶಾಸಕ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷರೂ ಆದ ಶಾಮನೂರು ಶಿವಶಂಕರಪ್ಪ ವಯೋಸಹಜ ಅನಾರೋಗ್ಯದಿಂದ ಭಾನುವಾರ ನಿಧನರಾದರು. ಇವರಿಗೆ 95 ವರ್ಷ ವಯಸ್ಸಾಗಿತ್ತು

ಇವರಿಗೆ ಗಣಿ ಮತ್ತು ಭೂವಿಜ್ಞಾನ ಸಚಿವರೂ ಆಗಿರುವ ಪುತ್ರ ಎಸ್.ಎಸ್. ಮಲ್ಲಿಕಾರ್ಜುನ್ ಸೇರಿದಂತೆ ಮೂವರು ಪುತ್ರರು. ನಾಲ್ವರು ಪುತ್ರಿಯರು ಹಾಗೂ ಸಂಸದೆ, ಸೊಸೆ ಡಾ.ಪ್ರಭಾ ಮಲ್ಲಿಕಾರ್ಜುನ್ ಇದ್ದಾರೆ. ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಇವರು ಬೆಂಗಳೂರಿನ ಸ್ಪರ್ಶ ಆಸ್ಪತ್ರೆಯಲ್ಲಿ ತಿಂಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು.

ಶಾಮನೂರು ಕಲ್ಲಪ್ಪ–ಸಾವಿತ್ರಮ್ಮ ದಂಪತಿ ಪುತ್ರರಾಗಿ 1931ರ ಜೂನ್ 16ರಂದು ಜನಿಸಿದ ಶಾಮನೂರು ಶಿವಶಂಕರಪ್ಪ ಮೂಲತಃ ಉದ್ಯಮಿ. ರಾಜಕೀಯ ಕ್ಷೇತ್ರ ಪ್ರವೇಶಿಸಿದ ಇವರು 6 ಬಾರಿ ಶಾಸಕರಾಗಿ, ಸಚಿವರಾಗಿ ಹಾಗೂ ಒಮ್ಮೆ ಸಂಸದರಾಗಿ ಸೇವೆ ಸಲ್ಲಿಸಿದ್ದಾರೆ. ಸುದೀರ್ಘ ಅವಧಿಗೆ ಕೆಪಿಸಿಸಿ ಖಜಾಂಚಿಯಾಗಿದ್ದರು.

1969ರಲ್ಲಿ ನಗರಸಭೆ ಮೂಲಕ ರಾಜಕೀಯ ಪ್ರವೇಶಿಸಿದ ಶಾಮನೂರು ಶಿವಶಂಕರಪ್ಪ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು. 1994ರಲ್ಲಿ ಮೊದಲ ಬಾರಿಗೆ ವಿಧಾನಸಭೆಗೆ ಸ್ಪರ್ಧಿಸಿ ಆಯ್ಕೆಯಾದರು. ಆಗ ಅವರಿಗೆ 63 ವರ್ಷ ವಯಸ್ಸಾಗಿತ್ತು. ಶಾಸಕರಾಗಿ, ಸಂಸದರಾಗಿ ನಿರಂತರವಾಗಿ ಆಯ್ಕೆಯಾದ ಇವರು ವಯಸ್ಸಾದಂತೆ ರಾಜಕಾರಣದಲ್ಲಿ ಮೇಲೇರಿದರು.

ಶಾಮನೂರು ಶಿವಶಂಕರಪ್ಪ 2012ರಿಂದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷರಾಗಿದ್ದರು. ಲಿಂಗಾಯತ ಪ್ರತ್ಯೇಕ ಧರ್ಮದ ಕೂಗು ಎದ್ದಾಗ 'ವೀರಶೈವ–ಲಿಂಗಾಯತ' ಎರಡೂ ಒಂದೇ ಎಂದು ಪ್ರಬಲವಾಗಿ ಪ್ರತಿಪಾದಿಸಿದರು. ಇವರ ಅವಧಿಯಲ್ಲಿ ವೀರಶೈವ ಮಹಾಸಭಾದ ಹೆಸರು ವೀರಶೈವ–ಲಿಂಗಾಯತ ಮಹಾಸಭಾ ಎಂಬುದಾಗಿ ಪರಿವರ್ತನೆಯಾಯಿತು.

ವೀರಶೈವ ಲಿಂಗಾಯತ ಮಠಾಧೀಶರನ್ನು ಒಗ್ಗೂಡಿಸಲು ಮುಂದಾಗಿದ್ದ ಶಾಮನೂರು ಶಿವಶಂಕರಪ್ಪ ಈ ನಿಟ್ಟಿನಲ್ಲಿ ಪ್ರಯತ್ನ ಆರಂಭಿಸಿದ್ದರು. ಮೊದಲ ಹೆಜ್ಜೆಯಾಗಿ ಪಂಚಪೀಠ ಮಠಾಧೀಶರ ಸಮ್ಮೇಳನವನ್ನು ಆಯೋಜಿಸಿ ಯಶಸ್ಸು ಕಂಡಿದ್ದರು. ವಿರಕ್ತ ಮತ್ತು ಗುರುಪರಂಪರೆ ಒಗ್ಗೂಡಿದರೆ ಸಮಾಜ ಇನ್ನಷ್ಟು ಸಬಲವಾಗುತ್ತದೆ ಎಂಬ ಬಲವಾದ ನಂಬಿಕೆ ಅವರದಾಗಿತ್ತು.



ಶಾಮನೂರು ಶಿವಶಂಕರಪ್ಪ [1931-2025]

ಇಂದು ದಾವಣಗೆರೆಯಲ್ಲಿ ಅಂತ್ಯಕ್ರಿಯೆ

ಬೆಂಗಳೂರಿನ ವೀರಶೈವ ಲಿಂಗಾಯತ ಮಹಾಸಭಾ ಭವನದಲ್ಲಿ ಇಂದು ರಾತ್ರಿವರೆಗೆ ಶಾಮನೂರು ಶಿವಶಂಕರಪ್ಪ ಅವರ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಅನೇಕ ಗಣ್ಯರು ಶಾಮನೂರು ಅವರಿಗೆ ಅಂತಿಮ ಗೌರವ ಸಲ್ಲಿಸಿದರು.

ಇಂದು ತಡರಾತ್ರಿ ಬೆಂಗಳೂರಿನಿಂದ ದಾವಣಗೆರೆಗೆ ಅವರ ಪಾರ್ಥಿವ ಶರೀರವನ್ನು ಕೊಂಡೊಯ್ದಿದ್ದು, ನಾಳೆ (ಸೋಮವಾರ) ಬೆಳಗ್ಗೆ 6 ಗಂಟೆಯಿಂದ 11 ಗಂಟೆವರೆಗೆ ಪುತ್ರ, ಸಚಿವ ಮಲ್ಲಿಕಾರ್ಜುನ್ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ನಂತರ ಸಂಜೆ 4ರವರೆಗೆ ಸರ್ಕಾರಿ ಪ್ರೌಢಶಾಲೆ ಮೈದಾನದಲ್ಲಿ ಸಾರ್ವಜನಿಕ ದರ್ಶನಕ್ಕೆ ಇಟ್ಟು, ಬಳಿಕ ಕಲ್ಲೇಶ್ವರ ರೈಸ್ ಮಿಲ್ ಆವರಣದಲ್ಲಿರುವ ಅವರ ಪತ್ನಿ ಸಮಾಧಿ ಬಳಿ ಶಾಮನೂರು ಶಿವಶಂಕರಪ್ಪ ಅವರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವದೊಂದಿಗೆ ವೀರಶೈವ ಲಿಂಗಾಯತ ಸಂಪ್ರದಾಯದಂತೆ ನೆರವೇರಿಸಲಾಗುವುದು. ಶಾಮನೂರು ಶಿವಶಂಕರಪ್ಪ ಅವರ ಗೌರವಾರ್ಥ ದಾವಣಗೆರೆಯ ಎಲ್ಲಾ ಶಾಲಾ–ಕಾಲೇಜುಗಳಿಗೆ ಸೋಮವಾರ ರಜೆ ಘೋಷಿಸಲಾಗಿದೆ.

ಬೆಳಗಾವಿ ಅಧಿವೇಶನ 1 ದಿನ ಮುಂದೂಡಿಕೆ

ಸೋಮವಾರ ಬೆಳಗಾವಿ ಅಧಿವೇಶನದಲ್ಲಿ ಶಾಮನೂರು ಶಿವಶಂಕರಪ್ಪ ಅವರಿಗೆ ಸಂತಾಪ ಸೂಚಿಸಿದ ನಂತರ ಒಂದು ದಿನ ಮುಂದೂಡಲಾಗುತ್ತದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರು ಹಾಗೂ ವಿಪಕ್ಷಗಳ ನಾಯಕರುಗಳು ದಾವಣಗೆರೆಗೆ ತೆರಳಿ ಶಾಮನೂರು ಶಿವಶಂಕರಪ್ಪ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವರು.

ಇಂದಿನಿಂದ ಶ್ರೀ ಶಿವರಾತ್ರಿ
ಶಿವಯೋಗಿಗಳ ಜಯಂತ್ಯೋತ್ಸವ

ನಾಳೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಗಿ

- ಶಾಂತಿ ಕಾಲೇಜು ಎದುರಿನ ಮೈದಾನದಲ್ಲಿ ನಡೆಯುವ ಕಾರ್ಯಕ್ರಮ
- ರಾಷ್ಟ್ರಪತಿ ಆಗಮನದ ಹಿನ್ನೆಲೆಯಲ್ಲಿ ಕಟ್ಟೆಚ್ಚರ
- ಹೆಲಿಪ್ಯಾಡ್‌ನಿಂದ ವೇದಿಕೆವರೆಗೆ 4 ಕಿಮೀ ವಿಶೇಷ ಭದ್ರತೆ
- ಸಾವಿರಕ್ಕೂ ಅಧಿಕ ಪೊಲೀಸರ ನಿಯೋಜನೆ
- ಡಿ.21ರ ಸಮಾರೋಪದಲ್ಲಿ ಮುಖ್ಯಮಂತ್ರಿ ಭಾಗಿ



ಮಂಗಳವಾರದಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಕಾರ್ಯಕ್ರಮಕ್ಕೆ ಆಗಮಿಸುವ ಹಿನ್ನೆಲೆಯಲ್ಲಿ ದೆಹಲಿ ಭದ್ರತಾ ಪಡೆ ಅಧಿಕಾರಿಗಳು ಭಾನುವಾರ ಮಾರೇಹಳ್ಳಿ ಬಳಿ ನಿರ್ಮಿಸಲಾಗಿರುವ ಹೆಲಿಪ್ಯಾಡ್ ಪರಿಶೀಲನೆ ನಡೆಸಿದರು.

ಮಳವಳ್ಳಿ, ಡಿ.14(ಮೋಹನ್‌ರಾಜ್)– ಇಂದಿನಿಂದ 7 ದಿನಗಳ ಕಾಲ ಮಳವಳ್ಳಿಯಲ್ಲಿ ಸುತ್ತೂರು ಆದಿ ಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವ ನಡೆಯಲಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಭಾಗಿಯಾಗುವ ಈ ಕಾರ್ಯಕ್ರಮಕ್ಕೆ ಪಟ್ಟಣದ ಶಾಂತಿ ಕಾಲೇಜು ಎದುರಿನ 33 ಎಕರೆ ಪ್ರದೇಶದಲ್ಲಿ ಬೃಹತ್ ಪೆಂಡಾಲ್ ವೇದಿಕೆ ಸಿದ್ಧವಾಗಿದ್ದು, ಇಡೀ ಪಟ್ಟಣವೇ ನವವಧುವಿನಂತೆ ಶೃಂಗಾರಗೊಂಡಿದೆ.




ದ್ರೌಪದಿ ಮುರ್ಮು

ಸೋಮವಾರದಿಂದ ಶ್ರೀಗಳ ಜಯಂತಿ ಮಹೋತ್ಸವ ಆರಂಭವಾಗಲಿದ್ದು, ಡಿ.16ರಂದು ಮಧ್ಯಾಹ್ನ 3.15ಕ್ಕೆ ಜಯಂತೋತ್ಸವಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಚಾಲನೆ ನೀಡುವರು. ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಕೇಂದ್ರದ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಕ್ಷೇತ್ರದ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಭಾಗಿಯಾಗುವರು.

ಕಾರ್ಯಕ್ರಮದಲ್ಲಿ ವಿವಿಧ ಮಠಾಧೀಶರು, ವಿವಿಧ ರಾಜಕೀಯ ನಾಯಕರು, ಹಾಲಿ ಮತ್ತು ಮಾಜಿ ಜನಪ್ರತಿನಿಧಿಗಳು ಭಾಗಿಂಯಾಗಲಿದ್ದಾರೆ. ಡಿ.21ರಂದು ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಭಾಗಿಯಾಗಲಿದ್ದಾರೆ.

ಕಂಗೊಳಿಸುತ್ತಿರುವ ಮಳವಳ್ಳಿ: ಉತ್ಸವದ ಹಿನ್ನೆಲೆಯಲ್ಲಿ ಜೊತೆಗೆ ರಾಷ್ಟ್ರಪತಿಗಳು ಭಾಗಿಯಾಗುತ್ತಿರುವುದರಿಂದ ರಸ್ತೆ ವಿಭಜಕಗಳಿಗೆ ಸುಣ್ಣ ಬಣ್ಣ ಬಳಿಯಲಾಗಿದೆ. ಪ್ರಮುಖ ಬೀದಿಗಳಲ್ಲಿ ದೀಪಾಲಂಕಾರ ಕಂಗೊಳಿಸುತ್ತಿದ್ದು,

■ 6ನೇ ಪುಟಕ್ಕೆ



ಸಿಡ್ನಿ ಬೊಂಡಿ ಬೀಚ್‌ನಲ್ಲಿ ಯಹೂದಿಗಳ ಮೇಲೆ ಗುಂಡಿನ ದಾಳಿ; 12 ಮಂದಿ ಸಾವು

ಆಸ್ಟ್ರೇಲಿಯಾ ಯಹೂದಿ ವಿರೋಧಿ ನೀತಿ ಉತ್ತೇಜಿಸುತ್ತಿದೆ: ಇಸ್ರೇಲ್ ಪ್ರಧಾನಿ ನೆತನ್ಯಾಹು ಬೇಸರ

ಸಿಡ್ನಿ(ಆಸ್ಟ್ರೇಲಿಯಾ), ಡಿ.14– ಸಿಡ್ನಿಯ ಜನಪ್ರಿಯ ಪ್ರವಾಸಿ ತಾಣ ಬೊಂಡಿ ಬೀಚ್‌ನಲ್ಲಿ ಇಬ್ಬರು ಬಂದೂಕುಧಾರಿಗಳು ಜನರ ಮೇಲೆ ಮನಬಂದಂತೆ ಗುಂಡು ಹಾರಿಸಿದ್ದು, 12 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಭಾನುವಾರ ಸಂಜೆ 6.30 (ಸ್ಥಳೀಯ ಕಾಲಮಾನ)ರ ಸುಮಾರಿಗೆ ಘಟನೆ ನಡೆದಿದೆ ಎಂದು ವರದಿಯಾಗಿದೆ.

ಆಸ್ಟ್ರೇಲಿಯಾದ ಬೊಂಡಿ ಬೀಚ್‌ನಲ್ಲಿ ಹನುಕ್ಕಾ ಎಂಬ ಹಬ್ಬ ಆಚರಣೆಗೆ ಮುಂದಾಗಿದ್ದ ಜನರನ್ನು ಗುರಿಯಾಗಿಸಿಕೊಂಡು ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿದ್ದಾರೆ. ಭಯಾನಕ ದಾಳಿಯಿಂದಾಗಿ 12 ಜನರು ಮೃತಪಟ್ಟಿದ್ದು, ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ ಎನ್ನಲಾಗಿದೆ. ಬಂದೂಕುಧಾರಿಗಳು ಮನಬಂದಂತೆ 50 ಸುತ್ತು ಗುಂಡು ಹಾರಿಸಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಆಸ್ಟ್ರೇಲಿಯಾ ಪ್ರಧಾನಿ ಆಘಾತ ವ್ಯಕ್ತಪಡಿಸಿದ್ದಾರೆ.

ನಡೆದದ್ದು ಏನು: ಜನರು ಬೀಚ್‌ನಲ್ಲಿ ಆನಂದಿಸುತ್ತಿದ್ದರು. ಈ ಸಂದರ್ಭದಲ್ಲಿ ಇಬ್ಬರು ಬಂದೂಕುಧಾರಿಗಳು ಪ್ರವೇಶಿಸಿದ್ದಾರೆ. ನಂತರ ಮನಸ್ಸೋ ಇಚ್ಛೆ ಗುಂಡು ಹಾರಿಸಲು ಶುರು ಮಾಡಿದ್ದಾರೆ.

■ 6ನೇ ಪುಟಕ್ಕೆ

ಗ್ರೇಟರ್ ಮೈಸೂರು ಇಲ್ಲವೇ ಗ್ರೇಟರ್ ವಿಷನ್ ಕುರಿತ ಅರ್ಥಪೂರ್ಣ ಸಂವಾದ

ಉದ್ದೇಶಿತ ಗ್ರೇಟರ್ ಮೈಸೂರು ಯೋಜನಾಬದ್ಧವಾಗಿ ರೂಪುಗೊಳ್ಳಲಿ

ಸಂಸದ ಯದುವೀರ್ ಅಭಿಮತ

- ಮೈಸೂರು ಅಭಿವೃದ್ಧಿಗೆ ಒಂದು ಚೌಕಟ್ಟು ಗುರುತಿಸಬೇಕು
- ಮೈಸೂರನ್ನು ಮತ್ತೊಂದು ಬೆಂಗಳೂರು ಆಗಲು ಬಿಡಬಾರದು
- ಅದ್ವಾನವಾದ ಮೇಲೆ ಪರಿಹಾರಕ್ಕೆ ಹೆಣಗಾಡಬಾರದು
- ತಜ್ಞರ ಅಭಿಪ್ರಾಯ ಆಲಿಸಿ ಸರ್ಕಾರಕ್ಕೆ ವರದಿ ನೀಡಬೇಕು
- ಗ್ರೇಟರ್ ಮೈಸೂರು ರಚನೆಯಲ್ಲಿ ಲೋಪ ನುಸುಳಬಾರದು



ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸಭಾಂಗಣದಲ್ಲಿ ಭಾನುವಾರ ವಿ.ಆರ್.ಟ್ರಸ್ಟ್ ಆಯೋಜಿಸಿದ್ದ 'ಗ್ರೇಟರ್ ಮೈಸೂರು ಅಥವಾ ಗ್ರೇಟರ್ ವಿಷನ್: ನಗರದ ನಿಜವಾದ ಅಗತ್ಯವೇನು' ಕುರಿತ ಸಂವಾದ ಕಾರ್ಯಕ್ರಮವನ್ನು ಸಂಸದ ಯದುವೀರ್ ಅವರು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ಮೈಸೂರು, ಡಿ.14(ಬಿಎಲ್‌ಯು)– ಉದ್ದೇಶಿತ ಗ್ರೇಟರ್ ಮೈಸೂರ್ ರಚನೆಗೆ ವಿರೋಧ ಮಾಡುವುದು ಸರಿಯಲ್ಲ ಎಂದು ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸಭಾಂಗಣದಲ್ಲಿ ಇಂದು ವಿ.ಆರ್.ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ಗ್ರೇಟರ್ ಮೈಸೂರು ಅಥವಾ ಗ್ರೇಟರ್ ವಿಷನ್: ನಗರದ ನಿಜ ವಾದ ಅಗತ್ಯವೇನು' ಕುರಿತ ಸಂವಾದದಲ್ಲಿ ಮಾತನಾಡಿದ ಅವರು, ಗ್ರೇಟರ್ ಮೈಸೂರು ಮೂಲಕ ಮೈಸೂರು ನಗರವನ್ನು ಅಭಿವೃದ್ಧಿ ಮಾಡುವ ಸಂದರ್ಭದಲ್ಲಿ ಒಂದು ಚೌಕಟ್ಟು ರಚನೆಯಾಗಬೇಕು ಎಂದು ಸಲಹೆ ನೀಡಿದರು.

ಗ್ರೇಟರ್ ಮೈಸೂರು ರಚನೆಯನ್ನು ಕೆಲವರು ವಿರೋಧಿಸುತ್ತಿದ್ದರೆ, ಮತ್ತೆ ಕೆಲವರು ಯೋಜನೆಯ ಪರವಾಗಿದ್ದಾರೆ. ಗ್ರೇಟರ್ ಮೈಸೂರು ವಿರೋಧಿಸುವುದು ತಪ್ಪು, ಆದರೆ ಒಂದು

■ 6ನೇ ಪುಟಕ್ಕೆ

ಫ್ಲೈಓವರ್‌ಗೆ ನಮ್ಮ ತೀವ್ರ ವಿರೋಧವಿದೆ

ಗ್ರೇಟರ್ ಮೈಸೂರು ರಚನೆಗೆ ನಮ್ಮ ವಿರೋಧವಿಲ್ಲ. ಆದರೆ ಫ್ಲೈಓವರ್ ನಿರ್ಮಾಣಕ್ಕೆ ನಮ್ಮ ವಿರೋಧವಿದೆ ಎಂದು ಯದುವೀರ್ ಸ್ಪಷ್ಟಪಡಿಸಿದರು.

ಮೈಸೂರಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಿಂದ ಫ್ಲೈ ಓವರ್ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಇದಕ್ಕಾಗಿ ಹುಣಸೂರು ರಸ್ತೆಯಲ್ಲಿರುವ ಸುಮಾರು 300ಕ್ಕೂ ಹೆಚ್ಚು ಮರಗಳನ್ನು ಕಡಿಯಬೇಕಾಗಿದೆ. ಇದರಿಂದ ಪರಿಸರಕ್ಕೆ ತೀವ್ರ ಧಕ್ಕೆಯಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಫ್ಲೈಓವರ್ ನಿರ್ಮಾಣವಾದರೆ ಮೈಸೂರಿನ ಪಾರಂಪರಿಕತೆಗೆ ಧಕ್ಕೆಯಾಗುತ್ತದೆ. ಈ ಕಾರಣದಿಂದ ನಾನು ಈ ಯೋಜನೆ ವಿರೋಧಿಸುತ್ತಿದ್ದೇನೆ ಎಂದು ಸ್ಪಷ್ಟನೆ ನೀಡಿದರು. ಮೈಸೂರಿನಲ್ಲಿ ವೈಟ್ ಟ್ಯಾಪಿಂಗ್ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಆದರೆ ವೈಟ್ ಟ್ಯಾಪಿಂಗ್ ಕೂಡ ಅಭಿವೃದ್ಧಿಗೆ ಮಾರಕವಾಗಿದೆ. ವೈಟ್ ಟ್ಯಾಪಿಂಗ್ ಮಾಡಿದರೆ ಒಳಚರಂಡಿ (ಯುಜಿಡಿ) ವ್ಯವಸ್ಥೆಗೆ ಬಹಳ ಸಮಸ್ಯೆ ಎದುರಾಗುತ್ತದೆ. ಈ ಹಿನ್ನೆಲೆ ವೈಟ್ ಟ್ಯಾಪಿಂಗ್ ಮಾಡುವುದು ಬೇಡ ಎಂದು ಯದುವೀರ್ ತಿಳಿಸಿದರು.

ಗೀತಾ ಟ್ಯಾಲೆಂಟ್ ಶೋ ಮೂಲಕ ಭಗವದ್ಗೀತೆಯು ಮನೆ-ಮನಗಳನ್ನು ತಲುಪುತ್ತಿದೆ

ಗಣಪತಿ ಸಚ್ಚಿದಾನಂದ ಶ್ರೀಗಳು ಮೆಚ್ಚುಗೆ



ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಗೀತಾ ಮೈತ್ರಿ ಮಿಲನ ಕರ್ನಾಟಕ 2.0 ಕಾರ್ಯಕ್ರಮ ನಡೆಯಿತು.

ಮೈಸೂರು, ಡಿ.14- ಅಮೆರಿಕಾ ಸೇರಿದಂತೆ ವಿದೇಶಗಳಲ್ಲಿ ನಡೆಯುತ್ತಿರುವ 'ಗೀತಾ ಟ್ಯಾಲೆಂಟ್ ಶೋ' ಮೂಲಕ ಭಗವದ್ಗೀತೆಯು ಮನೆ-ಮನಗಳನ್ನು ತಲುಪುತ್ತಿದೆ ಎಂದು ಗಣಪತಿ ಸಚ್ಚಿದಾನಂದ ಶ್ರೀಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಆಶ್ರಮದ ನಾದಮಂಟಪದಲ್ಲಿ ಹಮ್ಮಿಕೊಂಡಿದ್ದ ಗೀತಾ ಮೈತ್ರಿ ಮಿಲನ ಕರ್ನಾಟಕ 2.0 ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ಹತ್ತು ವರ್ಷಗಳಿಂದ ಅಮೆರಿಕದಲ್ಲಿ ಈ ಗೀತಾ ಸ್ಪರ್ಧೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ. ಕಾರ್ಯಕ್ರಮವನ್ನು ವೀಕ್ಷಿಸಲು ಜನರು ಕಿಕ್ಕಿರಿದು ತುಂಬಿರುತ್ತಾರೆ. ಅಲ್ಲಿನ ಮಕ್ಕಳು ಭಗವದ್ಗೀತೆಯನ್ನು ಕಂಠಪಾಠ ಮಾಡಿರುವ ರೀತಿ ಅದ್ಭುತವಾದುದು. ಶ್ಲೋಕದ ಮಧ್ಯದಿಂದಾಗಲಿ, ಮೇಲಿನಿಂದಾಗಲಿ ಅಥವಾ ಸಂಖ್ಯೆಗಳ ಆಧಾರದ ಮೇಲೆ ಎಷ್ಟೇ ಕಠಿಣವಾಗಿ ಪ್ರಶ್ನಿಸಿದರೂ ಮಕ್ಕಳು ಲೀಲಾಜಾಲವಾಗಿ ಉತ್ತರಿಸುತ್ತಾರೆ ಎಂದು ಶ್ರೀಗಳು ಬಣ್ಣಿಸಿದರು.

ಕೇವಲ ಅಮೆರಿಕವಷ್ಟೇ ಅಲ್ಲದೆ ಯುರೋಪ್, ದುಬೈ, ಕೆನಡಾ ಮತ್ತು ವಿಶೇಷವಾಗಿ ವೆಸ್ಟ್ ಇಂಡೀಸ್‌ನ ಜನರು ಕೂಡ ಇದರಲ್ಲಿ ಅತ್ಯಂತ ಶ್ರದ್ಧೆಯಿಂದ ಪಾಲ್ಗೊಳ್ಳುತ್ತಿದ್ದಾರೆ. ಅವರ ಇಂಗ್ಲಿಷ್ ಭಾಷಾ ಶೈಲಿ ನಮಗೆ ಅರ್ಥವಾಗದಿದ್ದರೂ, ಅವರು ಭಗವದ್ಗೀತೆಯನ್ನು ಕಲಿಯುವ ಪರಿ ಮತ್ತು ಭಕ್ತಿ ಮೆಚ್ಚುವಂತದ್ದು. ಗೋವಿಂದ್ ಗಿರಿ ಜೀ ಅವರ ಪರಿವಾರದ ಶ್ರದ್ಧೆ ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣವಾಗಿದೆ ಎಂದು ಶ್ರೀಗಳು ಸ್ಮರಿಸಿದರು.

ಸಾಮಾನ್ಯವಾಗಿ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಮುಳುಗಿರುವ ಅಮೆರಿಕದ ಮಕ್ಕಳು, ಸ್ವಾಮೀಜಿಯವರ ಮೇಲಿನ ಪ್ರೀತಿಯಿಂದ ಗೀತೆಯನ್ನು ಕಲಿಯುತ್ತಿದ್ದಾರೆ. ನಾನು ಚಾಕೊಲೇಟ್ ಕೊಡುವುದಿಲ್ಲ, ಭಾಷೆಯೂ ಬೇರೆ. ಆದರೂ ಮಕ್ಕಳು ನನ್ನ ಹಿಂದೆ ಪ್ರೀತಿಯಿಂದ ಓಡಿ ಬರುತ್ತಾರೆ ಎಂದು ಶ್ರೀಗಳು ನಗುತ್ತಾ ಹೇಳಿದರು.

ಆರಂಭದಲ್ಲಿ ಚಿಕ್ಕದಾಗಿ ಶುರುವಾದ ಈ ಅಭಿಯಾನ ಈಗ ಬೃಹದಾಕಾರವಾಗಿ ಬೆಳೆದಿದೆ. ಈಗ ದೊಡ್ಡ ಕ್ರೀಡಾಂಗಣಗಳಲ್ಲಿ 40 ರಿಂದ 50 ಸಾವಿರ ಜನರು ಸೇರಿ ಗೀತಾ ಪಾರಾಯಣವನ್ನು ಆಲಿಸುತ್ತಾರೆ. ಈ ಮೂಲಕ ವಿದೇಶದಲ್ಲೂ ಮನೆ ಮನೆಯಲ್ಲಿ ಗೀತೆ (ಘರ್ ಘರ್ ಗೀತಾ) ಎಂಬ ಸಂಕಲ್ಪ ಸಾಕಾರವಾಗುತ್ತಿದೆ ಎಂದು ಶ್ರೀಗಳು ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಅಂತಾರಾಷ್ಟ್ರೀಯ ಕಾರ್ಯಾಧ್ಯಕ್ಷರು, ಗೀತಾ ಪರಿವಾರ ಮತ್ತು ಕಾರ್ಯಕ್ರಮ ನಿರ್ದೇಶಕರಾದ ಡಾ. ಆಶು ಜೀ ಗೋಯಲ್, ರಾಷ್ಟ್ರೀಯ ಉಪಾಧ್ಯಕ್ಷರು ಮತ್ತು ದಕ್ಷಿಣಾಂಚಲ ಪ್ರಮುಖರು, ಗೀತಾ ಪರಿವಾರ ಹರಿ ನಾರಾಯಣ್ ಜೀ ವ್ಯಾಸ್ ಮತ್ತಿತರರು ಮತ್ತಿತರರಿದ್ದರು.

ಚಾಮುಂಡೇಶ್ವರಿ ಕ್ಷೇತ್ರದ ಹಲವು ಬಡಾವಣೆ ಗ್ರೇಟರ್ ಮೈಸೂರು ವ್ಯಾಪ್ತಿಗೆ

• ಶಾಸಕ ಜಿ.ಟಿ. ದೇವೇಗೌಡರ ಮಾಹಿತಿ • ಮುಂದಿನ 50 ವರ್ಷ ಕ್ಷೇತ್ರದಲ್ಲಿ ನೀರಿನ ಸಮಸ್ಯೆ ಆಗದಂತೆ ಕ್ರಮ

ಮೈಸೂರು, ಡಿ.14(ಎಂಕೆ)- ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಹಲವು ಬಡಾವಣೆಗಳು ಸದ್ಯದಲ್ಲಿಯೇ ಗ್ರೇಟರ್ ಮೈಸೂರು ವ್ಯಾಪ್ತಿಗೆ ಬರಲಿದ್ದು, ಕ್ಷೇತ್ರದ ಜನರ ಎಲ್ಲಾ ಸಮಸ್ಯೆಗಳು ಬಗೆಹರಿಯಲಿವೆ ಎಂದು ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಭರವಸೆ ನೀಡಿದರು.

ಮೈಸೂರಿನ ರಿಂಗ್‌ರಸ್ತೆ ಸಮೀಪದಲ್ಲಿರುವ ರವೀಂದ್ರನಾಥ ಠಾಗೋರ್ ನಗರ(ಆರ್.ಟಿ.ನಗರ) ನಿವಾಸಿಗಳ ಕ್ಷೇಮಾಭಿವೃದ್ಧಿ ಮತ್ತು ಸಾಂಸ್ಕೃತಿಕ ಸಂಘದ ನಾಲ್ಕನೇ ವರ್ಷದ ವಾರ್ಷಿಕ ಸಮಾರಂಭ ಹಾಗೂ ಕುಂದು-ಕೊರತೆ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ರವೀಂದ್ರನಾಥ ಠಾಗೋರ್ ನಗರದಲ್ಲಿರುವ ಎಲ್ಲಾ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಿ, ಸುಂದರ ಬಡಾವಣೆಯನ್ನಾಗಿ ಅಭಿವೃದ್ಧಿ ಮಾಡಲಾಗುವುದು ಎಂದು ತಿಳಿಸಿದರು.

ಮುಂದಿನ ಆರು ತಿಂಗಳಲ್ಲಿ ಆರ್.ಟಿ.ನಗರದಲ್ಲಿನ ಕುಡಿಯುವ ನೀರಿನ ಸಮಸ್ಯೆ ಮಾತ್ರವಲ್ಲದೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆಯೂ ಸಂಪೂರ್ಣವಾಗಿ ಬಗೆಹರಿಯಲಿದೆ. ಪ್ರತೀ ಮನೆಗೆ ಕಾವೇರಿ ನೀರು ಬರಲಿದೆ. ಮುಂದಿನ 50 ವರ್ಷ ಕುಡಿಯುವ ನೀರಿನ ಸಮಸ್ಯೆ ಇರಲ್ಲ. ಹಾಗೆಯೇ ಕಾಲ ಕಾಲಕ್ಕೆ ರಸ್ತೆ, ಒಳಚರಂಡಿ ಅಭಿವೃದ್ಧಿ ಜೊತೆಗೆ ಸದ್ಯಕ್ಕೆ ವಾರದಲ್ಲಿ ನಾಲ್ಕು ದಿನ ಕಸ ವಿಲೇವಾರಿಗೆ ಕ್ರಮವಹಿಸಲಾಗುವುದು ಎಂದರು.

ಇನ್ನೂ ಮೂರು ತಿಂಗಳಲ್ಲಿ ಬಡಾವಣೆಗೆ ಸಮರ್ಪಕ ಬೀದಿ ದೀಪ ವ್ಯವಸ್ಥೆಯಾಗಲಿದೆ. ನಾನು ಕೂಡ ಆಗಾಗ ಬಡಾವಣೆಗೆ ಭೇಟಿ ನೀಡಿ, ಕುಂದು-ಕೊರತೆ ಆಲಿಸುತ್ತೇನೆ. ಮುಂದಿನ ತಿಂಗಳು ಎಲ್ಲರನ್ನು ಸೇರಿಸಿ, ಪ್ರಗತಿ ಪರಿಶೀಲನಾ ಸಭೆ ನಡೆಸಲಾಗುವುದು ಎಂದು ಹೇಳಿದರು.

ಸಬ್ ಸ್ಟೇಷನ್‌ಗೆ ಪ್ರಯತ್ನ: ಆರ್.ಟಿ.ನಗರದಲ್ಲಿ ಕಳ್ಳತನ, ಪುಂಡರ ಹಾವಳಿ ಬಗ್ಗೆ ದೂರು ಬಂದಿದೆ. ಬಡಾವಣೆ ಸಮೀಪದಲ್ಲಿ ಸಬ್ ಸ್ಟೇಷನ್ ಅನಿವಾರ್ಯವಾಗಿದೆ. ಎಲ್ಲದಕ್ಕೂ ಜಯಪುರ ಪೊಲೀಸ್ ಸ್ಟೇಷನ್‌ಗೆ ಹೋಗಲು ಸಾಧ್ಯವಿಲ್ಲ. ಆದ್ದರಿಂದ ಪೊಲೀಸ್ ಅಧಿಕಾರಿಗಳೊಂದಿಗೆ ಮಾತನಾಡಿ ಉಪ ಪೊಲೀಸ್ ಠಾಣೆ ಮಾಡುವ ಪ್ರಯತ್ನ ಮಾಡಲಾಗುವುದು ಎಂದರು.

ಸಭೆಯಲ್ಲಿ ರವೀಂದ್ರನಾಥ ಠಾಗೋರ್ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ರಾಜೇಶ್, ಉಪಾಧ್ಯಕ್ಷ ಶ್ರೀಪಾದರಾವ್, ಖಜಾಂಚಿ ಮಲ್ಲಿಕಾರ್ಜುನ, ಕಾರ್ಯದರ್ಶಿ ಶ್ರೀನಿವಾಸಮೂರ್ತಿ, ಸಹ ಕಾರ್ಯದರ್ಶಿ ಮಹೇಶ್, ಸದಸ್ಯರಾದ ಅಪ್ಪಣ್ಣ, ರಾಮಸ್ವಾಮಿ ಮತ್ತಿತರರಿದ್ದರು.



ಮೈಸೂರಿನ ರಿಂಗ್‌ರಸ್ತೆ ಸಮೀಪದಲ್ಲಿರುವ ರವೀಂದ್ರನಾಥ ಠಾಗೋರ್ ನಗರ(ಆರ್.ಟಿ.ನಗರ) ನಿವಾಸಿಗಳ ಕ್ಷೇಮಾಭಿವೃದ್ಧಿ ಮತ್ತು ಸಾಂಸ್ಕೃತಿಕ ಸಂಘದ ನಾಲ್ಕನೇ ವರ್ಷದ ವಾರ್ಷಿಕ ಸಮಾರಂಭ ಹಾಗೂ ಕುಂದು-ಕೊರತೆ ಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿದರು.

ನನಗೆ ಉಲ್ಟಾ ಹೊಡೆದರು...!

ನಮ್ಮ ಜನರಿಗೆ ಇನ್ನೂ ಸರಿಯಾಗಿ ಯಾರಿಗೆ ವೋಟ್ ಹಾಕಬೇಕು ಎಂಬುದು ಗೊತ್ತಿಲ್ಲ. ಪ್ರತಾಪ್ ಸಿಂಹ ನಿಂತಾಗ ಹಾಗೂ ಯದುವೀರ್ ಅವರು ನಿಂತಾಗ ಹಗಲು-ರಾತ್ರಿ ಎನ್ನದೆ ಪ್ರಚಾರ ಮಾಡಿ ಕೆಲಸ ಮಾಡಿದ್ದೇನೆ. ಅದೇ ನನ್ನ(ವಿಧಾನ ಸಭೆ) ಚುನಾವಣೆ ಬಂದಾಗ ಉಲ್ಟಾ ಹೊಡೆದರು. ಆದ್ರೂ 50 ವರ್ಷದಿಂದ ಚಾಮುಂಡೇಶ್ವರಿ ಕ್ಷೇತ್ರದ ಬಗ್ಗೆ ತಿಳಿದಿದ್ದೇನೆ. ಕ್ಷೇತ್ರಕ್ಕೆ ಏನೂ ಬೇಕು ಎಂಬುದು ಗೊತ್ತಿದೆ. ಈ ನಿಟ್ಟಿನಲ್ಲಿ ಎಲ್ಲರ ಸಹಕಾರದೊಂದಿಗೆ ಕೆಲಸ ಮಾಡುತ್ತಿದ್ದೇನೆ. - **ಜಿ.ಟಿ.ದೇವೇಗೌಡ, ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ**

ಕಾಲೇಜು ವಾರ್ಷಿಕೋತ್ಸವ



ಮೈಸೂರಿನ ಕುವೆಂಪುನಗರದಲ್ಲಿರುವ ಎಂಎಎಸ್‌ವಿಎಸ್ ಗುರುಕುಲ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಕಾಲೇಜು ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಅನಾಥಸೇವಾಶ್ರಮ ವಿಶ್ವಸ್ಥ ಸಮಿತಿಯ ಅಧ್ಯಕ್ಷರಾದ ಡಾ. ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಅನಾಥ ಸೇವಾಶ್ರಮ ವಿಶ್ವಸ್ಥ ಸಮಿತಿಯ ಕಾರ್ಯದರ್ಶಿ ಎಸ್.ಕೆ.ಬಸವರಾಜನ್ ಉದ್ಘಾಟಿಸಿದರು. ಅನಾಥಸೇವಾಶ್ರಮ ವಿಶ್ವಸ್ಥ ಸಮಿತಿಯ ಉಪಾಧ್ಯಕ್ಷ ಡಾ. ಶ್ರೀಕಂಠಮೂರ್ತಿ ಎನ್. ಮಲ್ಲಾಡಿಹಳ್ಳಿಯ ಅನಾಥಸೇವಾಶ್ರಮ ವಿಶ್ವಸ್ಥ ಸಮಿತಿಯ ವಿಶ್ವಸ್ಥರಾದ ಎನ್.ಜಿ.ಶ್ರೀನಿವಾಸ, ಎಂ.ಜಿ.ರಾಮದಾಸ್, ಎಚ್.ಸಿ.ರವಿ, ಕೆಂಗುಂಟೆ ಜಯಪ್ಪ, ಪ್ರಾಂಶುಪಾಲರಾದ ಪ್ರೊ. ಪಿ.ಡಿ.ಕನ್ನೀಕರ್, ಉಪ ಪ್ರಾಂಶುಪಾಲರಾದ ಡಾ. ಬಿ.ಜಿ. ತನುಜಾ ಉಪಸ್ಥಿತರಿದ್ದರು.

20 ಲಕ್ಷಕ್ಕೆ ಬೇಡಿಕೆಯಿಟ್ಟು ವ್ಯಕ್ತಿ ಮೇಲೆ ಹಲ್ಲೆ; ಕೊಲೆ ಬೆದರಿಕೆ

ನಾಲ್ವರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಡಿ.14-ಜಮೀನು ಮಾರಿದ ಹಣ 20 ಲಕ್ಷ ರೂ. ನೀಡಬೇಕೆಂದು ಹಲ್ಲೆ ಮಾಡಿ, ಕೊಲೆ ಬೆದರಿಕೆ ಹಾಕಿದ ಆರೋಪದ ಮೇರೆಗೆ ಮೈಸೂರಿನ ನಜರ್‌ಬಾದ್ ಠಾಣೆಯಲ್ಲಿ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ.

ರಾಜೀವ್‌ನಗರದ ರೆಹಮತ್ ಉಲ್ಲಾ ಅಲಿಯಾಸ್ ಟಿಪ್ಪು, ಅಜ್ಮಲ್ ಅಲಿಯಾಸ್ ಅಜ್ಜು, ಮಂಡಿ ಮೊಹಲ್ಲಾದ ಸೈಯ್ಯದ್ ಮಾಜಿದ್ ಅಲಿಯಾಸ್ ಮಾಜು ಮತ್ತು ಬನ್ನಿಮಂಟಪದ ಮುಜೀಬ್ ಅಲಿಯಾಸ್ ಮುಜ್ಜು ಆರೋಪಕ್ಕೆ ಒಳಗಾಗಿರುವವರು.

ತಾವು ಜಮೀನು ಮಾರಾಟ ಮಾಡಿದ್ದು, ಅದರ ಹಣ 20 ಲಕ್ಷ ರೂ. ನೀಡುವಂತೆ ರೆಹಮತ್ ಉಲ್ಲಾ ಅವರು ಮತ್ತು ಸೈಯ್ಯದ್ ಮಾಜಿದ್ ಅವರು ನ.1ರಂದು ಮಧ್ಯಾಹ್ನ ತಮಗೆ ಕರೆ ಮಾಡಿ ಕೇಳಿದ್ದು, ಹಣ ಕೊಡಲು ನಿರಾಕರಿಸಿದ ಕಾರಣ ತಮ್ಮನ್ನು ಹಾಗೂ ಜಮೀನು ಮಾರಾಟದ ಸಾಕ್ಷಿದಾರ ಸೈಯ್ಯದ್ ಅಶ್ವಕ್ ಅವರನ್ನು ಇವರಿಬ್ಬರು ದಕ್ಷಿಣ ಪಾಕ್ ಹೋಟೆಲ್ ಬಳಿಗೆ ಕರೆಸಿಕೊಂಡು ಹಣ ಕೇಳಿದ್ದಾರೆ ಎಂದು ವಾಹಬ್ ಪಾಶ ಎಂಬುವರು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಜಮೀನಿಗೂ ನಿಮಗೂ ಸಂಬಂಧವಿಲ್ಲ. ಹಣ ಯಾಕೆ ಕೊಡಬೇಕು ಎಂದು ಕೇಳಿದಾಗ ಇವರಿಬ್ಬರ ಜೊತೆ ಮತ್ತಿಬ್ಬರು ಆರೋಪಿಗಳೂ ಸೇರಿ ನಮ್ಮನ್ನು ಎಳೆದಾಡಿ, ಹಲ್ಲೆ ನಡೆಸಿದ್ದಲ್ಲದೆ ಕೊಲೆ ಬೆದರಿಕೆ ಹಾಕಿದ್ದಾರೆ. ಅಷ್ಟಕ್ಕೆ ನಿಲ್ಲದೆ, ನನ್ನ ಮೇಲೆಯೇ ಕೇಸ್ ದಾಖಲಿಸಿದ್ದಾರೆ ಎಂದು ವಾಹಬ್ ಪಾಶ ನೀಡಿದ ದೂರನ್ನು ನಜರ್‌ಬಾದ್ ಠಾಣೆ ಪೊಲೀಸರು ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಇಂದು ಕನ್ನಡ ರಾಜ್ಯೋತ್ಸವ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ

ಮೈಸೂರು, ಡಿ. 14- ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ವತಿಯಿಂದ ಡಿ.15 ರಂದು ಸಂಜೆ 4.30ಕ್ಕೆ ಕನ್ನಡ ರಾಜ್ಯೋತ್ಸವ ಸಂಭ್ರಮ ಮತ್ತು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭವನ್ನು ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಸಾಹಿತಿಗಳು ಹಾಗೂ ಕನ್ನಡ ಪ್ರಾಧ್ಯಾಪಕರಾದ ಡಾ.ಮೈಸೂರು ಕೃಷ್ಣಮೂರ್ತಿ ಉದ್ಘಾಟಿಸುವರು. ಮೈಸೂರಿನ ಹಿರಿಯ ಸಂಸ್ಕೃತ ವಿದ್ವಾಂಸರೂ, ಕನ್ನಡ ಮುಕ್ತಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಡಾ. ಹೆಚ್.ವಿ. ನಾಗರಾಜರಾವ್ ಅಧ್ಯಕ್ಷತೆ ವಹಿಸಲಿದ್ದಾರೆ. 2025ನೇ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅಂಶಿ ಪ್ರಸನ್ನಕುಮಾರ್, ಪ್ರೊ.ಕೆ. ರಾಮಮೂರ್ತಿರಾವ್ ಅವರನ್ನು ಸನ್ಮಾನಿಸಲಾಗುವುದು. ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಸ್. ರಾಮಪ್ರಸಾದ್ ಅಭಿನಂದನಾ ನುಡಿಗಳನ್ನಾಡುವರು ಎಂದು ಪ್ರಕಟಣೆ ತಿಳಿಸಿದೆ.

ಸದ್ಯದಲ್ಲೇ ಮಾದಿಗ ವಕೀಲರ ಸಮ್ಮೇಳನ; ಮಹತ್ವದ ನಿರ್ಣಯ ಕೈಗೊಳ್ಳಲು ನಿರ್ಧಾರ



ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಅಧ್ಯಕ್ಷತೆಯಲ್ಲಿ ಭಾನುವಾರ ಬೆಂಗಳೂರಲ್ಲಿ ಸಭೆ ನಡೆಯಿತು.

ಮೈಸೂರು, ಡಿ.14- ಶೀಘ್ರದಲ್ಲೇ ಮಾದಿಗ ವಕೀಲರ ಸಮ್ಮೇಳನ ನಡೆಸಿ, ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ನೇತೃತ್ವದ ಸಭೆಯಲ್ಲಿ ನಿರ್ಧರಿಸಲಾಗಿದೆ.

ವೇದಿಕೆಯ ಅಧ್ಯಕ್ಷರೂ ಆದ ಮೈಸೂರಿನ ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಅಧ್ಯಕ್ಷತೆಯಲ್ಲಿ ಭಾನುವಾರ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಮೂರು ಪ್ರಮುಖ ವಿಚಾರಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಲಾಯಿತು.

ಒಳ ಮೀಸಲಾತಿ ಸಂಬಂಧ ಹೈಕೋರ್ಟ್‌ನಲ್ಲಿ ರಿಟ್ ಪಿಟಿಷನ್‌ಗಳನ್ನು ಸಲ್ಲಿಸಿರುವುದು, ಮುಂಬರುವ ಕರ್ನಾಟಕ ಬಾರ್ ಕೌನ್ಸಿಲ್ ಚುನಾವಣೆ ಹಾಗೂ ಮಾದಿಗ ಸಮುದಾಯದ ವಕೀಲರ ಎರಡನೇ ವರ್ಷದ ಸಮ್ಮೇಳನದ ಬಗ್ಗೆ ಚರ್ಚಿಸಿ, ಆ ಐತಿಹಾಸಿಕ ಸಮ್ಮೇಳನದಲ್ಲಿ ಸಮುದಾಯದ ಹಿತದೃಷ್ಟಿಯಿಂದ ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲು ತೀರ್ಮಾನಿಸಲಾಯಿತು.

ವೇದಿಕೆ ಪ್ರಧಾನ ಕಾರ್ಯದರ್ಶಿ ಬೂದಿತಿಟ್ಟು ರಾಜೇಂದ್ರ, ಶಿವಕುಮಾರ್, ಮಾಳಪ್ಪ ಕುರ್ಕಿ, ಎಂ. ದಾಸಯ್ಯ, ಶಿವಪ್ಪ ಚಿಕ್ಕಣ್ಣನವರ್, ಚಿತ್ರದುರ್ಗದ ಬಿಸ್ನಳ್ಳಿ ಜಯಪ್ಪ, ಚಂದ್ರಪ್ಪ, ರಾಯಚೂರಿನ ಕರುಣಾಕರ್, ಬೆಂಗಳೂರಿನ ಹನುಮೇಶ್ ಗುಂಡೂರ್, ಹಿರಿಯ ವಕೀಲರಾದ ವೆಂಕಟೇಶ್ ದೊಡ್ಡೇರಿ, ಮರಿಯಪ್ಪ, ಸೋಲೋಮನ್, ಗೋಖಲೆ ಸಾಹೇಬ, ರಾಜು, ಶ್ರೀಮತಿ ಮಂಜುಳಾ, ಶ್ರೀಮತಿ ಸುವರ್ಣ ಸುಕೋರ್ಡು, ಪ್ರೇಮ, ಅರುಣಾ, ರಂಗಸ್ವಾಮಿ, ಬೈಲಪ್ಪ, ಕನಕ ರಾಜು ಸೇರಿದಂತೆ ವಿವಿಧ ಜಿಲ್ಲೆಗಳ ಹಿರಿಯ ವಕೀಲರು ಹಾಗೂ ಮುಖಂಡರು ಸಭೆಯಲ್ಲಿ ಸಲಹೆ ಸೂಚನೆ ನೀಡಿದರು.

ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆ



ಮೈಸೂರು, ಡಿ. 14- ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಸಂಘಟನಾ ಕಾರ್ಯದರ್ಶಿ ಸೈಯದ್ ಫಾರೂಕ್ ಅವರನ್ನು ಮೈಸೂರು ದಸರಾ ವಸ್ತುಪ್ರದರ್ಶನದ ಮಹಿಳಾ ಮತ್ತು ಮಕ್ಕಳ ಉಪ ಸಮಿತಿಯ ಉಪಾಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ.

ಶಾಲಾ ವಾರ್ಷಿಕೋತ್ಸವ



ಲಿಟ್ಟಲ್ ಎಲ್ಲಿ ಮಾಂಟೆಸರಿ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಮೈಸೂರು ಮಹಾನಗರ ಪಾಲಿಕೆಯ ನಿಕಟ ಪೂರ್ವ ಸದಸ್ಯರಾದ ಎಸ್ ಬಿ ಎಂ ಮಂಜುರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಲಿಟಲ್ ಎಲ್ಲಿ ಶಾಲೆಯ ಮುಖ್ಯಸ್ಥರಾದ ಲಕ್ಷ್ಮಿ, ಶಾಲೆಯ ಟೀಚರ್ ಕಮಲ, ಪ್ರಮೀಳಾ ಇನ್ನಿತರರು ಉಪಸ್ಥಿತರಿದ್ದರು

ಸುಸ್ಥಿರ ಕೃಷಿ ಆಧಾರಿತ ಜೀವನೋಪಾಯ ಬಲ ಪಡಿಸಲು ಪೀಪಲ್ ಟ್ರೀ ಸಂಸ್ಥೆ ಆಗ್ರಹ

ಮೈಸೂರು, ಡಿ.14(ಜಿಎ)- ಹವಾಮಾನ ಬದಲಾವಣೆ ನಿಭಾಯಿಸುವ ನಿಟ್ಟಿನಲ್ಲಿ ಸರ್ಕಾರ ನೀತಿ ನಿಯಮ ರೂಪಿಸಬೇಕು. ಮಳೆ ಆಶ್ರಿತದಲ್ಲಿ ಸುಸ್ಥಿರ ಕೃಷಿ ಆಧಾರಿತ ಜೀವನೋಪಾಯ ಬಲಪಡಿಸಲು ಸಮುದಾಯ ಸಹಭಾಗಿತ್ವದಲ್ಲಿ ಹೊಂದಾಣಿಕೆ ಮತ್ತು ಕೃಷಿ ವಿಧಾನಗಳ ಕಾರ್ಯಕ್ರಮ ರೂಪಿಸಬೇಕೆಂದು ಹೆಚ್.ಡಿ. ಕೋಟೆ ಮೂಲದ ಪೀಪಲ್ ಟ್ರೀ ಸಂಸ್ಥೆ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸಂಶೋಧನಾ ಸಮನ್ವಯಾಧಿಕಾರಿ ಎಲ್.ಸಿ. ಚನ್ನರಾಜು ಮಾತನಾಡಿ, ಅರಣ್ಯದ ಹೊರಗೆ ವಾಸಿಸುತ್ತಿರುವ ಮತ್ತು ಪುನರ್ವಸತಿಗೊಂಡಿರುವ ಆದಿವಾಸಿ ಸಮುದಾಯದ ಕೃಷಿ ಭೂಮಿ ಅರಣ್ಯದ ಅಂಚಿನಲ್ಲಿದೆ. ಕೃಷಿ ಚಟುವಟಿಕೆ ಮಾಡಿದಲ್ಲಿ ವನ್ಯಜೀವಿಗಳ ಹಾವಳಿಯಿಂದ ಫಸಲು ಕೈಸೇರುತ್ತಿಲ್ಲ. ರೈಲ್ವೆ ಕಂಬಿ ಬೇಲಿ ಜೊತೆಗೆ ಮೆಶ್ ಅಳವಡಿಸಿ ಆದಿವಾಸಿ ಸಮುದಾಯದ ಬೆಳೆಗಳಿಗೆ ರಕ್ಷಣೆ ಕೊಡಬೇಕು. ವೈಜ್ಞಾನಿಕ ಮಾನದಂಡದ ಆಧಾರದ ಮೇಲೆ ಬೆಳೆ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು. 2006 ರ ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಅರಣ್ಯ ಅವಲಂಬಿತ ಆದಿವಾಸಿಗಳಿಗೆ ವೈಯಕ್ತಿಕ ಸಾಮುದಾಯಿಕ ಮತ್ತು ಕಿರು ಅರಣ್ಯ ಉತ್ಪನ್ನ ಸಂಗ್ರಹಣೆ ಮತ್ತು ಮಾರಾಟಕ್ಕೆ ಹಕ್ಕುಗಳಿವೆ. ಈ ಕಾಯ್ದೆ ಅನುಷ್ಠಾನಗೊಳ್ಳಬೇಕು. 2025ರ ಬೀಜ ಮಸೂದೆಯಲ್ಲಿ ಸಮುದಾಯ ಬೀಜ ವಲಯ ಮತ್ತು ಸಾರ್ವಜನಿಕ ಬೀಜ ವಲಯ ಭದ್ರ ಪಡಿಸಬೇಕೆಂದು ಸಹಾ ಕೋರಿದರು. ಸುದ್ದಿಗೋಷ್ಠಿಯಲ್ಲಿ ಭಾಗ್ಯಮ್ಮ, ಲಾವಣ್ಯ, ಡೇನಿಯಲ್, ವೆಂಕಟೇಶ್, ಪ್ರಕಾಶ್, ಟಿ.ಸಿ. ಸುರೇಶ್, ಜವರೇಗೌಡ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.12.2025 ಸೋಮವಾರ, ಮಳೆ ನಕ್ಷತ್ರ: ಜ್ಯೇಷ್ಠ, 3.12.2025 ರಿಂದ 15.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 7.30 ರಿಂದ 9 ರವರೆಗೆ.

* **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಕ್ಕಳಲ್ಲಿ ಕಂಡು ಬರುವ ಆಟಿಸಂ, ಕುತ್ತಿಗೆ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.
* **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.
* **ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ:** ಪ್ರಸಾರಾಂಗ ಪುಸ್ತಕೋತ್ಸವ-2025 ಹಾಗೂ ಪ್ರಸಾರಾಂಗದಲ್ಲಿರುವ ಪ್ರಮುಖ ಕೃತಿಗಳ ಪರಾಮರ್ಶೆ ಮತ್ತು ಸನ್ಮಾನ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಗೌರವ ಉಪಸ್ಥಿತಿ: ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತ, ಅಧ್ಯಕ್ಷತೆ: ಪ್ರಸಾರಾಂಗದ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಸ್ಥಳ: ಪ್ರಸಾರಾಂಗದ ಹೊರಾಂಗಣ, ಬೆಳಗ್ಗೆ 10ರಿಂದ.
* **ನೃತ್ಯ ಈಶಾ ಪ್ರದರ್ಶನ ಕಲೆಗಳ ಕೇಂದ್ರ ಮೈಸೂರು:** ಈಶಾ ನೃತ್ಯೋತ್ಸವ-3ನೇ ವರ್ಷದ ವಾರ್ಷಿಕೋತ್ಸವ, ಉದ್ಘಾಟನೆ: ರಘುಲೀಲಾ ಸಂಗೀತ ಮಂದಿರದ ನಿರ್ದೇಶಕರಾದ ಶ್ರೀಮತಿ ಸುನಿತಾ ಚಂದ್ರಕುಮಾರ್, ಅಧ್ಯಕ್ಷತೆ: ನಿವೃತ್ತ ಪ್ರಾಚಾರ್ಯ ನವಿಲೂರು ಪ್ರಕಾಶ್, ಸ್ಥಳ: ಗಾನಭಾರತಿ ರಮಾ ಗೋವಿಂದ ಕಲಾ ವೇದಿಕೆ, ಸಂಜೆ 5.30ರಿಂದ.
* **ಅರಮನೆ ಕೋಟೆ ಉತ್ತರ ಬಾಗಿಲು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಮೂಹ ದೇವಾಲಯಗಳು:** ಶ್ರೀ ಹನುಮ ಜಯಂತಿ ಮಹೋತ್ಸವ, ಸಂಜೆ 5.30ರಿಂದ ಶ್ರೀ ಸೀತಾರಾಮ ಲಕ್ಷ್ಮಣ ಹನುಮಂತ ದೇವರ ಉಯ್ಯಾಲೋತ್ಸವ, ಕೃಷ್ಣನ್ ಆರ್. ಮತ್ತು ತಂಡದವರಿಂದ ದೇವರನಾಮ, ಮಾಳವಿ ಮಂಜುನಾಥ್ ಮತ್ತು ತಂಡದಿಂದ ಪಿಟೀಲು ವಾದನ, ಸ್ಥಳ: ಆಂಜನೇಯಸ್ವಾಮಿ ದೇವಸ್ಥಾನದ ಬಳಿ, ಅರಮನೆ ಕೋಟೆ ಉತ್ತರ ಬಾಗಿಲು.
* **ನಾಲ್ವಡಿ ಸೋಷಿಯಲ್, ಕಲ್ಚರಲ್ ಅಂಡ್ ಎಜುಕೇಷನ್ ಟ್ರಸ್ಟ್:** ಅನಿಕೇತನ-ಉಚಿತ ಜಾನಪದ ಮತ್ತು ರಂಗ ತರಬೇತಿ ಶಿಬಿರ, ನೀನಾಸಂನ ದಿನೇಶ್ ಚಮ್ಮಳಿಗೆ ಅವರಿಂದ, ಸ್ಥಳ: ರಂಗ ತಾಲೀಮು ಕೊಠಡಿ (ಕಲಾಮಂದಿರ ಆವರಣ), ಸಂಜೆ 6ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ-ಡಾ.ಪುಟ್ಟರಾಜ್ .ಕೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: 'ಸಸ್ಯ ಸಿರಿ': ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ- ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ- ಅಮೃತಾ ನಿತಿನ್ ಶಾಸ್ತ್ರಿ, ಎಂ.ಆರ್.ಸುಧಾ, ವ್ಯಾಖ್ಯಾನ- ಡಾ.ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು- ಪಾವನಿ ಕಾಶಿನಾಥ್, 7.45 ಚಿತ್ರಗೀತೆಗಳು, 8.30 ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ): ಕನ್ನಡ ಸಾಹಿತ್ಯ ಕ್ಷೇತ್ರದ ಹಿರಿಯ ವಿದ್ವಾಂಸರಾದ ಪ್ರೊ.ಎ.ಎನ್.ಮೂರ್ತಿರಾಯರೊಂದಿಗೆ ಡಾ.ಪ್ರಭುಶಂಕರ ಅವರು ನಡೆಸಿದ್ದ ಸಂವಾದ ಇದು ನೆನಪಿನಂಗಳ ಕಾರ್ಯಕ್ರಮದ 200ನೇ ಕಂತು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಲಾಲ್ಗುಡಿ ಜಿ.ಜೆ.ಆರ್.ಕೃಷ್ಣನ್ ಹಾಗೂ ಲಾಲ್ಗುಡಿ ವಿಜಯಲಕ್ಷ್ಮಿ- ಯುಗಳ ವೈಯೊಲಿನ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ: ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ.

ಮಧ್ಯಾಹ್ನ: 12.05 ವನಿತಾ ವಿಹಾರ: ಗೃಹಿಣಿ ನಿವೃತ್ತ ಉದ್ಯೋಗಸ್ಥೆ ಲೇಖಕಿ ಕವಯಿತ್ರಿ ವಿನುತಾ ಹಂಚಿನಮನಿ ಅವರೊಂದಿಗೆ ಮಾತುಕತೆ, ನಡೆಸಿಕೊಡುತ್ತಾರೆ- ಮಂಜುಳಾ ಪುರಾಣಿಕ್, 12.35 ದೇವರನಾಮ- ರಘು ಆರ್., 12.45 ನಮ್ಮ ಆರೋಗ್ಯ: 'ಫೈಬ್ರೊಮೈಯಾಲ್ಜಿಯಾ': ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರಿನ ಜೆ.ಎಸ್.ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಸಂಧಿವಾತ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಮಹಬಲೇಶ್ವರ ಮಮದಾಪುರ, ಇವರೊಂದಿಗೆ ಭಾಗವಹಿಸುತ್ತಾರೆ- ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, ಪ್ರಧಾನಮಂತ್ರಿ ಅಟಲ್ ಪೆನ್ಷನ್ ಯೋಜನೆ ಈ ಕುರಿತು ಮಾತನಾಡುತ್ತಾರೆ ಎಸ್. ವಿಜಯ ನಾರಸಿಂಹ, 1.20 ಭಾವಗೀತೆಗಳು: ಆರ್.ರಮಾದೇವಿ, 2.30 ಪ್ರದೇಶ ಸಮಾಚಾರ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎನ್.ರವಿಕಿರಣ್- ಚಿತ್ರವೀಣಾ ವಾದನ.

ಸಂಜೆ: 4.00 ಮಹಿಳಾರಂಗ: ನನ್ನ ಹಕ್ಕು-ನನ್ನ ಜವಾಬ್ದಾರಿ, ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ ಭಾಗವಹಿಸುತ್ತಾರೆ- ಮೈಸೂರಿನ ವಕೀಲರಾದ ಎಂ.ಎನ್. ಸುಮನಾ, ಪ್ರಸ್ತುತಿ- ಸಹನಾ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ: ಪ್ರಸ್ತುತಿ- ಡಾ.ಜಯಂತಿ ಪ್ರಸಾದ್ ನೌಟಿಯಾಲ್, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: 'ಕೃಷಿ ದೀವಿಗೆ' ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ, ಕಬ್ಬಿನ ಕೀಟಗಳ ಸಮಗ್ರ ನಿರ್ವಹಣೆ ಈ ಕುರಿತು ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ಜಿ.ಎಂ.ದರ್ಶಿನಿ ಅವರೊಂದಿಗೆ ಸಂದರ್ಶನ, ಸಂದರ್ಶಕರು- ಎನ್. ಕೇಶವಮೂರ್ತಿ.

ರಾತ್ರಿ: 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ: ವರ್ಷಾವಲೋಕನ-2025 ಈ ಕುರಿತ ವಿಶೇಷ ಚಿತ್ರಚಿತ್ತಾರ ಪ್ರಸ್ತುತಪಡಿಸುತ್ತಾರೆ- ಪಾಂಡವಪುರ ತಾಲೂಕು ಚಿನಕುರಳಿಯ ಎಸ್.ಟಿ.ಜಿ ಪ್ರಥಮದರ್ಜೆ ಕಾಲೇಜಿನ ವಿದ್ಯಾರ್ಥಿನಿ ಶ್ರಾವಣಿ ಗಿರೀಶ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ವಾದ್ಯವೃಂದ ನಿರ್ದೇಶನ- ಕೆ.ಟಿ.ಉದಯ್ ಕಿರಣ್, ರಾಗ- ವಿಟಪಿ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ.

* **ಸಾಧನಾ ಮಂದಿರ:** ಸರಸ್ವತಿ ಪೂಜೆ ವಿಶೇಷ ತರಬೇತಿ, ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಮತ್ತು ವಿಧಾನಗಳೊಂದಿಗೆ, ಸ್ಥಳ: ಸಂಜೆ 6.30ಕ್ಕೆ ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನ, ಬಿಇಎಂಎಲ್‌ನಗರ, ಶ್ರೀರಾಮಪುರ, ಸಂಜೆ 7.30ಕ್ಕೆ ಮೈಸೂರು ಮೃಗಾಲಯ, ಎಸ್‌ವಿಎಂ ಲೇಔಟ್, ಕೆನರಾ ಬ್ಯಾಂಕ್ ಹಿಂಭಾಗ, ವಿವೇಕಾನಂದನಗರ.



ದಾವಣಗೆರೆ ಧಣಿ ಶಾಮನೂರು ಶಿವಶಂಕರಪ್ಪ

ಜನರ ವಿಶ್ವಾಸಕ್ಕೆ ಕಟ್ಟುಬಿದ್ದು ಬದುಕಿನ ಕೊನೆವರೆಗೂ ಸಾರ್ವಜನಿಕ ಜೀವನದಲ್ಲಿ ಅವಿರತ ಸೇವೆ-ಸಾಧನೆ

ಶಾಮನೂರು ಶಿವಶಂಕರಪ್ಪ ಎಂಬುದು ಕರ್ನಾಟಕದ ತುಂಬೆಲ್ಲಾ ಪ್ರಸಿದ್ಧಿ ಪಡೆದಿರುವ ಜನಜನಿತ ಹೆಸರು. ಅವರ ಬಾಳಿನುದ್ದಕ್ಕೂ ಹಾಸು ಹೊಕ್ಕಾದ ಉದ್ಯಮಶೀಲತೆ, ಸಾಹುಕಾರಿಕೆಯ ಸಿರಿಸಂಪನ್ನತೆ ಮತ್ತು ಮೆರುಗಿಟ್ಟಂತೆ ಕ್ರಿಯಾಶೀಲ ರಾಜಕಾರಣ. ಅಲ್ಲದೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷಗಿರಿಯ ಪಾರಮ್ಯ.

ಶಾಮನೂರು ಶಿವಶಂಕರಪ್ಪ ಅವರು ಜನಾನುರಾಗಿ ರಾಜಕಾರಣಿಯಾಗಿ, ಸಾಮಾಜಿಕ ಬದುಕಿನ ಮಹತ್ತರ ವ್ಯಕ್ತಿಯಾಗಿ, ಸಂಘ ಸಂಸ್ಥೆಗಳು ಮತ್ತು ನಿರ್ಗತಿಕರ ಬದುಕಿಗೆ ನೆರವಾದ ಕೊಡುಗೈ ದಾನಿಯಾಗಿ, ನೂರಾರು ಕುಟುಂಬಗಳ ಬದುಕಿಗೆ ಆಪತ್ ಬಂಧುವಾಗಿ, ಇವೆಲ್ಲಕ್ಕೂ ಮಿಗಿಲಾಗಿ ದಾವಣಗೆರೆಯ ಶೈಕ್ಷಣಿಕ ಬದುಕಿನ ವಿದ್ಯಾಕಾಶಿಯನ್ನು ಸಮೃದ್ಧಗೊಳಿಸಿದವರು ಶಾಮನೂರು ಶಿವಶಂಕರಪ್ಪನವರು.

ಅವರ ಸಾರಥ್ಯದ ಬಾಪೂಜಿ ವಿದ್ಯಾಸಂಸ್ಥೆಯಿಂದ ಪ್ರತಿ ವರ್ಷವೂ ಇಪ್ಪತ್ತು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾರ್ಜನೆಗೆ ಭಾಜನರು. ಅದರಲ್ಲಿ ವೈದ್ಯರು, ಎಂಜಿನಿಯರ್ ಇತರೆ ಎಲ್ಲಾ ಕ್ಷೇತ್ರದ ಪದವಿ, ಸ್ನಾತಕೋತ್ತರ ಪದವಿಧರರು ಸೇರಿದ್ದಾರೆ. ಬಾಪೂಜಿ ವಿದ್ಯಾಸಂಸ್ಥೆಯೇ ಒಂದು ಸ್ವತಂತ್ರ ವಿಶ್ವವಿದ್ಯಾಲಯ ಆಗಿರುವ ಎಲ್ಲಾ ಅರ್ಹತೆಗಳಿವೆ. ಆದರೆ ಅದನ್ನು ಡೀಮ್ಡ್ ಯೂನಿವರ್ಸಿಟಿ ಎಂದು ಪರಿವರ್ತಿಸುವಲ್ಲಿ ಅವರು ಮನಸು ಮಾಡಲಿಲ್ಲ. ಅದಕ್ಕೆ ಅವರದೇ ಕಾರಣಗಳಿದ್ದವು.

ಶಾಮನೂರು ಶಿವಶಂಕರಪ್ಪ ಅವರು ನಡೆದುಬಂದ ದಾರಿ ಕಲ್ಲು, ಮುಳ್ಳು, ಮಣ್ಣು ತುಂಬಿದ ಕಾಠಿಣದ ಹಾದಿಯೂ ಆಗಿತ್ತು. ಅಂತಹ ಹಾದಿಯನ್ನು ಖುದ್ದು ತಾವೇ ಹಸನು ಮಾಡಿಕೊಂಡು ನಡೆದು ಬಂದವರು. ಅದು ಕೇವಲ ವೈಯಕ್ತಿಕ ಬದುಕಿನ ಹಾದಿಯಾಗಿರದೇ ಸಂಘ ಸಂಸ್ಥೆಗಳು ಮತ್ತು ಸಾಮಾಜಿಕ ಬದುಕಿನ ಸಾರ್ವಜನಿಕ ಜೀವನದ ಹಾದಿಯೇ ಆಗಿತ್ತು. ಅದಕ್ಕೆಂದೇ ಸಾಮಾಜಿಕ ಬದುಕಿನಲ್ಲಿ ಅವರಿಗೊಂದು ವಿಶಿಷ್ಟವಾದ ಸ್ಥಾನಮಾನ.

ತಾನಿರುವ ಕಾಂಗ್ರೆಸ್ ಹೊರತು ಪಡಿಸಿ ರಾಜ್ಯದಲ್ಲಿ ಯಾವುದೇ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದರೂ ಅವುಗಳದು ಶಾಮನೂರು ಜತೆಗೆ ಸದಾ ಸಹೃದಯತೆಯ ಸಖ್ಯ ಅಷ್ಟರಮಟ್ಟಿಗೆ ಅವರು ಅಜಾತ ಶತ್ರು ರಾಜಕಾರಣಿ. ಆರಂಭಕ್ಕೆ ಮಾತ್ರವಲ್ಲ ಈಗಲೂ ವ್ಯಾಪಾರೋದ್ಯಮ, ಸಾಮಾಜಿಕ ಮತ್ತು ಧಾರ್ಮಿಕ ಸೇವಾ ಸಂದೋಹವೇ ಅವರ ಆದ್ಯತೆಯ ಕ್ಷೇತ್ರ.

ಶಾಸಕರಾಗುವ ಮುನ್ನ ಅವರು ದಾವಣಗೆರೆ ನಗರಸಭೆ ಅಧ್ಯಕ್ಷ ಪಟ್ಟ ಅಲಂಕರಿಸಿದವರು. ಅವರಿಗೆ ಅಧಿಕಾರ ಇರಲಿ, ಇಲ್ಲದಿರಲಿ ಅಪ್ಪಟ ಕಾಂಗ್ರೆಸ್ಸಿಗ ಮತ್ತು ಕೆಪಿಸಿಸಿ ಖಜಾಂಚಿ ಎಂಬುದು ಮಾತ್ರ ಯಾವತ್ತೂ ಖಾಯಂ. ಆದರೆ ಮುಖ್ಯಮಂತ್ರಿ ಆಗುವ ಕನಸು ಮಾತ್ರ ಸಾಕಾರಗೊಳ್ಳಲಿಲ್ಲ. ಅವರ ಮಗ ಎಸ್.ಎಸ್.ಮಲ್ಲಿಕಾರ್ಜುನ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರು. ಹೀಗೆ ಅಪ್ಪ ಮಗ ಇಬ್ಬರೂ ವಿಧಾನ ಸಭೆಯಲ್ಲಿ ದಾವಣಗೆರೆಯ ದಕ್ಷಿಣ ಉತ್ತರಗಳು ಸಂಗಮಿಸುವ ಸಂಭ್ರಮವೇ ಚೆಂದವಿತ್ತು. ಅದು ಹಣ್ಣೆಲೆ ಚಿಗುರೆಲೆಗಳ ಹಸಿರಿನ ಸೊಗಸು. ಹೊಸ ಚಿಗುರು ಹಳೆಬೇರು ಕೂಡಿರಲು ಮರ ಸೊಬಗು ಎಂಬಂತೆ. ಶಾಮನೂರು ಮಲ್ಲಿಕಾರ್ಜುನ ಅವರು ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಇಲಾಖೆ ಸಚಿವರು. ಶಿವಶಂಕರಪ್ಪ ಅವರ ಸೊಸೆ ಡಾ. ಪ್ರಭಾ ಮಲ್ಲಿಕಾರ್ಜುನ ಅವರು ಲೋಕಸಭಾ ಸದಸ್ಯೆಯಾಗಿ ಅಪಾರ ಲೋಕ ಪ್ರೀತಿಗೆ ಭಾಜನರು.

ಶಿವಶಂಕರಪ್ಪ ಅವರು ಇಂತಹ ವಯಸ್ಸಿನಲ್ಲಿ ಕಳೆದ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವುದು ತರವಲ್ಲ ಎಂಬ ಅಭಿಪ್ರಾಯ. ಅದು ಅನೇಕರಿಗೆ ಸಹಜವೂ ಅನಿಸಿತ್ತು. ಹಾಗೊಂದು ವೇಳೆ ಸ್ಪರ್ಧಿಸಿ ಪರಾಜಿತರಾದರೆ ವೃದ್ಧಾಪ್ಯದ ಸಂಧ್ಯಾಕಾಲದಲ್ಲಿ ಸೋಲಿನ ನೋವು ನಿರಂತರ. ಅದು ಬದುಕಿನ ಕಡೇ ಗಳಿಗೆವರೆಗೂ ಬಾಧಿಸದೇ ಬಿಡುವುದಿಲ್ಲ. ಇಂತಹದ್ದೊಂದು ಗುರುತರ ಆತಂಕ ಅವರ ಹಿತೈಷಿಗಳದಾಗಿತ್ತು. ಗೆದ್ದರೂ ಅವಧಿ ಪೂರೈಸುವ ಆರೋಗ್ಯ ಅವರಿಗಿಲ್ಲವೆಂದು ಕೆಲವು ವಿರೋಧಿ ಕುಹಕಿಗಳ ಕುಹಕ ನುಡಿ. ಇದ್ಯಾವುದನ್ನು ಕೇರ್ ಮಾಡದೇ ಅವರು ಕಳೆದ ವಿಧಾನಸಭಾ ಚುನಾವಣಾ ಕಣಕ್ಕಿಳಿದೇ ಬಿಟ್ಟರು ಮತ್ತು ಗೆದ್ದೇಬಿಟ್ಟರು.

ದಾವಣಗೆರೆ ಜನರು ತನ್ನನ್ನು ಯಾವತ್ತೂ ಕೈ ಬಿಡುವುದಿಲ್ಲ ಎಂಬ ಅಪಾರ ನಂಬಿಕೆಯಿತ್ತು. ಚುನಾವಣಾ ಪ್ರಚಾರಕ್ಕೆಂದು ಅವರು ವಿದ್ಯುತ್ ಚಾಲಿತ ತೆರೆದ ಗಾಡಿ ಮೂಲಕ ಆಗ ನಗರದಲ್ಲಿ ಓಡಾಡುವಾಗ ಕೆಲವರಂತೂ ಅವರ ಪಾದಮುಟ್ಟಿ ನಮಸ್ಕರಿಸುತ್ತಿದ್ದರು. ಹಿರಿಯ ಚೇತನಕ್ಕೆ ಸಾಮಾನ್ಯರು ಸಲ್ಲಿಸುವ ಪ್ರೀತಿ, ಗೌರವ ಅದಾಗಿತ್ತು. ನಂಬಿದ ಜನ, ಅವರ ಕೈ ಬಿಡದೇ ನಿರೀಕ್ಷೆ ಮೀರಿ ಅಂದರೆ 27,888ರಷ್ಟು ಅಧಿಕ ಮತಗಳ ಅಂತರದಿಂದ ಅವರನ್ನು ಗೆಲ್ಲಿಸಿದರು.

ಪರಿಶ್ರಮದಿಂದ ಉದ್ಯಮ, ರಾಜಕೀಯದಲ್ಲಿ ಮೇಲೆ ಬಂದವರು!

ಮೈಸೂರು, ಡಿ.14(ಎಸ್‌ಪಿಎನ್)- ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರಾಧ್ಯಕ್ಷ, ಹಿರಿಯ ರಾಜಕೀಯ ಮುತ್ಸದ್ದಿಗಳು, ಶಾಸಕರು ಹಾಗೂ ಮಾಜಿ ಸಚಿವರಾದ ಶಾಮನೂರು ಶಿವಶಂಕರಪ್ಪನವರು ಇಂದು ಸಂಜೆ ದೈವಾಧೀನರಾದುದು ವಿಷಾದದ ಸಂಗತಿ.

ಸಜ್ಜನ ರಾಜಕಾಣಿಗಳೆಂದೇ ಹೆಸರಾಗಿದ್ದ ಶಾಮನೂರು ಶಿವಶಂಕರಪ್ಪನವರು, ದಾವಣಗೆರೆ ಜಿಲ್ಲೆ ಶಾಮನೂರು ಗ್ರಾಮದ ಕೃಷಿಕ ಕುಟುಂಬದಲ್ಲಿ ಜನಿಸಿದವರು. ಬಿಎಸ್ಸಿ ಪದವೀಧರರು. ಅಕ್ಕಿಯ ವ್ಯಾಪಾರೋದ್ಯಮವನ್ನು ಪ್ರಾರಂಭಿಸಿ ಅದರಲ್ಲಿ ಯಶಸ್ವಿಯಾಗಿದ್ದರು. ಹಿಂದೆ ಚಿತ್ರದುರ್ಗ ಜಿಲ್ಲೆಯ ಭಾಗವಾಗಿದ್ದ ದಾವಣಗೆರೆ ನಗರಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದರು. ಬಳಿಕ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1994ರಲ್ಲಿ ಮೊದಲ ಬಾರಿಗೆ ದಾವಣಗೆರೆಯಿಂದ ವಿಧಾನಸಭೆಗೆ ಆಯ್ಕೆಯಾದರು. ಅನಂತರ ಸತತವಾಗಿ ಆರು ಬಾರಿ ಶಾಸಕರಾಗಿ ಆಯ್ಕೆಯಾಗಿ ಅವರ ಜನಪ್ರಿಯತೆಗೆ ಹಿಡಿದ ಕೈಗನ್ನಡಿಯಾಗಿದೆ.




1998ರಲ್ಲಿ ಲೋಕಸಭೆಗೂ ಆಯ್ಕೆಯಾಗಿದ್ದರು. ಕಾಂಗ್ರೆಸ್ ಪಕ್ಷದಲ್ಲಿ ಐದು ದಶಕಗಳಿಂದ ರಾಜಕಾರಣದಲ್ಲಿದ್ದವರು. ದೇಶದ ಅತ್ಯಂತ ಹಿರಿಯ ಸಕ್ರಿಯ ರಾಜಕಾರಣಿಗಳಲ್ಲಿ ಒಬ್ಬರಾಗಿದ್ದರು. ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರಾಗಿ ಇಳಿ ವಯಸ್ಸಿನಲ್ಲೂ ಅತ್ಯಂತ ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದರು. ಶಿಕ್ಷಣ ಪ್ರೇಮಿಗಳಾಗಿದ್ದರು. ಬಾಪೂಜಿ ಶಿಕ್ಷಣಸಂಸ್ಥೆಗಳ ಸಂಸ್ಥಾಪಕರಾಗಿ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಕ್ಷೇತ್ರಗಳಲ್ಲಿ ಕ್ರಾಂತಿಯನ್ನೇ ಮಾಡಿದ್ದರು.

ದಾವಣಗೆರೆಯನ್ನು ಶೈಕ್ಷಣಿಕ ಕೇಂದ್ರವಾಗಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರಾಗಿ ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದರು. ಡಾ. ಶಾಮನೂರು ಶಿವಶಂಕರಪ್ಪ ಜನಕಲ್ಯಾಣ ಟ್ರಸ್ಟ್ ಮೂಲಕ ಹಲವಾರು ಜನಪರ ಕಾರ್ಯಕ್ರಮಗಳನ್ನು ಕೈಗೊಂಡಿದ್ದರು. ದೈವಭಕ್ತರು, ಅಧ್ಯಾತ್ಮಜೀವಿಗಳೂ ಆಗಿದ್ದರು. ಮಠಮಾನ್ಯಗಳು ಹಾಗೂ ಧಾರ್ಮಿಕ ಕೇಂದ್ರಗಳ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದರು. ಶ್ರೀಮಠದೊಂದಿಗೆ ಅತ್ಯಂತ ಅವಿನಾಭಾವ ಸಂಬಂಧವನ್ನು ಹೊಂದಿದ್ದರು. ಜಾತ್ರೆ, ಜಯಂತಿ, ಶ್ರೀಮಠದ ಹಾಗೂ ಸಂಸ್ಥೆಗಳ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಶ್ರೀಮಠಕ್ಕೆ ಆಗಮಿಸುವ ಭಕ್ತಾದಿಗಳ ಅನುಕೂಲಕ್ಕಾಗಿ ಸುತ್ತೂರು ಶ್ರೀಕ್ಷೇತ್ರದಲ್ಲಿ ಅತಿಥಿಗೃಹವನ್ನು ನಿರ್ಮಿಸಿದ ಕೊಡುಗೈ ದಾನಿಗಳು.

ಸಾರ್ವಜನಿಕ ಜೀವನದಲ್ಲಿ ಸಜ್ಜನಿಕೆಯ ಮೂರ್ತಿಯಾಗಿದ್ದರು. ಸದಾ ಜನಪರ ನಿಲುವನ್ನು ಹೊಂದಿದ್ದರು. ಅವರ ರಾಜಕೀಯ ಜೀವನ ಒಂದು ತೆರೆದ ಪುಸ್ತಕವಾಗಿತ್ತು. ಅವರಿಗೆ ಎಲ್ಲ ಪಕ್ಷಗಳಲ್ಲಿಯೂ ಅಭಿಮಾನಿಗಳಿದ್ದರು. ಅವರೊಬ್ಬ ಅಜಾತಶತ್ರುಗಳಾಗಿದ್ದರು. ಅವರ ಅಗಲುವಿಕೆಯಿಂದ ಕರ್ನಾಟಕದ ಹಿರಿಯ ಚೇತನವೊಂದು ಅಸ್ತಂಗತವಾದಂತಾಗಿದೆ.

ದಿವಂಗತರ ಆತ್ಮಕ್ಕೆ ಶಾಂತಿಯನ್ನು, ಅವರ ಕುಟುಂಬವರ್ಗದವರು, ಬಂಧುಬಾಂಧವರು ಮತ್ತು ಅಪಾರ ಸಂಖ್ಯೆಯ ಅಭಿಮಾನಿಗಳಿಗೆ ಈ ಅಗಲುವಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಹಾರೈಸುತ್ತೇವೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಂತಾಪ ಸೂಚಿಸಿದ್ದಾರೆ.



ಅಖಿಲ ಭಾರತೀಯ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು, ಹಿರಿಯ ಮುಖಂಡರು, ಮಾಜಿ ಸಚಿವರು ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದ ಶಾಸಕರಾಗಿದ್ದ ಶಾಮನೂರು ಶಿವಶಂಕರಪ್ಪ ಅವರು ನಿಧನರಾದ ವಿಷಯ ತಿಳಿದು ಮನಸ್ಸಿಗೆ ಅಪಾರ ನೋವುಂಟಾಯಿತು. ಅವರ ಸರಳತೆ ಮತ್ತು ಸಾರ್ವಜನಿಕ ಜೀವನದಲ್ಲಿ ಅವರ ಸುಧೀರ್ಘ ಜನಸೇವೆ ಸದಾ ಸ್ಮರಣೀಯ. ಅವರ ಅಗಲಿಕೆಯಿಂದ ರಾಜ್ಯಕ್ಕೆ ಭರಿಸಲಾಗದ ನಷ್ಟವಾಗಿದ್ದು, ಮೃತರ ಆತ್ಮಕ್ಕೆ ಶಾಂತಿ ಸಿಗಲಿ. ಅಗಲಿಕೆಯ ನೋವು ಸಹಿಸುವ ಶಕ್ತಿಯನ್ನು ಭಗವಂತನು ಅವರ ಕುಟುಂಬಕ್ಕೆ ಹಾಗೂ ಅಭಿಮಾನಿಗಳಿಗೆ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

-ಹೆಚ್.ಡಿ ದೇವೇಗೌಡ, ಮಾಜಿ ಪ್ರಧಾನಿ



ಮಾಜಿ ಸಚಿವರು, ಶಾಸಕರು, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಪಕ್ಷದ ಹಿರಿಯ ನಾಯಕರು ಆದ ಶಾಮನೂರು ಶಿವಶಂಕರಪ್ಪ ಅವರ ನಿಧನ ವಾರ್ತೆ ನೋವುಂಟುಮಾಡಿದೆ. ತಮ್ಮ ಸುದೀರ್ಘ ಸಾರ್ವಜನಿಕ ಜೀವನದಲ್ಲಿ ಅಪವಾದ, ಆರೋಪಗಳಿಂದ ದೂರವಿದ್ದು, ಸಿಕ್ಕ ಅಧಿಕಾರವನ್ನು ಜನಕಲ್ಯಾಣಕ್ಕಾಗಿಯೇ ಮುಡುಪಿಟ್ಟಿದ್ದ ಮುತ್ಸದ್ದಿ ನಾಯಕನ ಅಗಲಿಕೆಯಿಂದ ಸಮಾಜ ಬಡವಾಗಿದೆ. ದಾವಣಗೆರೆ ಜಿಲ್ಲೆಯನ್ನು ಮಾದರಿ ಜಿಲ್ಲೆಯಾಗಿಸಿದ ಶಿವಶಂಕರಪ್ಪನವರ ಕಾರ್ಯಗಳು ಅವರನ್ನು ಜನಮಾನಸದಲ್ಲಿ ಚಿರಸ್ಥಾಯಿಯಾಗಿಸಲಿದೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಅವರ ಪುತ್ರ ಎಸ್.ಎಸ್.ಮಲ್ಲಿಕಾರ್ಜುನ ಮತ್ತವರ ಕುಟುಂಬಕ್ಕೆ ಈ ನೋವು ಭರಿಸುವ ಶಕ್ತಿ ಸಿಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

-ಸಿದ್ದರಾಮಯ್ಯ, ಸಿಎಂ



ದಾವಣಗೆರೆ ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಶಾಸಕರು, ಅಖಿಲ ಭಾರತ ವೀರಶೈವ ಮಹಾ ಸಭೆಯ ರಾಷ್ಟ್ರೀಯ ಅಧ್ಯಕ್ಷರು, ಮಾಜಿ ಸಚಿವರು, ಹಿರಿಯ ರಾಜಕಾರಣಿ, ಸಮಾಜ ಸೇವೆ ಹಾಗೂ ಶೈಕ್ಷಣಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ಶಾಮನೂರು ಶಿವಶಂಕರಪ್ಪನವರು ನಿಧನರಾದ ಸುದ್ದಿ ನಿಜಕ್ಕೂ ನೋವಿನ ಸಂಗತಿ. ದೇವರು ಅವರ ಆತ್ಮಕ್ಕೆ ಶಾಂತಿ ಕೊಡಲೆಂದು, ಅವರ ಕುಟುಂಬ ಹಾಗೂ ಅಪಾರ ಅಭಿಮಾನಿಗಳಿಗೆ ದುಃಖವನ್ನು ಭರಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇನೆ.

– ಪ್ರಹ್ಲಾದ್ ಜೋಶಿ, ಕೇಂದ್ರ ಸಚಿವರು.



ಮಾಜಿ ಸಚಿವರು, ಶಾಸಕರು, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾದ ಶಾಮನೂರು ಶಿವಶಂಕರಪ್ಪ ಅವರ ನಿಧನದ ಸುದ್ದಿ ಕೇಳಿ ಅತೀವ ದುಃಖವಾಯಿತು. ಸಮಾಜ ಸೇವೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಶಿವಶಂಕರಪ್ಪನವರು ಶೈಕ್ಷಣಿಕ ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಿದ್ದರು. ಅವರ ಅಗಲಿಕೆಯು ನಾಡಿಗೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ತುಂಬಲಾರದ ನಷ್ಟವುಂಟು ಮಾಡಿದೆ. ಭಗವಂತ ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಕುಟುಂಬ ವರ್ಗಕ್ಕೆ, ಬೆಂಬಲಿಗರಿಗೆ ಈ ದುಃಖ ಭರಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇನೆ.

-ಡಿ.ಕೆ.ಶಿವಕುಮಾರ್, ಡಿಸಿಎಂ




ಸರಳ ಸಜ್ಜನಿಕೆಯ ನಾಯಕರಾದ ಶ್ಯಾಮನೂರು ಶಿವಶಂಕರಪ್ಪನವರ ನಿಧನದ ಸುದ್ದಿ ಕೇಳಿ ಬಹಳ ದುಃಖವಾಯಿತು. ವೈಯಕ್ತಿಕವಾಗಿ ನಾನು ಬಹಳ ಗೌರವಿಸುತ್ತಿದ್ದ ನಾಯಕರು ಅವರಾಗಿದ್ದರು. ರಾಜಕಾರಣ ಮಾತ್ರವಲ್ಲದೆ ಶಿಕ್ಷಣ, ಉದ್ಯಮ, ಸಮಾಜಸೇವೆ ಕ್ಷೇತ್ರಗಳಲ್ಲೂ ಯಶಸ್ವಿಯಾಗಿ ಮಾದರಿಯಾಗಿದ್ದರು. ನೇರ ನಡೆನುಡಿಯ ವ್ಯಕ್ತಿಯಾಗಿದ್ದ ಅವರು, ಸಚಿವರಾಗಿಯೂ ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಅಗಲಿಕೆಯಿಂದ ನಾಡಿಗೆ ಬಹು ದೊಡ್ಡ ನಷ್ಟವಾಗಿದೆ. ಶ್ರೀಯುತರ ಆತ್ಮಕ್ಕೆ ಸದ್ಗತಿ ಸಿಗಲಿ. ಈ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಅಭಿಮಾನಿಗಳಿಗೆ, ಹಿತೈಷಿಗಳಿಗೆ ನೀಡಲಿ ಎಂದು ಶ್ರೀ ಪರಮಶಿವನಲ್ಲಿ ಪ್ರಾರ್ಥಿಸುತ್ತೇನೆ.

– ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವರು.



ಶಾಮನೂರು ಶಿವಶಂಕರಪ್ಪ ಅವರು ಸೈದ್ಧಾಂತಿಕವಾಗಿ ಕಾಂಗ್ರೆಸ್ ಪಕ್ಷದ ನಿಷ್ಠಾವಂತ, ನೇರ ನುಡಿಯ ನಾಯಕರಾಗಿದ್ದರು. ಶಿಕ್ಷಣ, ಸಂಘಟನೆ, ಸಮಾಜ ಸೇವೆಗಾಗಿ ತಮ್ಮ ಇಡೀ ಜೀವನವನ್ನೇ ಸವೆಸಿದ್ದರು. ನಮ್ಮ ಕುಟುಂಬಕ್ಕೆ ಆತ್ಮೀಯರಾಗಿದ್ದ ಅವರು ನನಗೆ ವೈಯಕ್ತಿಕವಾಗಿ ಸದಾ ಹಿತ ಬಯಸುತ್ತಿದ್ದರು. ಅವರ ಅಗಲಿಕೆಯು ಕಾಂಗ್ರೆಸ್ ಪಕ್ಷಕ್ಕೆ ಮತ್ತು ರಾಜ್ಯ ರಾಜಕಾರಣಕ್ಕೆ ತುಂಬಲಾರದ ನಷ್ಟ. ಭಗವಂತನು ಮೃತರ ಆತ್ಮಕ್ಕೆ ಸದ್ಗತಿ ಕರುಣಿಸಲಿ. ಅವರ ಕುಟುಂಬ ವರ್ಗಕ್ಕೆ ಅಪಾರ ಅಭಿಮಾನಿಗಳಿಗೆ ಈ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

-ಡಾ.ಜಿ.ಪರಮೇಶ್ವರ್, ಗೃಹ ಸಚಿವರು



ಕಷ್ಟ ಪಟ್ಟು ಏಕಾಂಗಿಯಾಗಿ ಬೆಳೆದ ದೇಶದ ಪ್ರತಿಷ್ಠಿತ ವ್ಯಕ್ತಿಗಳಲ್ಲಿ ಒಬ್ಬರಾದ ಶಾಮನೂರು ಶಿವಶಂಕರಪ್ಪನವರ ಅಗಲಿಕೆಯಿಂದ ನಾಡಿಗೆ ತುಂಬಲಾರದ ನಷ್ಟವಾಗಿದೆ. ಸಮಾಜದ ಸಂಘಟನೆ, ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಮತ್ತು ಸಮಾನತೆಯ ಚಿಂತನೆಗಾಗಿ ತಮ್ಮ ಸಂಪೂರ್ಣ ಜೀವನವನ್ನು ಸಮರ್ಪಿಸಿಕೊಂಡಿದ್ದ ಅವರು, ವೀರಶೈವ ಲಿಂಗಾಯತ ಸಮಾಜದ ಅಪ್ರತಿಮ ನಾಯಕತ್ವದ ಪ್ರತೀಕವಾಗಿದ್ದರು. ಅವರ ದೂರದೃಷ್ಟಿ, ಸೇವಾ ಮನೋಭಾವ ಮತ್ತು ಮೌಲ್ಯಾಧಾರಿತ ರಾಜಕೀಯ ನಡೆ ಮುಂದಿನ ತಲೆಮಾರಿಗೂ ಮಾರ್ಗದರ್ಶಕವಾಗಿರಲಿದೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ. ಅವರ ಕುಟುಂಬ ಸದಸ್ಯರಿಗೆ ಈ ಅತೀವ ದುಃಖ ಭರಿಸುವ ಶಕ್ತಿಯನ್ನು ತಾಯಿ ಚಾಮುಂಡೇಶ್ವರಿ ದಯಪಾಲಿಸಲಿ.

-ಜಿ.ಟಿ.ದೇವೇಗೌಡರು, ಶಾಸಕರು, ಚಾಮುಂಡೇಶ್ವರಿ ಕ್ಷೇತ್ರ



ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಸಹ ಶಾಮನೂರು ಶಿವಶಂಕರಪ್ಪ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ. ದೂರವಾಣಿ ಕರೆ ಮೂಲಕ ಕುಟುಂಬಸ್ಥರೊಂದಿಗೆ ಮಾತನಾಡಿದ್ದು ಕುಟುಂಬಸ್ಥರಿಗೆ ಧೈರ್ಯ ಹೇಳಿದ್ದಾರೆ.



ಹಿರಿಯ ರಾಜಕಾರಣಿಯನ್ನು ಕಳೆದುಕೊಂಡು ತುಂಬಾ ನೋವಾಗಿದೆ. ತುಂಬಾ ಒಳ್ಳೆ ವ್ಯಕ್ತಿ, ಮತ್ತು ಕರುಣಾಮಯಿಯಾಗಿದ್ದರು. ಯಾವತ್ತೂ ಕೂಡ ಅವರು ಸ್ವಾಭಿಮಾನಿ ಬಿಟ್ಟುಕೊಟ್ಟವರಲ್ಲ. ಸಾಕಷ್ಟು ವಿದ್ಯಾರ್ಥಿಗಳಿಗೆ ಆಶಾಕಿರಣ ಆಗಿದ್ದರು. ಅವರ ಮನಸ್ಸು ದಾರಾಳ, ನಮ್ಮ ರಾಜಕೀಯಕ್ಕೆ ತುಂಬಲಾರದ ನಷ್ಟ ಆಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ.

-ಡಾ.ಸಿ.ಎನ್ ಮಂಜುನಾಥ್, ಸಂಸದರು



ಶಾಮನೂರು ಶಿವಶಂಕರಪ್ಪ ಅವರು ವಿನಮ್ರ ಕುಟುಂಬದಿಂದ ಬಂದವರು. ಕಠಿಣ ಪರಿಶ್ರಮ, ಕಲ್ಪನೆ ಮತ್ತು ಸಮಾಜದ ಕೆಲಸ ಹಾಗೂ ಸೇವೆಗೆ ಬದ್ಧತೆಯಿಂದಿದ್ದರು. ಲೋಕಸಭೆ ಮತ್ತು ಕರ್ನಾಟಕ ವಿಧಾನಸಭೆಯ ಸದಸ್ಯರಾಗಿ ದಾಖಲೆಯ ಸತತ 3 ಅವಧಿಗೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷರಾಗಿ ರಾಜ್ಯ ಸಂಪುಟದ ಕ್ಯಾಬಿನೆಟ್ ಸಚಿವರಾಗಿ ಸೇವೆ ಸಲ್ಲಿಸಿದ ಗೌರವಾನ್ವಿತ ರಾಜಕಾರಣಿ. 1983ರಲ್ಲಿ ನನ್ನ ಮತ್ತು ನನ್ನ ಕುಟುಂಬದ ಒಡನಾಟ ಪ್ರಾರಂಭವಾಯಿತು. ಅವರೊಂದಿಗೆ ಕಳೆದ ಸಂತೋಷದ ದಿನಗಳನ್ನು ಮರೆಯಲು ಸಾಧ್ಯವಿಲ್ಲ. ಅವರು ನನ್ನನ್ನು ಆಹ್ವಾನಿಸಿ ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯ ಅಧ್ಯಕ್ಷರನ್ನಾಗಿ ಮಾಡಿದರು. ಭಾರತದ ಪ್ರಮುಖ ಶಿಕ್ಷಣ ಸಂಸ್ಥೆಯಾದ ಬಾಪೂಜಿ ಶಿಕ್ಷಣ ಸಂಘವನ್ನು ಅಭಿವೃದ್ಧಿಗೊಳಿಸುವಲ್ಲಿ ಅವರ ಮಹೋನ್ನತ ಕೊಡುಗೆ, ಸಾರ್ವಜನಿಕ ಜೀವನದಲ್ಲಿ ಅವರು ಸಲ್ಲಿಸಿರುವ ಕೊಡುಗೆ ಅವಿಸ್ಮರಣೀಯ. ಅವರ ನಿಧನದಿಂದ ರಾಜ್ಯಕ್ಕೆ ಹಾಗೂ ವೀರಶೈವ ಲಿಂಗಾಯತ ಸಮುದಾಯಕ್ಕೆ ಅಪಾರ ನಷ್ಟ ಉಂಟಾಗಿದೆ.

– ಶಂಕರ ಬಿದರಿ, ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯಾಧ್ಯಕ್ಷ



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು, ಹಿರಿಯ ಶಾಸಕರು, ಮಾಜಿ ಸಚಿವರಾದ ಶಾಮನೂರು ಶಿವಶಂಕಪ್ಪನವರು ವಿಧಿವಶರಾದ ಸುದ್ದಿ ಅತೀವ ಆಘಾತವನ್ನು ಉಂಟುಮಾಡಿದೆ. ಉದ್ಯಮಿಯಾಗಿ, ಶಾಸಕರಾಗಿ, ಸಚಿವರಾಗಿ ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ವೀರಶೈವ ಲಿಂಗಾಯತ ಸಮುದಾಯದ ಪ್ರಮುಖರಾಗಿ ಸಮಸ್ತ ಸಮಾಜದ ಏಕತೆ ಮತ್ತು ಏಳಿಗೆಗಾಗಿ ನಿರಂತರ ಶ್ರಮಿಸಿದ್ದ ಇವರ ಅಗಲಿಕೆಯಿಂದ ನಾಡು ಒಬ್ಬ ಹಿರಿಯ ಸಾಧಕ ರಾಜಕಾರಣಿಯನ್ನು, ಸಮುದಾಯ ತನ್ನ ಹಿರಿಯ ಮಾರ್ಗದರ್ಶಕರನ್ನು ಕಳೆದುಕೊಂಡಿದೆ. ಶ್ರೀಯುತರ ಆತ್ಮಕ್ಕೆ ದೇವರು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತಾ ಅವರಿಗೆ ನನ್ನ ಅಶ್ರುಪೂರ್ಣ ಶ್ರದ್ಧಾಂಜಲಿಗಳನ್ನು ಸಲ್ಲಿಸುತ್ತೇನೆ. ಅವರ ಕುಟುಂಬದವರಿಗೆ, ಅವರ ಅಪಾರ ಅಭಿಮಾನಿಗಳಿಗೆ ಹಿರಿಯರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಆ ಭಗವಂತ ದಯಪಾಲಿಸಲಿ.

-ಬಿ.ವೈ ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ



ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರು, ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾದ ಶಾಮನೂರು ಶಿವಶಂಕರಪ್ಪ ನಿಧನ ಸುದ್ದಿ ತಿಳಿದು ಅತ್ಯಂತ ದುಃಖವಾಗಿದೆ. ನಿಮ್ಮ ಅಗಲಿಕೆ ನೋವು ಭರಿಸುವ ಶಕ್ತಿ ನಿಮ್ಮ ಕುಟುಂಬ ವರ್ಗದವರಿಗೆ ಹಾಗೂ ಅಭಿಮಾನಿಗಳಿಗೆ ದೊರೆಯಲಿ ಎಂದು ಪ್ರಾರ್ಥಿಸುತ್ತೇನೆ

-ಸುನೀಲ್ ಬೋಸ್, ಸಂಸದ



ದೇಶದ ಹಿರಿಯ ಶಾಸಕರು, ಮಾಜಿ ಸಚಿವರು, ಬಾಪೂಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ ಅವರು 94ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಅವರು ಇಳಿವಯಸ್ಸಿನಲ್ಲೂ ಅತ್ಯಂತ ಚಟುವಟಿಕೆಯಿಂದ ಇರುವ ಮೂಲಕ ಮಾದರಿಯಾಗಿದ್ದರು. ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಜವಾಬ್ದಾರಿಯನ್ನು ತಾವೇ ನಿರ್ವಹಿಸುತ್ತಿದ್ದರು. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ. ಅವರ ಕುಟುಂಬ ಸದಸ್ಯರಿಗೆ ಈ ಅತೀವ ದುಃಖ ಭರಿಸುವ ಶಕ್ತಿಯನ್ನು ದೇವರು ದಯಪಾಲಿಸಲಿ.

-ಜಿ.ಡಿ.ಹರೀಶ್‌ಗೌಡ, ಶಾಸಕ

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರಾಧ್ಯಕ್ಷರು, ಹಿರಿಯ ರಾಜಕೀಯ ಧುರೀಣರಾದ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ನಾಡಿಗೆ ಅಪಾರ ನಷ್ಟವಾಗಿದೆ ಸಮಾಜಕ್ಕೆ ತೊಂದರೆಯಾದಾಗ ಗಟ್ಟಿಯಾಗಿ ನಿಂತು ಮಾತನಾಡಬಲ್ಲಂತಹ ಧೀಮಂತ ರಾಜಕಾರಣಿ ಶಾಮನೂರು ಶಿವಶಂಕರಪ್ಪನವರು. ಇವರ ನಿಧನದಿಂದ ಸಮುದಾಯಕ್ಕೆ ಅಪಾರ ನಷ್ಟವಾಗಿದೆ.

– ಮ.ಗು.ಸದಾನಂದಯ್ಯ, ನಿವೃತ್ತ ಉಪನಿರ್ದೇಶಕ, ರಂಗಾಯಣ

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರಾಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ಸಮುದಾಯಕ್ಕೆ ಅಪಾರ ನಷ್ಟವಾಗಿದೆ ಆರು ಬಾರಿ ಶಾಸಕರಾಗಿ, ಒಮ್ಮೆ ಸಂಸದರಾಗಿ ನಾಡಿನ ಸೇವೆ ಸಲ್ಲಿಸಿದ್ದಾರೆ. ಇವರ ಅಗಲಿಕೆಯ ನೋವು ಭರಿಸುವ ಶಕ್ತಿ ಕುಟುಂಬಕ್ಕೆ ನೀಡಲಿ.

– ರೊ.ಎ.ಪಿ.ವಿರೂಪಾಕ್ಷ, ಪ್ರಧಾನ ಕಾರ್ಯದರ್ಶಿ, ವೀರವನಿತೆ ರಾಣಿ ಚೆನ್ನಮ್ಮ ಸ್ವಯಂ ಸೇವಾ ಸಂಸ್ಥೆ

ಶಾಮನೂರು ಶಿವಶಂಕರಪ್ಪರಿಗೆ ಮೈಸೂರಲ್ಲಿ ಶ್ರದ್ಧಾಂಜಲಿ



ಮೈಸೂರಲ್ಲಿ ವೀರಶೈವ ಸಮುದಾಯದ ಮುಖಂಡರು, ಶಾಮನೂರು ಶಿವಶಂಕರಪ್ಪ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಮೈಸೂರು, ಡಿ.14- ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆದ ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಅವರಿಗೆ ಮೈಸೂರಿನಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಕಲಾ ಬಳಗದ ವತಿಯಿಂದ ಭಾನುವಾರ ರಾತ್ರಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಸಂಘಟನೆಗಳ ಪ್ರಮುಖರು ಭಾಗವಹಿಸಿ, ನುಡಿನಮನ ಸಲ್ಲಿಸಿದರು.

ಮೈಸೂರು ಜಿಲ್ಲಾ ವೀರಶೈವ ಘಟಕದ ನಿರ್ದೇಶಕ ಕಲ್ಮಳ್ಳಿ ನಟರಾಜು ಮಾತನಾಡಿ, ಶಾಮನೂರು ಶಿವಶಂಕರಪ್ಪನವರು ರಾಜಕಾರಣಿಯಾಗಿ, ಉದ್ಯಮಿಯಾಗಿ, ಸಮಾಜ ಸೇವಕನಾಗಿ ನಾಡಿಗೆ ಸ್ಮರಣೀಯ ಕೊಡುಗೆ ನೀಡಿದ್ದಾರೆ. ಜೊತೆಗೆ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಅನನ್ಯ ಸೇವೆ ಸಲ್ಲಿಸಿದ್ದಾರೆ. ರಾಜಕೀಯ ಪಕ್ಷವೊಂದರ ನಿಷ್ಠಾವಂತ ನಾಯಕರಾಗಿದ್ದರೂ ಯಾವುದೇ ವಿಷಯವನ್ನು ದಿಟ್ಟತೆಯಿಂದ ನೇರವಾಗಿ ವ್ಯಕ್ತಪಡಿಸುತ್ತಿದ್ದರು ಎಂದರು.

ಬಾಪೂಜಿ ಶಿಕ್ಷಣ ಸಂಸ್ಥೆಯ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ವೀರಶೈವ ಲಿಂಗಾಯತ ಸಮುದಾಯದ ಬಗ್ಗೆ ಟೀಕೆ ಟಿಪ್ಪಣಿಗಳು ವ್ಯಕ್ತವಾದಾಗ, ಆಳುವ ಸರ್ಕಾರಗಳು ಸಮುದಾಯವನ್ನ ನಿರ್ಲಕ್ಷಿಸಿದಾಗ ಗಟ್ಟಿ ಧ್ವನಿಯಲ್ಲಿ ಖಂಡಿಸುತ್ತಿದ್ದರು. ಅಲ್ಲದೆ ಸಮಾಜದ ಎಲ್ಲಾ ಸಮುದಾಯಗಳ ಶ್ರೇಯೋಭಿವೃದ್ಧಿಯನ್ನೂ ಬಯಸಿ, ಆ ನಿಟ್ಟಿನಲ್ಲಿ ಶ್ರಮಿಸಿದ್ದಾರೆ. ಒಂದು ಶಕ್ತಿಯಾಗಿದ್ದ ಶಾಮನೂರು ಶಿವಶಂಕರಪ್ಪ ಅವರ ಅಗಲಿಕೆ ನಾಡಿಗೆ ಅಪಾರ ನಷ್ಟವನ್ನುಂಟು ಮಾಡಿದೆ ಎಂದು ವಿಷಾದಿಸಿದರು.

ಈ ವೇಳೆ ಮುಖಂಡರಾದ ಚಿಕ್ಕಳ್ಳಿ ಪುಟ್ಟಣ್ಣ, ಗೆರೆಹಳ್ಳಿ ದೊರೆಸ್ವಾಮಿ, ಲೋಹಿತ್ ದೊರೆಸ್ವಾಮಿ, ಪರಮೇಶ್ ಮಾಸ್ಟರ್, ಬಿ.ಎಸ್.ಶಿವಕುಮಾರ್, ಸುರೇಶ್ ಉಮ್ಮತ್ತೂರು, ಕೊತ್ತುವಾಡಿ ಸಿದ್ಧರಾಮೇಶ್, ಮಹೇಶ್ ಬಾನಹಳ್ಳಿ, ಮಂಜಣ್ಣ, ಹೆಚ್.ಎಂ. ವಿಜಯಕುಮಾರ್, ಸರಗೂರು ಚೇತನ್ ಕುಮಾರ್, ಪಾರ್ವತಪ್ಪ ಹುಲ್ಲಹಳ್ಳಿ, ಶ್ರೀಮತಿ ಚಿಕ್ಕರೇಖಾ, ಶಿವ ನಾಗಪ್ಪ ಕಬ್ಬಳ್ಳಿ, ತಳೂರು ಪ್ರಭುಸ್ವಾಮಿ, ಕರುಹಟ್ಟಿ ಮಲ್ಲಣ್ಣ ಮತ್ತಿತರರು ಶಾಮನೂರು ಶಿವಶಂಕರಪ್ಪ ಅವರಿಗೆ ನುಡಿನಮನ ಸಲ್ಲಿಸಿದರು.

ಮೆಸ್ಸಿ ಕಾರ್ಯಕ್ರಮದ ಮುಖ್ಯ ಆಯೋಜಕ 14 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ

ಕೋಲ್ಕತ್ತ, ಡಿ.14-ಫುಟ್‌ಬಾಲ್ ದಿಗ್ಗಜ, ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ತಮ್ಮ ಕಾರ್ಯಕ್ರಮವನ್ನು ಮೊಟಕುಗೊಳಿಸಿ, ಹಠಾತ್ತನೇ ನಿರ್ಗಮಿಸಿದ್ದರಿಂದ ನಿರಾಸೆಗೊಂಡ ಅವರ ಅಭಿಮಾನಿಗಳು ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ದಾಂಧಲೆ ನಡೆಸಿದ್ದರು. ಪ್ರಕರಣ ಸಂಬಂಧ ಬಂಧನಕ್ಕೊಳಗಾಗಿರುವ ಕಾರ್ಯಕ್ರಮದ ಮುಖ್ಯ ಆಯೋಜಕ ಶತಾದ್ರು ದತ್ತ ಅವರನ್ನು ಭಾನುವಾರ ಇಲ್ಲಿನ ನ್ಯಾಯಾಲಯ 14 ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೆಸ್ಸಿ ಮತ್ತು ಅವರ ತಂಡವನ್ನು ಹೈದರಾಬಾದ್‌ಗೆ ಬೀಳ್ಕೊಡಲು ಕೋಲ್ಕತ್ತ ವಿಮಾನ ನಿಲ್ದಾಣಕ್ಕೆ ತೆರಳಿದ್ದ ದತ್ತ ಅವರನ್ನು ಬಿಧಾನ್‌ನಗರ ಪೊಲೀಸರು ಶನಿವಾರ ಬಂಧಿಸಿದ್ದರು. ದತ್ತ ಅವರನ್ನು ನ್ಯಾಯಾಲಯಕ್ಕೆ ಕರೆದೊಯ್ಯುವ ವೇಳೆ ಬಿಜೆಪಿಯ ಬೆಂಬಲಿಗರು ನ್ಯಾಯಾಲಯದ ಹೊರಗೆ ಪ್ರತಿಭಟನೆ ನಡೆಸಿದ್ದಾರೆ.

ಘಟನೆಯ ಹಿನ್ನೆಲೆ: ನಿರೀಕ್ಷೆಗಿಂತಲೂ ಮುಂಚಿತವಾಗಿಯೇ ಮೆಸ್ಸಿ ಕ್ರೀಡಾಂಗಣದಿಂದ ನಿರ್ಗಮಿಸಿದ್ದರಿಂದ ರೊಚ್ಚಿಗೆದ್ದ ಅಭಿಮಾನಿಗಳು ಪ್ರೇಕ್ಷಕರ ಗ್ಯಾಲರಿಯಲ್ಲಿನ ಕುರ್ಚಿಗಳನ್ನು ಧ್ವಂಸಗೊಳಿಸಿ, ಮೈದಾನದತ್ತ ಎಸೆದಿದ್ದಾರೆ. ನೂರಾರು ಜನರು ತಡೆಗೋಡೆಗಳನ್ನು ದಾಟಿ ಕ್ರೀಡಾಂಗಣಕ್ಕೆ ನುಗ್ಗಿ,



ಪಿಚ್‌ಗೆ ಹಾನಿ ಮಾಡಿದ್ದಾರೆ. ಸಮೀಪದಲ್ಲಿಯೇ ಅಳವಡಿಸಿದ್ದ ಬ್ಯಾನರ್‌ಗಳು ಹಾಗೂ ಟೆಂಟ್‌ಗಳನ್ನು ಧ್ವಂಸಗೊಳಿಸಿದ್ದಾರೆ. ಮೆಸ್ಸಿ ಅವರು ಕ್ರೀಡಾಂಗಣದಿಂದ ನಿರ್ಗಮಿಸಿದ ಬೆನ್ನಲ್ಲೇ, ದತ್ತ ಸೇರಿದಂತೆ ಇತರ ಆಯೋಜಕರು ಕೂಡ ಸ್ಥಳದಲ್ಲಿ ಕಾಣಲಿಲ್ಲ. ಇದು ಪರಿಸ್ಥಿತಿ ಮತ್ತಷ್ಟು ಹದಗೆಡಲು ಕಾರಣವಾಯಿತು ಎಂದು ಕೆಲ ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಫುಟ್‌ಬಾಲ್ ದಿಗ್ಗಜ ಲಯೊನೆಲ್ ಮೆಸ್ಸಿ ಭಾಗವಹಿಸಿದ್ದ ಕಾರ್ಯಕ್ರಮವು ಗೊಂದಲದ ಗೂಡಾಗಿ, ಪ್ರೇಕ್ಷಕರ ಆಕ್ರೋಶಕ್ಕೆ ಗುರಿಯಾಗಿದ್ದ ಸಾಲ್ಟ್ ಲೇಕ್ ಕ್ರೀಡಾಂಗಣಕ್ಕೆ ಭೇಟಿ ನೀಡಲು ಮುಂದಾಗಿದ್ದ ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರಿಗೆ ಪ್ರವೇಶ ನಿರಾಕರಿಸಲಾಗಿದೆ

ಅಶೋಕಪುರಂ ಬಳಿ ಚಿರತೆ ವದಂತಿ

ಅರಣ್ಯ ಇಲಾಖೆ ಸಿಬ್ಬಂದಿ ಪರಿಶೀಲನೆ

ಮೈಸೂರು, ಡಿ.14- ಮೈಸೂರಿನ ಅಶೋಕಪುರಂ ಪ್ರದೇಶದಲ್ಲಿ ಭಾನುವಾರ ಚಿರತೆ ಪತ್ತೆಯಾಗಿದೆ ಎಂಬ ವದಂತಿ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಪರಿಶೀಲನೆ ನಡೆಸುತ್ತಿದ್ದಾರೆ.

ಅಶೋಕಪುರಂನಲ್ಲಿರುವ ಗಂಧದ ಎಣ್ಣೆ ಕಾರ್ಖಾನೆ ಬಳಿ ಭಾನುವಾರ ಸಂಜೆ ಚಿರತೆ ಕಾಣಿಸಿಕೊಂಡಿದೆ ಎಂದು ಹಲವರು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದು, ಕೆಲ ಸ್ಥಳೀಯರೂ ಚಿರತೆಯನ್ನು ನೋಡಿದ್ದಾರೆಂದು ಹೇಳಲಾಗುತ್ತಿದೆ.

ಸಾರ್ವಜನಿಕರಿಂದ ಮಾಹಿತಿ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ತೆರಳಿ, ಪರಿಶೀಲನೆ ನಡೆಸಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಅಶೋಕಪುರಂ, ಜಯನಗರ, ಶ್ರೀರಾಂಪುರ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಎಚ್ಚರಿಕೆಯಿಂದ ಓಡಾಡುವಂತೆ ಸೂಚಿಸಲಾಗಿದೆ. ಈ ಬಗ್ಗೆ ಪೊಲೀಸರೂ ಸಾರ್ವಜನಿಕರಿಗೆ ಜಾಗೃತಿ ಮೂಡಿಸುತ್ತಿದ್ದಾರೆ. ಕ್ಷಿಪ್ರ ಚಿರತೆ ಕಾರ್ಯಪಡೆ, ಅಶೋಕಪುರಂ ರೈಲ್ವೆ ಹಳಿ ಭಾಗದಲ್ಲಿ ಪರಿಶೀಲನೆ ನಡೆಸುತ್ತಿರುವುದಾಗಿ ತಿಳಿದುಬಂದಿದೆ. ಆದರೆ ಈ ಬಗ್ಗೆ ಖಚಿತತೆಗೆ ಅರಣ್ಯ ಇಲಾಖೆ ಹಾಗೂ ಪೊಲೀಸ್ ಅಧಿಕಾರಿಗಳ ಸಂಪರ್ಕ ಸಾಧ್ಯವಾಗಿಲ್ಲ.

ನಿರ್ಮಾಣ ಹಂತದ ದೇಗುಲ ಕುಸಿತ: ಭಾರತೀಯನ ಸಾವು

ಜೊಹಾನ್ಸ್‌ಬರ್ಗ್: ದಕ್ಷಿಣ ಆಫ್ರಿಕಾದ ಕ್ವಾಜುಲು-ನತಾಲ್ ಪ್ರಾಂತ್ಯದಲ್ಲಿ ನಿರ್ಮಾಣ ಹಂತದ ನಾಲ್ಕು ಅಂತಸ್ತಿನ ಹಿಂದೂ ದೇವಾಲಯ ಕುಸಿದಿದ್ದು, ನಾಲ್ವರು ಮೃತಪಟ್ಟಿದ್ದಾರೆ.

ನಿರ್ಮಾಣ ಹಂತದ ಅಹೋಬಿಲಂ ದೇವಸ್ಥಾನದ ಕಟ್ಟಡ ಕುಸಿದು ಈ ದುರ್ಘಟನೆ ಸಂಭವಿಸಿದೆ. ಭಾರತೀಯ ಸಂಜಾತ ವಿಕ್ಕಿ ಜೈರಾಜ್ ಪಾಂಡೆ (52) ಸಹ ಈ ದುರ್ಘಟನೆಯಲ್ಲಿ ಮೃತರಾಗಿದ್ದು, ದೇವಾಲಯದ ಟ್ರಸ್ಟ್‌ನ ಕಾರ್ಯನಿರ್ವಾಹಕ ಸದಸ್ಯ ಹಾಗೂ ನಿರ್ಮಾಣ ಯೋಜನೆಯ ವ್ಯವಸ್ಥಾಪಕರಾಗಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಒಬ್ಬ ಕುಡುಕ : ಲೇ ಮೇಲಿರೋದು ಸೂರ್ಯನ, ಚಂದ್ರನಾ?
ಇನ್ನೊಬ್ಬ ಕುಡುಕ : ನಂಗೊತ್ತಿಲ್ಲ... ನಾನು ಈ ಊರಿಗೆ ಹೊಸಬ

ಮೈಸೂರು ಮಿತ್ರ

ಸೋಮವಾರ, 15 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಇಲ್ಲಿ ಪ್ರತಿಯೊಂದು ಪ್ರತಿಬಿಂಬವೇ...
ನೀವು ನೀಡಿದ್ದು, ನಿಮಗೆ ಮರಳುವುದು...

ವೇದ ಸುಳ್ಳಾದರೂ { ಆಟಕ್ಕುಂಟು
ಗಾದೆ ಸುಳ್ಳಾಗದು { ಲೆಕ್ಕಕ್ಕಿಲ್ಲ

ನಿಮ್ಮ ಪತ್ರಗಳು

ಮುಖ್ಯಮಂತ್ರಿಗೆ ತಕ್ಕದಾದ ಹೇಳಿಕೆಯಲ್ಲ

ಮಾನ್ಯರೇ

ಬೆಳಗಾವಿ ವಿಧಾನಸಭಾ ಅಧಿವೇಶನದಲ್ಲಿ ಹುಬ್ಬಳ್ಳಿ ಶಾಸಕ ಮಹೇಶ್ ತೆಂಗಿನಕಾಯಿ ಅವರ ಪ್ರಶ್ನೆ ಒಂದಕ್ಕೆ ಉತ್ತರಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಆಗಸ್ಟ್‌ವರೆಗೂ ಗೃಹಲಕ್ಷ್ಮಿ ಯೋಜನೆಯ ಹಣ ಪಾವತಿ ಮಾಡಲಾಗಿದೆ ಎಂದು ತಪ್ಪು ಮಾಹಿತಿ ನೀಡಿದ್ದಾರೆ.

ಈ ಬಗ್ಗೆ ಸವಿವರವಾದ ಮಾಹಿತಿ ಸಂಗ್ರಹಿಸಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಗೃಹಲಕ್ಷ್ಮಿ ಯೋಜನೆಯಡಿ ಹಣ ಪಾವತಿಯಾಗಿಲ್ಲ ಎಂದು ಸಾಕ್ಷಿ ಸಮೇತ ಮಹೇಶ್ ತೆಂಗಿನಕಾಯಿ ಅವರು ಪ್ರತಿಪಾದಿಸಿದರು. ಇದು ಸದನಕ್ಕೆ ಸಚಿವರು ನೀಡಿರುವ ತಪ್ಪು ಮಾಹಿತಿ ಹಾಗೂ ಇದರಿಂದ ಹಕ್ಕುಚ್ಯುತಿ ಆಗುತ್ತದೆ ಎಂದು ಹೇಳಿ, ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಏನು ಹೇಳುತ್ತಾರೆ ಎಂದು ವಿರೋಧಪಕ್ಷದ ನಾಯಕ ಅಶೋಕ್ ಅವರು ಪ್ರಶ್ನಿಸಿದರೆ, ಯಥಾಪ್ರಕಾರ ಸಿದ್ದರಾಮಯ್ಯನವರು ತಮ್ಮ ಮೊಂಡುವಾದವನ್ನು ಮಂಡಿಸುತ್ತಾ ಗ್ಯಾರಂಟಿ ಯೋಜನೆ ವಿರೋಧಿಸಿದ ಬಿಜೆಪಿಯವರು ಗ್ಯಾರಂಟಿ ಹಣದ ಬಗ್ಗೆ ಯಾಕೆ ಪ್ರಸ್ತಾಪ ಮಾಡುತ್ತೀರಿ ಎಂದು ಪ್ರತ್ಯುತ್ತರ ನೀಡಿದ್ದಾರೆ. ಇದು 43 ವರ್ಷದಿಂದ ರಾಜಕೀಯದಲ್ಲಿರುವ ಒಬ್ಬ ಶಾಸಕ, ವಿರೋಧ ಪಕ್ಷದ ನಾಯಕ, ಮಂತ್ರಿ, ಮುಖ್ಯಮಂತ್ರಿ ಎಲ್ಲಾ ಸ್ಥಾನಗಳನ್ನು ಅನುಭವಿಸಿರುವ ಜವಾಬ್ದಾರಿ ನಾಯಕನಿಗೆ ತಕ್ಕದಾದ ಮಾತಲ್ಲ.

ಯಾವುದೇ ಸರಕಾರಿ ಯೋಜನೆಯನ್ನು ವಿರೋಧಪಕ್ಷಗಳು ವಿರೋಧಿಸಿದವು ಎಂದಾಕ್ಷಣ ಆ ಯೋಜನೆ ಬಗ್ಗೆ ಪ್ರಶ್ನಿಸಬಾರದೆಂಬ ಮುಖ್ಯಮಂತ್ರಿಗಳ ಧೋರಣೆ ಅವರ ಘನತೆಗೆ ತಕ್ಕದ್ದಲ್ಲ ಎಂಬುದು ಸಾರ್ವಜನಿಕರಲ್ಲಿ ಚರ್ಚೆಯಾಗುತ್ತಿದೆ. ಜವಾಬ್ದಾರಿ ಸ್ಥಾನದಲ್ಲಿ ಇದ್ದುಕೊಂಡು ತಾವು ಏನು ಮಾತನಾಡುತ್ತಿದ್ದೇವೆ ಎಂಬ ಪರಿಜ್ಞಾನವನ್ನು ಇಟ್ಟುಕೊಳ್ಳದ ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ರಾಜ್ಯದ ಜನತೆಗೆ ಅವಮಾನ ಮಾಡಿದ್ದಾರೆ.ಈ ಬಗ್ಗೆ ಹೊಂದಾಣಿಕೆ ರಾಜಕಾರಣ ಮಾಡುತ್ತಿರುವ ಬಿಜೆಪಿ ಪಕ್ಷದವರು ಪ್ರಬಲವಾಗಿ ಪ್ರತಿಭಟಿಸಿ ಮುಖ್ಯಮಂತ್ರಿಗಳು ಈ ಕೂಡಲೇ ಕ್ಷಮೆ ಕೇಳಬೇಕೆಂದು ಅಗ್ರಹಿಸುವುದನ್ನು ಬಿಟ್ಟು ಮಾಮೂಲಿಯಾಗಿ ಏನೂ ಆಗಿಲ್ಲವೆಂಬಂತೆ ನಡೆದುಕೊಳ್ಳುತ್ತಿರುವುದು ರಾಜ್ಯದ ಜನತೆಯ ವಿಪರ್ಯಾಸ.

ಮಾತು ಮಾತಿಗೂ ಸಂವಿಧಾನ ಉಳಿಸಿ ಎಂದು ಬೊಬ್ಬೆ ಹಾಕುತ್ತಾ, ಮೋದಿ ಸರ್ಕಾರ ಸಂವಿಧಾನಿಕ ಸಂಸ್ಥೆಗಳಿಗೆ ಗೌರವ ಕೊಡುತ್ತಿಲ್ಲ ಎಂದು ಆಲಾಪಿಸುವ ಇವರ ನಾಯಕನಿಗೆ ಇವರ ಸರ್ಕಾರವೇ ಇರುವ ಕರ್ನಾಟಕದ ಮುಖ್ಯಮಂತ್ರಿ ಇಂತಹ ಉದ್ಧಟತನದ ಹೇಳಿಕೆಗಳು ಮುಜುಗರ ತರುತ್ತಿಲ್ಲವೇ? ಈ ಕಟು ಸತ್ಯವನ್ನು ಬಹಿರಂಗವಾಗಿ ಹೇಳಿ ರಾಜಣ್ಣನವರಂತೆ ಮಂತ್ರಿ ಪದವಿ ಕಳೆದುಕೊಳ್ಳುವ ತಾಕತ್ತು ಯಾರಿಗಾದರೂ ಇದೆಯೇ?

ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಕನಿಷ್ಠ ತಾವು ನೀಡಿರುವ ಮಾಹಿತಿ ತಪ್ಪು ಎಂದು ಒಪ್ಪಿಕೊಳ್ಳುವ ಸೌಜನ್ಯವನ್ನು ತೋರಿಸದೇ ಪದೇ ಪದೆ ಸುಳ್ಳು ಹೇಳುತ್ತಿರುವುದು ಅಕ್ಷಮ್ಯ. ಸ್ಪೀಕರ್ ನಿಷ್ಪಕ್ಷಪಾತವಾಗಿ ಸದನ ನಡೆಸುವುದೇ ಆದರೆ ಸಚಿವರಿಗೆ ತಾಕೀತು ಮಾಡಬೇಕಿದೆ.

– ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ಶಿಸ್ತಿನ ಪಕ್ಷ ಕಾಂಗ್ರೆಸ್‌ಗೆ ನಾಚಿಕೆಯಾಗಬೇಕು

ಮಾನ್ಯರೆ,

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯ ಬಗ್ಗೆ ಯಾವ ಶಾಸಕರೂ, ಮಂತ್ರಿಗಳು ಬಹಿರಂಗವಾಗಿ ಹೇಳಿಕೆ ನೀಡಬಾರದೆಂದು, ಕಾಂಗ್ರೆಸ್ ಹೈಕಮಾಂಡ್ ತಮ್ಮ ಪಕ್ಷದ ಶಾಸಕರು, ಮಂತ್ರಿಗಳು ಮತ್ತು ನಾಯಕರಿಗೆ ಎಚ್ಚರಿಕೆ ನೀಡಿದ್ದರೂ ಸಹ ಯಾವ ಶಾಸಕರೂ ಹೈಕಮಾಂಡ್‌ಗೆ ಕ್ಯಾರೆ ಎನ್ನದೆ, ದಿನಕ್ಕೊಂದು ಹೇಳಿಕೆ ನೀಡುತ್ತಿರುವುದನ್ನು ನೋಡಿದರೆ, ಇದು ಹೈಕಮಾಂಡ್ ಅಲ್ಲ 'ಲೋಕಮಾಂಡ್' ಎನ್ನುವಂತಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ, ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ, ಮುಖ್ಯಮಂತ್ರಿ ಬದಲಾವಣೆಗೆ ಹೈಕಮಾಂಡ್ ಒಪ್ಪಿಲ್ಲ, ಅವರು ಮುಖ್ಯಮಂತ್ರಿಯಾಗಿ ಐದು ವರ್ಷಗಳನ್ನು ಪೂರೈಸುತ್ತಾರೆ ಎಂದು ಮಾಧ್ಯಮಗಳ ಮುಂದೆ ಹೇಳಿದ್ದಾರೆ. ಇದಕ್ಕೆ ಕೌಂಟರ್ ಕೊಟ್ಟಿರುವ ರಾಮನಗರದ ಶಾಸಕ ಇಕ್ಬಾಲ್ ಹುಸೇನ್ ಮುಂದಿನ ತಿಂಗಳ ಜನವರಿ 6ನೇ ತಾರೀಖು ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಮುಖ್ಯಮಂತ್ರಿ ಆಗುತ್ತಾರೆ ಎಂದು ಹೇಳುತ್ತಾರೆ. ಈ ನಡುವೆ ಶಾಸಕರ ಡಿನ್ನರ್ ಪಾರ್ಟಿಗಳು ಸಹ ನಡೆಯುತ್ತಿವೆ. ಇವೆಲ್ಲವನ್ನೂ ಗಮನಿಸಿದರೆ, ಕಾಂಗ್ರೆಸ್ ಪಕ್ಷದ ಹೈಕಮಾಂಡ್‌ಗೆ ಕವಡೆ ಕಾಸಿನ ಬೆಲೆಯು ಇಲ್ಲದಂತಾಗಿದೆ. ನಮ್ಮದು ಶಿಸ್ತಿನ ಪಕ್ಷ ಎಂದು ಹೇಳಿಕೊಳ್ಳುವವರಿಗೆ ನಾಚಿಕೆಯಾಗಬೇಕು.

– ಬೂಕನಕೆರೆ ವಿಜೇಂದ್ರ, ಕುವೆಂಪು ನಗರ ಮೈಸೂರು

ಶಾಶ್ವತ ವಿಶೇಷ ಕೃಷಿ ವಲಯ ಕಾನೂನು ಬಾಹಿರ

ಮಾನ್ಯರೇ,

ಶಾಶ್ವತ ವಿಶೇಷ ಕೃಷಿ ವಲಯ ಎಂಬ ಯೋಜನೆ ರಾಜ್ಯಾದಂತ ಚರ್ಚೆಗೆ ಗ್ರಾಸವಾಗಿದ್ದು, ಈ ಯೋಜನೆ ಕಾನೂನು ಬಾಹಿರವಾಗಿದೆ. ಶಾಶ್ವತ ವಿಶೇಷ ಕೃಷಿ ವಲಯವನ್ನು ಸ್ಥಾಪಿಸಲು ಸರಕಾರವು ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸುವುದು ಅಸಮಂಜಸ. ಇದು ರೈತರ ಮೂಲಭೂತ ಹಕ್ಕುಗಳಿಗೆ ದಕ್ಕೆ ಉಂಟು ಮಾಡುತ್ತದೆ. ಇನ್ನು ಭೂಸ್ವಾಧೀನ ಕಾಯ್ದೆಯು ರೈತರ ಭೂಮಿಯನ್ನು ಕಾನೂನುಬದ್ಧವಾಗಿ ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಪ್ರತಿಪಾದಿಸುತ್ತದೆ. ರೈತರು ತಮ್ಮ ಭೂಮಿಯನ್ನು ಕಡ್ಡಾಯವಾಗಿ ನೀಡುವ ಅಗತ್ಯವಿಲ್ಲ, ಮತ್ತು ಈ ಶಾಶ್ವತ ವಿಶೇಷ ಕೃಷಿ ವಲಯ ಯೋಜನೆಯು ಈ ಪರಿಕಲ್ಪನೆಗೆ ವಿರುದ್ಧವಾಗಿದೆ. ಉದಾಹರಣೆಗೆ ಇತ್ತೀಚೆಗೆ ದೇವನಹಳ್ಳಿ ತಾಲೂಕಿನಲ್ಲಿ ನಡೆಯುತ್ತಿರುವ ಭೂಸ್ವಾಧೀನ ಮತ್ತು 'ಶಾಶ್ವತ ವಿಶೇಷ ಕೃಷಿ ವಲಯ' ಕುರಿತು ಸರಕಾರದ ದೂರ್ತ ನೀತಿ ಆತಂಕ ಉಂಟುಮಾಡಿದೆ. ಕೆಟ್ಟ ರಾಜಕೀಯ ಪ್ರೇರಿತ ಸರಕಾರದ ಕೃಷಿ ನೀತಿಗಳು ರೈತರಲ್ಲಿ ಗೊಂದಲ ಉಂಟುಮಾಡಿವೆ.

ಇನ್ನೂ 'ಶಾಶ್ವತ ವಿಶೇಷ ಕೃಷಿ ವಲಯ' ಸ್ಥಾಪನೆಯು ಪರಿಸರದ ಮೇಲೆ ಮತ್ತು ಕೃಷಿಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುವ ಸಾಧ್ಯತೆ ಇದೆ. ಸರಕಾರ ಯಾವುದೇ ಯೋಜನೆಗಳನ್ನು ಜಾರಿಗೊಳಿಸುವ ಮೊದಲು ರೈತರ ಅಭಿಪ್ರಾಯಗಳನ್ನು ಗೌರವಿಸುವುದು ಅವಶ್ಯವಾಗಿದೆ. ರೈತರ ಅಭಿಪ್ರಾಯ ಮತ್ತು ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಪರಿಷ್ಕೃತ ನೀತಿಗಳನ್ನು ರೂಪಿಸುವುದು ಅತ್ಯಂತ ಅಗತ್ಯವಾಗಿದೆ.

– ಡಾ.ವಿಜಯಕುಮಾರ ಎಚ್.ಕೆ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಜೀವನ ನೋಡುವ ಕ್ರಮ ಬದಲಾದಾಗ ದೊರೆವುದು ಆನಂದ!!



“ಬದಲಾವಣೆ ಜಗದ ನಿಯಮ ಎಂಬ ಮಾತಿದೆ. ಅದು ಸಾಮಾನ್ಯವಾಗಿ ಪ್ರಕೃತಿಗೆ ಅನ್ವಯವಾಗುತ್ತದೆ. ನಮ್ಮ ಪ್ರಕೃತಿಯಲ್ಲಿ ಮಳೆಗಾಲ, ಚಳಿಗಾಲ, ಬೇಸಿಗೆಯ ಕಾಲ ಎಂಬುದು ನಿರಂತರವಾಗಿ ಬರುತ್ತಿರುತ್ತದೆ. ಚಳಿಗಾಲದಲ್ಲಿ ಗಿಡಮರಗಳ ಎಲೆ ಉದುರಿ ಬೋಲಾಗಿ ನಿಲ್ಲುತ್ತವೆ. ಅದೇ ಬೇಸಿಗೆಯಲ್ಲಿ ಎಲೆಗಳು ಚಿಗುರಿ ಮಂದಹಾಸ ಬೀರುತ್ತವೆ. ಮಳೆಗಾಲದಲ್ಲಿ ಬರುವ ನೀರನ್ನು ಹೀರಿಕೊಂಡು ಮರ–ಗಿಡಗಳು ಸಮೃದ್ಧವಾಗಿ ಬೆಳೆಯುತ್ತವೆ. ಇದು ಒಂದು ರೀತಿ ಪ್ರಕೃತಿಯ ನಿಯಮ. ಆದರೆ ನಾವು ಮನುಷ್ಯರೂ ಹೀಗೆ ಕಾಲಕ್ಕೆ ತಕ್ಕಂತೆ ಬದಲಾಗುವುದು ಸಾಧ್ಯವೂ ಇಲ್ಲ; ಸೂಕ್ತವೂ ಅಲ್ಲ.

ನಾವು ನಮ್ಮ ಜೀವನದಲ್ಲಿ ನಮ್ಮದೇ ಆದ ಹಲವು ಕ್ರಮಗಳನ್ನು ಅನುಸರಿಸುತ್ತಿರುತ್ತೇವೆ. ಅದರಲ್ಲಿ ಕೆಲವೊಂದು ನಮ್ಮ ಬಾಲ್ಯದಿಂದಲೇ ನಮ್ಮ ಜೊತೆಗೆ ಬಂದಿದ್ದರೆ, ಕೆಲವೊಂದನ್ನು ಬಳಿಕ ನಾವೇ ರೂಢಿಸಿಕೊಂಡಿರುತ್ತೇವೆ. ಹೀಗೆ ರೂಢಿಸಿಕೊಳ್ಳುವುದು ಆ ಕ್ರಮ ನಮಗೆ ಚೆನ್ನಾಗಿದೆ ಅನಿಸಿದಾಗ. ಅದು ನಮಗೆ ಮಾತ್ರ ಹಾಗೆ ಅನಿಸಿರಬಹುದು, ಅದು ಇತರರಿಗೆ ಸರಿ ಎನಿಸದೇ ಇರಬಹುದು. ನನಗೆ ಇಷ್ಟ ಎಂದಾದಾಗ ಮನಸ್ಸು ಅದರಂತೆ ನೀನೂ ನಡೆ ಎಂದು ಹೇಳುತ್ತದೆ. ಅದರಂತೆ ನಾವು ನಡೆದುಕೊಳ್ಳುತ್ತೇವೆ.

ನಮ್ಮ ಆರ್ಥಿಕ ಸ್ಥಿತಿ ಉತ್ತಮವಾಗುತ್ತಾ ಹೋದಂತೆಯೂ ನಮ್ಮ ಅನೇಕ ಸ್ವಭಾವಗಳು ಬದಲಾಗುತ್ತಾ ಹೋಗುತ್ತವೆ. ಸಾಮಾನ್ಯವಾಗಿ ನಮ್ಮಲ್ಲಿ ಹೇಳುವ ಮಾತು ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲ ಎಂದು. ಇದು ಸ್ವಲ್ಪ ಪ್ರಮಾಣದಲ್ಲಿ ನಿಜವೂ ಹೌದು. ನಾನು ಮಾಡುತ್ತಿರುವುದು ತಪ್ಪು ಎಂದಾದಾಗ, ಅದರಿಂದ ನನಗೆ ಅಥವಾ ನನ್ನನ್ನು ನಂಬಿದವರಿಗೆ ತೊಂದರೆ ಆಗುತ್ತಿದೆ ಎಂದಾದಾಗ ಮಾತ್ರ ಅದನ್ನು ಬದಲಿಸಿಕೊಳ್ಳಲು ಪ್ರಯತ್ನಿಸಬಹುದು. ಇಲ್ಲದಿದ್ದರೆ ಆ ಸ್ವಭಾವ ನಮ್ಮೊಡನೆ ನಿರಂತರವಾಗಿ ಮುಂದುವರೆದಿರುತ್ತದೆ.

ನಾವು ನಮ್ಮ ಜೀವನದಲ್ಲಿ ಹಲವರಿಂದ ಹಾಗೂ ಹಲವು ಸಂಗತಿಗಳಿಂದ ನಿರಂತರವಾಗಿ ಪಾಠವನ್ನು ಕಲಿಯುವ ಅವಕಾಶಗಳು ದೊರಕುತ್ತಿರುತ್ತವೆ. ಅದನ್ನು ಸರಿಯಾಗಿ ಗಮನಿಸಿದರೆ ಖಂಡಿತಾ ನಮ್ಮಲ್ಲಿ ಒಂದಷ್ಟು ಬದಲಾವಣೆ ತಂದುಕೊಳ್ಳಬಹುದು. ಬದಲಾಗಿ ನಾನು ಮಾಡಿದ್ದೇ ಸರಿ ಎಂಬ ಮನೋಭಾವ ಇದ್ದರೆ ನಮ್ಮನ್ನು ಯಾರೂ ಬದಲಿಸಲಾರರು. ನಾವು ಆರ್ಥಿಕವಾಗಿ ಸಬಲರಾಗಿದ್ದರೆ, ನಮ್ಮಿಂದ ಏನಾದರೂ ಸಹಾಯವಾಗಬಹುದೆಂಬ ಉದ್ದೇಶದಿಂದ ನಮ್ಮ ಸುತ್ತಾ ಸುತ್ತುವವರು ನಮ್ಮ ಕೆಟ್ಟ ಗುಣಗಳನ್ನು ಹಾಡಿ ಹೊಗಳಿ ನಮ್ಮ ದಾರಿ ತಪ್ಪಿಸುವ ಸಾಧ್ಯತೆಗಳು ಸಾಕಷ್ಟು ಇರುತ್ತವೆ. ಇಲ್ಲಿ ನಮ್ಮ ವಿವೇಚನೆ ಕೆಲಸ ಮಾಡಬೇಕು. ಸರಿ ತಪ್ಪುಗಳ ನಿರ್ಧಾರ ನಿರಂತರವಾಗಿ ಹಾಗೂ ಆಂತರಿಕವಾಗಿ ನಡೆಯುತ್ತಲೇ ಇರಬೇಕು.

ನಮ್ಮ ಆರ್ಥಿಕ ಸ್ಥಿತಿ ಉತ್ತಮವಾದಂತೆ ಸಾಮಾನ್ಯವಾಗಿ ನಮ್ಮ ಮನಸ್ಥಿತಿಗಳೂ ಬದಲಾಗುತ್ತವೆ. ಬಡತನದಲ್ಲಿದ್ದಾಗ ಇದ್ದಂತಹ ಅನುಸರಿಸಿಕೊಂಡು ಹೋಗುವ ಸ್ವಭಾವ ಹಣ ಸಂಗ್ರಹವಾದಂತೆ ಬದಲಾಗುತ್ತದೆ. ಇದು ತಪ್ಪು ಎಂದಲ್ಲ. ಮೊದಲು ಹಣದ ತೊಂದರೆಯಿಂದ ಜೀವನವನ್ನು ಅದಕ್ಕೆ ತಕ್ಕಂತೆ ನಡೆಸಿಕೊಂಡು ಹೋಗುತ್ತಿರುತ್ತೇವೆ. ಆದರೆ ಹಣ ಕೈಸೇರುತ್ತಿದ್ದಂತೆ ನಮ್ಮೆಲ್ಲಾ ಸ್ವಭಾವಗಳು ಬದಲಾಗಬೇಕು ಎಂದೇನಿಲ್ಲ. ಹಲವು ಸಲ ಹಣದ ಕಾರಣ ನಾವು ನಮ್ಮ ಸ್ವಭಾವ ಬದಲಿಸಿಕೊಂಡು ಅಪಹಾಸ್ಯಕ್ಕೂ ಗುರಿಯಾಗುವುದೂ ಉಂಟು. ಇದಕ್ಕೆ ನಮ್ಮ ಕನ್ನಡದ ಸೊಗಸಾದ ಮಾತು ಐಶ್ವರ್ಯ ಬಂತು ಎಂದು ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿದಂತೆ. ಬಿಸಿಲು, ಮಳೆಯ ರಕ್ಷಣೆಗೆ ಹಿಡಿಯಬೇಕಾದ ಕೊಡೆಯನ್ನು ಅರ್ಧ ರಾತ್ರಿಯಲ್ಲಿ ಹಿಡಿದರೆ ಅಪಹಾಸ್ಯಕ್ಕೆ ಗುರಿಯಾಗಬೇಕಾಗುತ್ತದೆ.

ಬದಲಾವಣೆ ಜಗದ ನಿಯಮ ಎಂಬ ಮಾತಿದೆ. ಅದು ಸಾಮಾನ್ಯವಾಗಿ ಪ್ರಕೃತಿಗೆ ಅನ್ವಯವಾಗುತ್ತದೆ. ನಮ್ಮ ಪ್ರಕೃತಿಯಲ್ಲಿ ಮಳೆಗಾಲ, ಚಳಿಗಾಲ, ಬೇಸಿಗೆಯ ಕಾಲ ಎಂಬುದು ನಿರಂತರವಾಗಿ ಬರುತ್ತಿರುತ್ತದೆ. ಚಳಿಗಾಲದಲ್ಲಿ ಗಿಡ–ಮರಗಳ ಎಲೆ ಉದುರಿ ಬೋಲಾಗಿ ನಿಲ್ಲುತ್ತವೆ. ಅದೇ ಬೇಸಿಗೆಯಲ್ಲಿ ಎಲೆಗಳು ಚಿಗುರಿ ಮಂದಹಾಸ ಬೀರುತ್ತವೆ. ಮಳೆಗಾಲದಲ್ಲಿ ಬರುವ ನೀರನ್ನು ಹೀರಿಕೊಂಡು ಮರ–ಗಿಡಗಳು ಸಮೃದ್ಧವಾಗಿ ಬೆಳೆಯುತ್ತವೆ. ಇದು ಒಂದು ರೀತಿ ಪ್ರಕೃತಿಯ ನಿಯಮ. ಆದರೆ ನಾವು ಮನುಷ್ಯರೂ ಹೀಗೆ ಕಾಲಕ್ಕೆ ತಕ್ಕಂತೆ ಬದಲಾಗುವುದು ಸಾಧ್ಯವೂ ಇಲ್ಲ; ಸೂಕ್ತವೂ ಅಲ್ಲ.

ನಮ್ಮಲ್ಲಿ ಬಡತನದಿಂದ ಮೇಲೆ ಬಂದವರಿಗೆ ಹೆಚ್ಚಿನ ಹಣ ಸೇರುತ್ತಿದ್ದಂತೆ ಆ ಹಣವನ್ನು ಏನು ಮಾಡುವುದು ಎಂಬುದು ತಿಳಿಯುವುದಿಲ್ಲ. ನಾವು ಕಂಡಂತೆ ಮುತ್ತಾತ, ತಾತ, ತಂದೆ ಮಾಡಿಟ್ಟ ಆಸ್ತಿ ಮಾರಿದಾಗ ಬರುವ ದುಡ್ಡನ್ನು ಏನು ಮಾಡುವುದು ಎಂದು ತಿಳಿಯದವರು, ಅದನ್ನು ಮನಬಂದಂತೆ ಖರ್ಚು ಮಾಡುತ್ತಾರೆ. ನಮ್ಮ ಸುತ್ತಮುತ್ತಾ ಈಗ ಜಮೀನುಗಳ ಬೆಲೆ ಜಾಸ್ತಿಯಾಗುತ್ತಿದೆ. ಹಿಂದೆ ಅದರ ಬೆಲೆ ಎಕರೆಗೆ ಸಾವಿರವಿದ್ದದ್ದು ಲಕ್ಷಕ್ಕೆ ಏರಿ ಈಗ ಕೋಟಿಗಳಲ್ಲಿ ವ್ಯಾಪಾರವಾಗುತ್ತಿದೆ. ಇಷ್ಟೊಂದು ಹಣ ದೊರಕುತ್ತದೆ ಎಂಬ ದುರಾಸೆಯಿಂದ ಹಲವರು ಜಮೀನು ಮಾರುತ್ತಾರೆ. ಅದು ತಾವೇ ಸಂಪಾದಿಸಿದ್ದರೆ ಅವರಲ್ಲಿ ಹಣ ಬಂದಾಗ ಅಹಂ ಬರುವುದಿಲ್ಲ. ಅದು ಪಿತ್ರಾರ್ಜಿತವಾಗಿದ್ದರೆ ಅರ್ಥಾತ್ ಬಳುವಳಿಯಾಗಿ ಬಂದಿದ್ದರೆ ಹಣದ ಬೆಲೆ ತಿಳಿಯದಂತಾಗಿರುತ್ತದೆ. ಹೀಗೆ ಹಣ ಕೈ ಸೇರಿದಾಗ ಮನಸ್ಸು ಅಡ್ಡದಾರಿಗೆ ಎಳೆದುಕೊಂಡು ಹೋಗುತ್ತದೆ. ಅಲ್ಲಿಯವರೆಗೆ ಒಂದು ರೀತಿ ಬಡತನದಲ್ಲಿ ಬೆಳೆದ ಜೀವನ ಪದ್ಧತಿ ಇದ್ದಕ್ಕಿದ್ದಂತೆಯೇ ಬದಲಾಗಿ ಬಿಡುತ್ತದೆ. ಅಲ್ಲಿಯವರೆಗೆ ಹಣವನ್ನು ತೂಗಿ ಖರ್ಚು ಮಾಡುತ್ತಿದ್ದವರು, ಹಣ ಬಂದಂತೆ, ಮನ ಬಂದಂತೆ ಖರ್ಚು ಮಾಡುವುದು, ಶೋಕಿ ಮಾಡುವುದನ್ನು ನಾವು ಕಾಣುತ್ತೇವೆ. ಇಂತಹ ಮನೋಭಾವ ಬಂದರೆ ಉದ್ಧಾರವಾಗುವುದು ಕಡಿಮೆಯೇ.

ಹಿಂದೆ ಒಬ್ಬರಿಗೆ ಒಂದು ಪಂಥಾಹ್ವಾನ ನೀಡಲಾಗಿತ್ತು. ಪ್ರತಿದಿನ ಬೆಳಿಗ್ಗೆ ಅವರಿಗೆ ಹತ್ತು ಸಾವಿರ ರೂಪಾಯಿ ನೀಡಲಾಗುತ್ತದೆ. ನಿಯಮ ಎಂದರೆ ಅವರು ಅದನ್ನು ಅದೇ ದಿನ ಖರ್ಚು ಮಾಡಬೇಕು. ಇದಕ್ಕೆ ಸೇರಿಸಿದ್ದ ಮತ್ತೊಂದು ನಿಯಮ ಎಂದರೆ, ಈ ಹಣದಲ್ಲಿ ಏನನ್ನೂ ಖರೀದಿಸುವಂತಿಲ್ಲ, ಖರ್ಚು ಮಾಡಬಹುದು. ಆರಂಭದಲ್ಲಿ ಹಣದಲ್ಲಿ ಚೆನ್ನಾಗಿ ತಿಂದು ಉಂಡು ಮಾಡಿದ್ದಾಯಿತು. ದಿನಗಳೆದಂತೆ ಹಾಗೆ ತಿನ್ನಲು ಸಾಧ್ಯವಾಗುವುದಿಲ್ಲ. ಪದಾರ್ಥ ಖರೀದಿಸುವಂತಿಲ್ಲ ಎಂದಾದಾಗ ಏನು ಮಾಡಲೂ ತೋಚದೆ ಸೋಲನ್ನು ಒಪ್ಪಿಕೊಳ್ಳಬೇಕಾಯಿತು. ಆಗ ಪಂಥಾಹ್ವಾನ ನೀಡಿದ್ದವರು ಹೇಳಿದ್ದು, ನಿನ್ನದು ಸಣ್ಣ ಮನಸ್ಸು. ನಾನು ಹೇಳಿದ್ದು ಖರೀದಿಸಬಾರದು ಎಂದಿದ್ದೇನೇ ಹೊರತು ಅದನ್ನು ಯಾರಿಗೂ ಕೊಡಬಾರದು ಎಂದಲ್ಲ. ನೀನು ಹಣವನ್ನು ಧಾರಾಳವಾಗಿ ದಾನ ಮಾಡಬಹುದಾಗಿತ್ತು. ಆದರೆ ನಿನ್ನ ಆಲೋಚನೆ ಆಗಿಲ್ಲವಾದ್ದರಿಂದ ನೀನು ಸೋಲು ಒಪ್ಪಿಕೊಳ್ಳಬೇಕಾಯಿತು ಎಂದು. ಇದು ನಮ್ಮಲ್ಲಿನ ಅನೇಕರ ಮನಸ್ಥಿತಿ. ಹಣ ನಮಗೆ ಹೆಚ್ಚಾಗಿದೆ ಎಂದು ಕಂಡುಬಂದಾಗ ಅದನ್ನು ಸಾಮಾಜಿಕ ಕಾರ್ಯಗಳಿಗಾಗಿ ವಿನಿಯೋಗಿಸಬಹುದು, ದಾನ ಮಾಡಬಹುದು. ಆದರೆ ಹಾಗೆ ಮಾಡಲು ಮನಸ್ಸು ಬೇಕು. ನಮ್ಮ ಮನಸ್ಥಿತಿ ಹೇಗಿರುತ್ತದೆ ಎಂದರೆ, ಮತ್ತೊಬ್ಬರು ಕೊಡುವವರಷ್ಟೇ ನಮಗೂ ಸಾಮರ್ಥ್ಯ ಇದ್ದರೂ, ನಾವು ಅವರೇ ಕೊಡಲಿ ಎಂದು ಬಯಸಿದಂತೆ ಆಗುತ್ತದೆ. ನಮ್ಮ ಸಮಾಜದಲ್ಲಿ ಹೀಗೆ ಕೊಡುಗೈ ದಾನಿ ಎನಿಸಿಕೊಂಡವರು ಬೆರಳೆಣಿಕೆಯಷ್ಟು ಜನ ಸಿಗುತ್ತಾರೆ. ಅವರ ಮನೋಭಾವ ಹೇಗೆ ಬದಲಾಗಿರುತ್ತದೆ ಎಂದರೆ, ನನ್ನಲ್ಲಿ ಹಣವಿದೆ, ನಾನು ಕೊಡುತ್ತಿದ್ದೇನೆ ಎಂದು ಅವರು ಭಾವಿಸದೇ, ಆ ದೇವರು ನನಗೆ ಕೊಟ್ಟಿದ್ದಾನೆ. ಕೆರೆಯ ನೀರನ್ನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೋ ಎಂಬ ದಾಸವಾಣಿಯಂತೆ ಸಮಾಜ ಕೊಟ್ಟಿದ್ದನ್ನು ನಾನು ಸಮಾಜಕ್ಕೆ ಕೊಡುತ್ತಿದ್ದೇನೆ ಎಂದೇ ಅವರು ಹೇಳುತ್ತಾರೆ. ಕೆಲವೊಮ್ಮೆ ನಾನು ಕೊಟ್ಟೆ ಎಂಬ ಪ್ರಚಾರದ ಮಾತನ್ನೂ ಅವರು ಬಯಸುವುದಿಲ್ಲ. ಇಂತಹ ಮನೋಭಾವ ನಮಗೆ ಬೇಕಾಗುತ್ತದೆ.

ನಾವು ಸ್ವಾರ್ಥವಿಲ್ಲದೇ ಮಾಡುವ ಸಣ್ಣಪುಟ್ಟ ಸಹಾಯ ಎಂತಹ ಅದ್ಭುತ ಪರಿಣಾಮ ಬೀರಬಲ್ಲುದು ಎಂಬುದಕ್ಕೆ ಒಂದು ಘಟನೆ ಉಲ್ಲೇಖಿಸಬಹುದು. ಒಂದು ಮನೆಯಲ್ಲಿ ಒಬ್ಬ ಹೆಂಗಸು ಮನೆಗೆಲಸ ಮಾಡಿಕೊಂಡಿರುತ್ತಾಳೆ. ಸಹಜವಾಗಿ ಆಕೆ ಬಡವಿ. ಆ ಕೆಲಸದವಳು ಪ್ರಾಮಾಣಿಕಳು. ಅನವಶ್ಯಕವಾಗಿ ರಜೆ ಹಾಕಿ ಕೆಲಸಕ್ಕೆ ತಪ್ಪಿಸುವವಳೂ ಅಲ್ಲ. ಬಹು ದಿನಗಳ ನಂತರ ಮಗಳ ಮನೆಗೆ ಹೋಗಬೇಕು. ಮೊಮ್ಮಗಳನ್ನು ನೋಡಿ ಬರಬೇಕೆಂಬ ಆಸೆಯಿಂದ ಮನೆಯೊಡತಿಗೆ ಹೇಳಿ ಕೆಲವು ದಿನ ಬರಲಾಗದ ಬಗ್ಗೆ ತಿಳಿಸುತ್ತಾಳೆ. ಮನೆಯೊಡತಿ ಆಕೆಗೆ ಹೆಚ್ಚುವರಿಯಾಗಿ ಐದು ನೂರು ರೂಪಾಯಿ ಕೊಟ್ಟು ಕಳುಹಿಸುತ್ತಾಳೆ. ಆಕೆ ಕೆಲಸಕ್ಕೆ ಬರದಿದ್ದರಿಂದ ಮನೆಯ ಕೆಲಸ ಸ್ವಲ್ಪ ಏರುಪೇರಾಗುತ್ತದೆ. ಆಗ ಗಂಡ ಈ ಬಗ್ಗೆ ಕೇಳುತ್ತಾನೆ. ಆಗ ಆತನ ಹೆಂಡತಿ ವಿಷಯ ತಿಳಿಸಿ, ತಾನು ಆಕೆಗೆ ಐದು ನೂರು ರೂಪಾಯಿ ಕೊಟ್ಟ ಬಗ್ಗೆ ಹೇಳುತ್ತಾಳೆ. ಗಂಡನಿಗೆ ಕೋಪ ಬರುತ್ತದೆ. ಆ ಐದು ನೂರು ರೂಪಾಯಿಗೆ ರುಚಿಕರವಾದ ಪಿಜ್ಜಾ ತರಿಸಿ ತಿನ್ನಬಹುದಾಗಿತ್ತು. ನೀನು ಕೆಲಸದವರ ಬಗ್ಗೆ ಅವಶ್ಯಕತೆಗಿಂತ ಹೆಚ್ಚು ಕನಿಕರ ತೋರಿಸುತ್ತೀಯೆ ಎಂದೆಲ್ಲಾ ರೇಗಾಡಿದ. ಅವನನ್ನು ಸಮಾಧಾನ ಪಡಿಸಲು ಆಕೆ, ಚಿಂತಿಸಬೇಡಿ. ಅಷ್ಟು ಹಣ ನಿಮಗೆ ಸರಿ ಹೊಂದುವತನಕ ನಾನು ನನ್ನ ಪಾಲಿನ ಪಿಜ್ಜಾ ತಿನ್ನುವುದಿಲ್ಲ ಎಂದು ಹೇಳುತ್ತಾಳೆ.

ಮೂರ್‍ನಾಲ್ಕು ದಿನಗಳ ನಂತರ ಕೆಲಸದವಳು ಕೆಲಸಕ್ಕೆ ಹಾಜರಾಗುತ್ತಾಳೆ. ಆಕೆ ಯಜಮಾನನಿಗೆ ಹೇಳುತ್ತಾಳೆ: ಅಮ್ಮ ಕೊಟ್ಟ ಐದು ನೂರು ರೂಪಾಯಿ ಬೋನಸ್‌ನಿಂದ ನನಗೆ ತುಂಬಾ ಸಹಾಯವಾಯಿತು ಎನ್ನುತ್ತಾಳೆ. ಇವನಿಗೆ ಆಶ್ಚರ್ಯ. ಕೇವಲ ಐದು ನೂರು ರೂಪಾಯಿ, ಅದೂ ಒಂದು ದಿನದ ಪಿಜ್ಜಾ ದುಡ್ಡು ಇವಳಿಗೆ ಅದು ಹೇಗೆ ಸಹಾಯ ಮಾಡಿತು ಎಂಬ ಕುತೂಹಲದಿಂದ ಅದನ್ನು ಹೇಗೆ ಖರ್ಚು ಮಾಡಿದೆ ಎಂದು ಕೇಳುತ್ತಾನೆ. ಆಗ ಆ ಕೆಲಸದ ಹೆಂಗಸು ಹೇಳುತ್ತಾಳೆ, ಆ ಹಣದಲ್ಲಿ 150 ರೂಪಾಯಿಗೆ ಮೊಮ್ಮಗಳಿಗೆ ಬಟ್ಟೆ ತೆಗೆದುಕೊಂಡೆ. 40 ರೂಪಾಯಿಗೆ ಒಂದು ಗೊಂಬೆ ತೆಗೆದುಕೊಂಡೆ, 50 ರೂಪಾಯಿಗೆ ಮಿಠಾಯಿ ಕೊಂಡೆ, 50 ರೂಪಾಯಿಯನ್ನು ಮೊಮ್ಮಗಳ ಹೆಸರಿನಲ್ಲಿ ದೇವರ ಹುಂಡಿಗೆ ಹಾಕಿದೆ. 25 ರೂಪಾಯಿಯಲ್ಲಿ ಮಗಳಿಗೆ ಬಳೆ ಖರೀದಿಸಿದೆ. 100 ರೂಪಾಯಿ ಕೊಟ್ಟು ಅಳಿಯಂದಿರಿಗೆ ಒಂದು ಬೆಲ್ಟ್ ಖರೀದಿಸಿದೆ. 60 ರೂಪಾಯಿ ನಾನು ಹೋಗಿ ಬರುವುದಕ್ಕೆ ಖರ್ಚಾಯಿತು. ಉಳಿದ 25 ರೂಪಾಯಿಯಲ್ಲಿ ಮೊಮ್ಮಗಳಿಗೆ ಶಾಲೆಗೆ ಬೇಕಾದ ಪೆನ್ಸಿಲ್, ಪೆನ್ನು ಇತ್ಯಾದಿ ಖರೀದಿಸಿ ನೀಡಿದೆ. ಹೀಗೆ ಅಮ್ಮ ಕೊಟ್ಟ ಹಣದಿಂದ ತುಂಬಾ ಸಹಾಯವಾಯಿತು ಎಂದು ಹೇಳುತ್ತಾಳೆ. ಈ ಯಜಮಾನನಿಗೆ ಆಗ ಅನ್ನಿಸುತ್ತದೆ, ಕೇವಲ ಐದು ನೂರು ರೂಪಾಯಿ ಇಷ್ಟೆಲ್ಲಾ ಮಾಡುತ್ತದೆಯೇ? ಎಂದು. ಆತ ಯೋಚಿಸುತ್ತಾನೆ. ಅವನ ತಲೆಯಲ್ಲಿ ಐದು ನೂರು ಖರ್ಚು ಮಾಡಿ ಖರೀದಿಸುವ ಎಂಟು ತುಂಡು ಪಿಜ್ಜಾ ಓಡಾಡುತ್ತದೆ. ಒಂದೊಂದೂ ತುಂಡು ತಲೆಗೆ ಬಾರಿಸಿದ ಹಾಗೆ ಆಗುತ್ತದೆ. ಆಗ ಅವನಿಗೆ ಅನ್ನಿಸುತ್ತದೆ, ನಾನು ಈವರೆವಿಗೆ ಪಿಜ್ಜಾದ ಮುಂಭಾಗದ ಒಂದು ಮುಖವನ್ನು ಮಾತ್ರ ನೋಡಿದ್ದೆ. ಆದರೆ ಈಗ ಕೆಲಸದವಳು ಅದರ ಹಿಂದಿನ ಮುಖವನ್ನು ನನಗೆ ದರ್ಶನ ಮಾಡಿಸಿದ್ದಾಳೆ ಎಂದು. ಆಗ ಯಜಮಾನನ ಮುಂದೆ ಬಂದ ಪ್ರಶ್ನೆ ಜೀವನಕ್ಕಾಗಿ ಖರ್ಚು ಮಾಡಬೇಕೆ? ಅಥವಾ ಖರ್ಚಿಗಾಗಿ ಜೀವನ ಮಾಡಬೇಕೆ? ಎಂದು. ಆತನಿಗೆ ಮನೆಗೆಲಸದಾಕೆ ಒಂದು ರೀತಿ ಜೀವನ ದರ್ಶನ ಮಾಡಿಸಿದಂತೆ ಆಯಿತು.

ಇದು ನಾವು ಜೀವನವನ್ನು ಹೇಗೆ ಕಾಣಬೇಕು ಎಂದು ಮಾರ್ಮಿಕವಾಗಿ ತಿಳಿಸುವ ಘಟನೆಯಾಗಿ ಕಂಡುಬರುತ್ತದೆ. ನಾವು ಮಾಡುವ ಹಲವು ಅನವಶ್ಯಕ ವೆಚ್ಚಗಳನ್ನು ನಿಯಂತ್ರಿಸಿದರೆ ಅದೇ ಹಣದಿಂದ ಮತ್ತೊಬ್ಬರ ಜೀವನದಲ್ಲಿ ಸಂತೋಷ ಸಮಾಧಾನ ತಂದುಕೊಡಬಹುದಲ್ಲವೇ? ಇದನ್ನು ಯೋಚಿಸಬೇಕು. ಈ ಹಿಂದೆ ಕಚೇರಿಗಳಲ್ಲಿ ವೇತನವನ್ನು ನಗದಾಗಿ ಪಾವತಿಸಲಾಗುತ್ತಿತ್ತು. ಹಲವರು ಅದನ್ನು ನೆನೆಸಿಕೊಂಡು, ಆಗ ವೇತನ ಎಣಿಸಿಕೊಳ್ಳುತ್ತಿದ್ದುದರಲ್ಲಿ ಎಷ್ಟೊಂದು ಮಜಾ ಇತ್ತು. ಹಣ ಕೈಗೆ ಬಂದ ಕೂಡಲೇ ಒಂದಷ್ಟು ಹಣ ದೇವಸ್ಥಾನಕ್ಕೆ, ಮತ್ತಷ್ಟು ಇನ್ನೊಬ್ಬರ ಸಹಾಯಕ್ಕೆ ನೀಡುತ್ತಿದ್ದೆವು. ಈಗ ಹಣ ನೇರವಾಗಿ ಬ್ಯಾಂಕಿಗೆ ಹೋಗುತ್ತದೆ. ಏಣಿಸಲು ಕೈಯಲ್ಲಿ ಹಣವೇ ಇಲ್ಲ. ಇದರಿಂದ ಸಹಾಯ ಮಾಡುವ ಮನಸ್ಸೂ ಇಲ್ಲ ಎಂದು. ಇದೆಲ್ಲಾ ನಮ್ಮ ಮನೋಭಾವ ಅವಲಂಬಿಸಿರುವಂತಹುದು. ನಾವು ಮಾಡುತ್ತಿರುವ ಅನವಶ್ಯಕ ವೆಚ್ಚ ಮತ್ತೊಬ್ಬರಿಗೆ ಸಂತಸ ತರುವುದಾದರೆ, ಆ ಬಗ್ಗೆಯೂ ಯೋಚಿಸಬಹುದಲ್ಲವೇ?

ಯುವಕರು ವಿನೂತನ ತಂತ್ರಜ್ಞಾನದ ಪ್ರಯೋಜನ ಪಡೆಯಬೇಕು

ಶ್ರೀ ಪೂರ್ಣಾನಂದಪುರಿ ಸ್ವಾಮೀಜಿ ಕಿವಿಮಾತು

- ಯೂತ್ ಇನ್ನೋವೇಶನ್ ಎಕ್ಸ್ ಪೋ ಪೂರ್ವಭಾವಿ ಸಭೆ, ಕನ್ನಡ ರಾಜ್ಯೋತ್ಸವ ಆಚರಣೆ
- ಶ್ರೀ ದತ್ತಾತ್ರೇಯ ಪ್ರತಿಷ್ಠಾನ, ಕರ್ನಾಟಕ ಬಸವೇಶ್ವರ ಸಮಾಜ ಸೇವಾ ಟ್ರಸ್ಟ್‌ನಿಂದ ಕಾರ್ಯಕ್ರಮ

ಮೈಸೂರು, ಡಿ.14– ಯುವಕರು ವಿನೂತನ ತಂತ್ರಜ್ಞಾನದ ಸಂಪೂರ್ಣ ಪ್ರಯೋಜನ ಪಡೆಯಬೇಕು ಎಂದು ಶ್ರೀ ಕ್ಷೇತ್ರ ತೈಲೇಶ್ವರ ಗಾಣಿಗ ಮಹಾಸಂಸ್ಥಾನ ಮಠದ ಶ್ರೀ ಪೂರ್ಣಾನಂದಪುರಿ ಸ್ವಾಮೀಜಿ ಕರೆ ನೀಡಿದರು.



ಶ್ರೀ ದತ್ತಾತ್ರೇಯ ಪ್ರತಿಷ್ಠಾನ, ಕರ್ನಾಟಕ ಬಸವೇಶ್ವರ ಸಮಾಜ ಸೇವಾ ಟ್ರಸ್ಟ್‌ನಿಂದ ವಿವಿಧ ಕ್ಷೇತ್ರಗಳ ಸಾಧಕರಿಗೆ ಕರ್ನಾಟಕ ವಿಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶ್ರೀ ದತ್ತಾತ್ರೇಯ ಪ್ರತಿಷ್ಠಾನ, ಕರ್ನಾಟಕ ಬಸವೇಶ್ವರ ಸಮಾಜ ಸೇವಾ ಟ್ರಸ್ಟ್– ಧನ್ವಂತರಿ ಲೋಕಸಿರಿ ಬಯೋಟೆಕ್ ಸಹಯೋಗದಲ್ಲಿ ಜೆಎಸ್‌ಎಸ್ ಆಸ್ಪತ್ರೆ ಆವರಣದ ರಾಜೇಂದ್ರ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಯೂತ್ ಇನ್ನೋವೇಷನ್ ಎಕ್ಸ್ಪೋ ಪೂರ್ವಭಾವಿ ಸಭೆ, 70ನೇ ಕನ್ನಡ ರಾಜ್ಯೋತ್ಸವ, ಸಾಧಕರಿಗೆ ಕರ್ನಾಟಕ ವಿಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿ, ಇಂದಿನ ಯುವಕರಿಗೆ ಸಾಕಷ್ಟು ಉದ್ಯೋಗಾವಕಾಶಗಳು ಲಭ್ಯವಿದೆ.ಆದ್ದರಿಂದ ಯುವಕರು ತಂತ್ರಜ್ಞಾನಗಳ ಲಾಭ ಪಡೆದು ಮುಂದೆ ಬರಬೇಕು ಎಂದರು.

ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ ಡಿ.ದೇವರಾಜ ಅರಸು ಅವರು ತಮ್ಮ ಹತ್ತು ಹಲವು ಕಾರ್ಯಕ್ರಮಗಳ ಮೂಲಕ ಸಾಮಾಜಿಕ ಹರಿಕಾರ ಎನಿಸಿಕೊಂಡರು ಎಂದರು.

ಪ್ರತಿಯೊಬ್ಬರೂ ಕನ್ನಡದ ಜೊತೆಗೆ ಇಂಗ್ಲಿಷ್ ಹಾಗೂ ಹಿಂದಿಯನ್ನು ಕೂಡ ಕಲಿಯ ಬೇಕು ಎಂದು ಅವರು ಸಲಹೆ ಮಾಡಿದರು.

ಡಿಆರ್‌ಡಿಒ ನಿವೃತ್ತ ವಿಜ್ಞಾನಿ ಡಾ. ರಾಮಕೃಷ್ಣ ಮಾತನಾಡಿ, ಆಹಾರ, ಆರೋಗ್ಯ ಮತ್ತು ದೇಶದ ಬಗ್ಗೆ ಪ್ರೀತಿ ಮತ್ತು ಗೌರವ ಇರಬೇಕು. ಜೀವ ಮತ್ತು ಜೀವನ ಮತ್ತೆ ಸಿಗದು. ಆದ್ದರಿಂದ ಯುವಕರು ಸದುಪಯೋಗ ಮಾಡಿಕೊಂಡು ದೇಶಸೇವೆ ಮಾಡಬೇಕು ಎಂದರು.

ಮುಂದಿನ ದಿನಗಳಲ್ಲಿ ಜಿ. ರವಿಶಂಕರ್ ಅವರ ಜೊತೆಗೂಡಿ ಯುವಕರಿಗೆ ವಿನೂತನ ತಂತ್ರಜ್ಞಾನ ಕುರಿತ ಮತ್ತಷ್ಟು ಕಾರ್ಯಕ್ರಮಗಳನ್ನು ನಡೆಸುವುದಾಗಿ ಅವರು ಹೇಳಿದರು.

ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಮಾಜಿ ಕಾರ್ಯದರ್ಶಿ ಎ.ಆರ್.ಮಲ್ಲರಾಜೇ ಅರಸ್ ಮಾತನಾಡಿ, ವಿನೂತನ ತಂತ್ರಜ್ಞಾನ ಕಲಿಯುವವರಿಗೆ ಯಾವುದೇ ಮಿತಿ ಇಲ್ಲ. ಆದರೆ ಕಲಿಯುವ ಮನಸ್ಸು ಮಾಡಬೇಕು ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಶ್ರೀದತ್ತ ಎಂಟರ್ ಪ್ರೈಸಸ್‌ನ ಮುಕ್ತಾರ್ ಅಹ್ಮದ್, ಧನ್ವಂತರಿ ಲೋಕಸಿರಿ ಬಯೋಟೆಕ್‌ನ ಲೋಕೇಶ್ ಮಾತನಾಡಿದರು.

ಉಮ್ಮತ್ತೂರು ಉಮೇಶ್ ಸ್ವಾಗತಿಸಿದರು. ವೀರಶೈವಮೂರ್ತಿ, ಮಂಜುನಾಥ್, ಸಿ. ಸುಬ್ರಹ್ಮಣ್ಯ, ಎನ್.ಹರಿನಾಥ್, ದೇವರಾಜು, ವೀರಶೈವಮೂರ್ತಿ ಮೊದಲಾದವರು ಇದ್ದರು. ಪನ್ನಗ ವಿಜಯಕುಮಾರ್ ಮತ್ತು ಸ್ವಾತಿ ಪ್ರಾರ್ಥಿಸಿದರು. ಅಮೂಲ್ಯ ಆಶಿತಾ ಕೊಡವ ನೃತ್ಯ, ನಿತಿನ್ ಕುಮಾರ್ ಯೋಗ ಪ್ರದರ್ಶಿಸಿದರು. ಶ್ವೇತಾ ಕನ್ನಡಗೀತೆ ಹಾಡಿದರು.

ಪ್ರಶಸ್ತಿ ಪುರಸ್ಕೃತರು

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಬೆಳಕು ಸಾಮಾಜಿಕ ಸೇವಾ ಸಂಸ್ಥೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕ್ಯಾತನಹಳ್ಳಿ ಪ್ರಕಾಶ್, ಜಿಲ್ಲಾ ಸರ್ಕಾರಿ ಮಹಿಳಾ ನೌಕರರ ಸಂಘದ ಅಧ್ಯಕ್ಷೆ ಡಾ. ಕಾವೇರಿ ಪ್ರಕಾಶ್, ಪಾಲಿಟೆಕ್ನಿಕ್ ಕಾಲೇಜು ಪ್ರಾಂಶುಪಾಲ ಜಿ.ರವಿಶಂಕರ್, ಡಿಆರ್‌ಡಿಒ ನಿವೃತ್ತ ವಿಜ್ಞಾನಿ ಡಾ.ಎ. ರಾಮಕೃಷ್ಣ, ಯೋಗ ಶಿಕ್ಷಕ ಎಂ. ಮಲ್ಲಿಕಾರ್ಜುನಸ್ವಾಮಿ, ಹಿರಿಯ ನಾಗರಿಕ ವೇದಿಕೆ ಅಧ್ಯಕ್ಷ ಎಂ.ಪಿ. ಪ್ರಭುಸ್ವಾಮಿ, ಧನ್ವಂತರಿ ಲೋಕಸಿರಿ ಬಯೋಟೆಕ್ ವ್ಯವಸ್ಥಾಪಕ ನಿರ್ದೇಶಕ ಲೋಕೇಶ್, ಜ್ಯೋತಿಷಿ ಸುಬ್ರಹ್ಮಣ್ಯ ಶಾಸ್ತ್ರಿ ಅವರಿಗೆ ಕರ್ನಾಟಕ ವಿಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ
ಸೋಮವಾರ 15 ಡಿಸೆಂಬರ್ 2025

ಸೈಬರ್ ಅಪರಾಧಗಳ ನಿಯಂತ್ರಣಕ್ಕೆ ಒಂದು ಕಠಿಣ ನೀತಿ ರೂಪಿಸಬೇಕು

●ಎನ್.ಆರ್ ಉಪವಿಭಾಗದ ಎಸಿಪಿ ಮ್ಯಾಥ್ಯೂ ಥಾಮಸ್ ಅಭಿಮತ ●ಮೈಸೂರು ಗ್ರಾಹಕ ಪರಿಷತ್‌ನಲ್ಲಿ ಸಂಚಾರ, ಅಪರಾಧ ಸಂಬಂಧ ಸಂವಾದ ●ಫುಟ್‌ಪಾತ್ ಅತಿಕ್ರಮಣ ತೆರವಿಗೆ ಸಿದ್ಧತೆ ●ಮಾದಕ ವಸ್ತು ಹತ್ತಿಕ್ಕಲು ಕಾರ್ಯಾಚರಣೆ

ಮೈಸೂರು, ಡಿ.14(ಎಸ್‌ಪಿಎನ್)–ತಂತ್ರಜ್ಞಾನ ಅಭಿವೃದ್ಧಿ ಹೊಂದಿದಂತೆ ಅಪರಾಧದ ಸರೂಪಗಳು ಬದಲಾಗಿವೆ. ಡಿಜಿಟಲ್ ಅರೆಸ್ಟ್ ನಂತಹ ಸೈಬರ್ ಕ್ರೈಂಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ನೀತಿ–ನಿಯಮಗಳು ಕಾಲಕಾಲಕ್ಕೆ ಬದಲಾಗಬೇಕು. ಈ ಕುರಿತು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಇದರ ಬಗ್ಗೆ ಜಂಟಿಯಾಗಿ ಚರ್ಚಿಸಿ ಕಾಯ್ದೆ ರೂಪಿಸುವ ಅಗತ್ಯತೆಯಿದೆ ಎಂಬ ಅಭಿಪ್ರಾಯ ಮೈಸೂರು ಗ್ರಾಹಕ ಪರಿಷತ್ ಸಭೆಯಲ್ಲಿ ವ್ಯಕ್ತವಾಯಿತು.

ಮೈಸೂರು ಯಾದವಗಿರಿಯ ವಿವೇಕಾನಂದ ರಸ್ತೆಯ ಮೈಸೂರು ಗ್ರಾಹಕ ಪರಿಷತ್ ಕಚೇರಿಯಲ್ಲಿ ನಡೆದ ಮಾಸಿಕ ಸಭೆಯಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ಅಪರಾಧ ತಡೆ ಮಾಸಾಚರಣೆ ಪ್ರಯುಕ್ತ ನರಸಿಂಹರಾಜ ಉಪವಿಭಾಗದ ಎಸಿಪಿ ಮ್ಯಾಥ್ಯೂ ಥಾಮಸ್ ಸಮ್ಮುಖದಲ್ಲಿ ಎಂಜಿಪಿ ಸದಸ್ಯರು ಸಂವಾದ ನಡೆಸಿದರು.

ಬ್ಯಾಂಕ್ ಖಾತೆಗಳಲ್ಲಿ ಇದ್ದಕಿದ್ದಂತೆ ಹಣ ಕಟ್ ಆಗಿರುವ ಮೇಸೇಜ್ ಬರುತ್ತದೆ. ಫೇಸ್ ಬುಕ್‌ಗಳಲ್ಲಿ ನಾವು ಪೊಲೀಸ್ ಇಲಾಖೆಯವರು ಎಂದು ಪರಿಚಯ ಮಾಡಿಕೊಂಡು ಹಣ ಕೇಳುತ್ತಾರೆ. ಇದರ ಬಗ್ಗೆ ಸೈಬರ್ ಕ್ರೈಂಗೆ ದೂರು ದಾಖಲಿಸಿದರೆ, ನಮ್ಮಿಂದ ಅರ್ಜಿ ಪಡೆದು ಪೊಲೀಸರು ಸುಮ್ಮನಾಗುತ್ತಾರೆ. ಆದರೆ, ಕಳೆದುಕೊಂಡಿರುವ ಹಣದ ಬಗ್ಗೆ ಸೈಬರ್ ಠಾಣೆಯಿಂದ ಯಾವುದೇ ಉತ್ತರವಿಲ್ಲ ಎಂದು ಸದಸ್ಯರೊಬ್ಬರು ತಮಗಾದ ನೋವು ತೋಡಿಕೊಂಡರೆ, ಮತ್ತೊಬ್ಬರು ನಮ್ಮ ಖಾತೆಯಲ್ಲಿ 2 ಬಾರಿ ಹಣ ಕಟ್ ಆಗಿದೆ. ಇದರ ಬಗ್ಗೆ ಸೈಬರ್ ಪೊಲೀಸರಲ್ಲಿ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಮಾಹಿತಿ ನೀಡಿದರು.

ಇದಕ್ಕೆ ಉತ್ತರಿಸಿದ ಎಸಿಪಿ ಮ್ಯಾಥ್ಯೂ ಥಾಮಸ್, ಈ ಹಿಂದೆ ನಡೆಯುತ್ತಿದ್ದ ಅಪರಾಧ ಪ್ರಕರಣಗಳಿಗೂ ಈಗಿನ ಪ್ರಕರಣಗಳಿಗೂ ಬಹಳಷ್ಟು



ಮೈಸೂರು ಗ್ರಾಹಕ ಪರಿಷತ್ ಕಚೇರಿಯಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ಅಪರಾಧ ತಡೆ ಮಾಸಾಚರಣೆ ಪ್ರಯುಕ್ತ ಎಸಿಪಿ ಮ್ಯಾಥ್ಯೂ ಥಾಮಸ್ ಸಮ್ಮುಖದಲ್ಲಿ ಎಂಜಿಪಿ ಸದಸ್ಯರು ಸಂವಾದ ನಡೆಸಿದರು.

ವ್ಯತ್ಯಾಸವಿದೆ. ಈ ಹಿಂದೆ ಮನೆಗಳ್ಳತನ, ಸಣ್ಣಪುಟ ಕಳ್ಳತನವಾಗುತ್ತಿದ್ದವು. ಈಗ ತಂತ್ರಜ್ಞಾನ ಆಧಾರಿತ ಅಪರಾಧ ಪ್ರಕರಣಗಳು ನಡೆಯುತ್ತಿವೆ. ಬೇರೆ ದೇಶಗಳಲ್ಲಿ ಕುಳಿತು ಇಲ್ಲಿನ ಬ್ಯಾಂಕ್‌ನಲ್ಲಿನ ಖಾತೆಗೆ ಕನ್ನ ಹಾಕುತ್ತಿದ್ದಾರೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಜಂಟಿಯಾಗಿ ಮಾತುಕತೆ ನಡೆಸಬೇಕು. ನಂತರ ತಜ್ಞರೊಂದಿಗೆ ಚರ್ಚಿಸಿ, ನೀತಿ – ನಿಯಮಗಳನ್ನು ರೂಪಿಸಿದರೆ ಮಾತ್ರ ತಡೆಗಟ್ಟಲು ಸಾಧ್ಯ ಎಂದು ಮಾಹಿತಿ ನೀಡಿದರು.

ರಸ್ತೆಬದಿ ವ್ಯಾಪಾರಿಗಳಿಂದ ಫುಟ್‌ಪಾತ್ ಒತ್ತುವರಿ ಪ್ರಕರಣಗಳು ಹೆಚ್ಚಾಗುತ್ತಿವೆ. ಇದರಿಂದ ಪಾದಚಾರಿಗಳು ರಸ್ತೆಯಲ್ಲಿ ಓಡಾಡುವುದರಿಂದ ವಾಹನ ಸವಾರರು ತಮ್ಮ ಮಾರ್ಗದಲ್ಲಿ ವಾಹನ ಚಾಲನೆ ಮಾಡಲಾಗದೇ ಅಪಘಾತಗಳಾಗುತ್ತಿವೆ. ಇದನ್ನು ತಡೆಗಟ್ಟಲು ಪೊಲೀಸ್ ಇಲಾಖೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಸದಸ್ಯರಾದ ಶೋಭನಾ ಅಳಲು ತೋಡಿಕೊಂಡರು.

ಎರಡು ಸುತ್ತಿನ ಸಭೆ ಆಗಿದೆ: ಇದಕ್ಕೆ ಪ್ರತಿಕ್ರಿಯಿಸಿದ ಎಸಿಪಿ ಮ್ಯಾಥ್ಯೂ ಥಾಮಸ್, ಫುಟ್‌ಪಾತ್ ತೆರವು ಕಾರ್ಯಾಚರಣೆ ಸಂಬಂಧ ಕಳೆದ ವಾರ ಜಿಲ್ಲಾಧಿಕಾರಿಗಳು, ಪೊಲೀಸ್ ಆಯುಕ್ತರು ಹಾಗೂ ಇತರೆ ಅಧಿಕಾರಿಗಳೊಂದಿಗೆ ಸುರಕ್ಷಾ ರಸ್ತೆ ಸಂಚಾರ ಕುರಿತು ಚರ್ಚೆ ನಡೆದಿದೆ. ರಾಜ್ಯ ಸರ್ಕಾರದಿಂದಲೂ ಅನುದಾನ ಬಿಡುಗಡೆಗೆ ಒಪ್ಪಿಗೆ ಸೂಚಿಸಿದೆ. ಬರುವ ದಿನಗಳಲ್ಲಿ ಎಲ್ಲೆಲ್ಲಿ ಫುಟ್‌ಪಾತ್ ಒತ್ತುವರಿಯಾಗಿದೆಯೋ ಆದ್ಯತೆ ಮೇರೆಗೆ ಪರಿಶೀಲಿಸಲಾಗುವುದು ಎಂದು ಉತ್ತರಿಸಿದರು.

ಕಳೆದೆರಡು ತಿಂಗಳ ಹಿಂದೆ ಮಂಡಿಮೊಹಲ್ಲಾದ ಸಾಡೇ ರಸ್ತೆಯಲ್ಲಿ ಎರಡು ದ್ವಿಚಕ್ರವಾಹನಗಳು ಓಡಾಡಲು ಹರಸಾಹಸ ಪಡೆಬೇಕಿತ್ತು. ಈ ಸಂಗತಿ ನನ್ನ ಗಮನಕ್ಕೆ ಬಂತು. ಆಗ ಈ ರಸ್ತೆಯ ವ್ಯಾಪಾರಿಗಳ ಸಭೆ ಕರೆದು ಎಲ್ಲರಿಗೂ ದಿನಬಿಟ್ಟು ದಿನ ಎರಡು ಬದಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಮಾಡಿರುವ ಕುರಿತು ವ್ಯಾಪಾರಿಗಳಿಗೆ ಮನವರಿಕೆ ಮಾಡಿದ್ದೆವು. ಇದಕ್ಕೆ ಎಲ್ಲಾ ವ್ಯಾಪಾರಿಗಳು ಒಪ್ಪಿದರು. ಈಗ ಈ ರಸ್ತೆಯಲ್ಲಿ ಆಂಬುಲೆನ್ಸ್ ಓಡಾಡುವಂತಾಗಿದೆ ಎಂದು ಸಮಾಧಾನ ವ್ಯಕ್ತಪಡಿಸಿದರು.

ನಿಯಮ ಪಾಲಿಸಿದ್ದರೂ ದಂಡ: ಗ್ರಾಹಕರ ಪರಿಷತ್ ವೇದಿಕೆಯ ಪ್ರಭಾರಾಣಿ ಮಾತನಾಡಿ, ವೀಲಿಂಗ್ ಹಾಗೂ ಕಳ್ಳತನಕ್ಕಾಗಿ ಬಳಕೆಯಾಗುವ ದ್ವಿಚಕ್ರವಾಹನಗಳು ನಕಲಿ ನಂಬರ್ ಪ್ಲೇಟ್ ಬಳಸುವುದರಿಂದ, ಅವರು ನಿಯಮ ಉಲ್ಲಂಘಿಸಿದಾಗ ಇನ್ಯಾರಿಗೋ ದಂಡ ಬೀಳುತ್ತಿವೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಸಂಚಾರ ನಿಯಮ ಉಲ್ಲಂಘಿಸಿಲ್ಲವೆಂದು ಖಚಿತವಾದರೆ ಕಂಟ್ರೋಲ್ ರೂಂ ಮೂಲಕ ಪ್ರಕರಣ ಹಿಂಪಡೆಯಲಾಗುತ್ತದೆ ಎಂದು ತಿಳಿಸಿದರು.

ಬೀಟ್ ಪೊಲೀಸರಿಂದ ಪಿಪಿ ಊದಿಸಿ: ಈ ಹಿಂದೆ ಬಿಟ್ ಪೊಲೀಸರು, ಸೈಕಲ್‌ನಲ್ಲಿ ರೌಂಡ್ಸ್ ಹಾಕುತ್ತಿರುವಾಗ ಅಲ್ಲಲ್ಲಿ ನಿಂತು ಪಿಪಿ ಊದುತ್ತಿದ್ದರು. ಆಗ ಕಳ್ಳರು ಎಚ್ಚೆತ್ತು ಪರಾರಿಯಾಗುತ್ತಿದ್ದರು. ಈಗಿನ ಪೊಲೀಸರು ಗಸ್ತು ತಿರುಗುತ್ತಾರೆ. ಆದರೆ,ಅವರು ಬರುವುದೇ ಗೊತ್ತಾಗುವುದಿಲ್ಲ. ಹಾಗಾಗಿ ಗಸ್ತು ಪೊಲೀಸರು ಸೈಕಲ್ ಸವಾರಿ ಮೂಲಕ ಪಿಪಿ ಊದಿಕೊಂಡು ಗಸ್ತು ತಿರುಗುವ ವ್ಯವಸ್ಥೆ ಮತ್ತೆ ಜಾರಿಗೆ ತನ್ನಿ ಎಂದು ಸದಸ್ಯ ವಸಂತ ಕುಮಾರ್ ಮೈಸೂರ್ ಮಠ್ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿ, ಈಗಲೂ ಆ ವ್ಯವಸ್ಥೆಯಿದೆ. ಆದರೆ, ಈಗಿನ ಯುವಕರು ಪಿಪಿ ಊದಿಕೊಂಡು ಗಸ್ತು ತಿರುಗಲು ಇಷ್ಟ ಪಡುವುದಿಲ್ಲ. ನಾನು ಇಲಾಖೆಗೆ ಸೇರಿದ ಪ್ರಾರಂಭದಲ್ಲಿ ಈ ವ್ಯವಸ್ಥೆ ಇತ್ತು. ಈಗ ಕಡಿಮೆಯಾಗಿದೆ. ಇದರ ಬಗ್ಗೆ ಆಲೋಚನೆ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಗಾಂಜಾಗೆ ಕಡಿವಾಣ ಹಾಕುತ್ತೇವೆ: ಮೈಸೂರು ನಗರದಲ್ಲಿ ಗಾಂಜಾ, ಆಫೀಮು ಪದಾರ್ಥಗಳು ಸುಲಭವಾಗಿ ಯುವಕರ ಕೈಸೇರುತ್ತಿವೆ. ಕಳೆದ ಮೂರು ದಿನಗಳ ಹಿಂದೆ ಸರಸ್ವತಿಪುರಂ ಖಾಲಿ ಜಾಗದಲ್ಲಿ ನಾಲ್ಕೈದು ಹುಡುಗರು ಗಾಂಜಾ ಸೇವನೆ ಮಾಡುತ್ತಿದ್ದರು. ಈ ಮಾಹಿತಿಯನ್ನು ಸರಸ್ವತಿಪುರಂ ಪೊಲೀಸರಿಗೆ ನೀಡಿ, ಅವರನ್ನು ಖುದ್ದು ನಾವೇ ಪೊಲೀಸರಿಗೊಪ್ಪಿಸಿದ್ದೇವೆ. ಅದೇ ರೀತಿ ಎಲ್ಲಾ ಕಡೆ ಯುವಕ–ಯುವತಿರಿಗೆ ಗಾಂಜಾ ಸಿಗುತ್ತಿದ್ದು, ಇದಕ್ಕೆ ಕಡಿವಾಣ ಹಾಕಿ ಎಂದು ಸದಸ್ಯ ಕೆ.ವಿ.ಭಾನುಮೋಹನ್ ಮನವಿ ಮಾಡಿದರು.

ಇದಕ್ಕೆ ಉತ್ತರಿಸಿದ ಎಸಿಪಿ, ಇತ್ತೀಚಿನ ದಿನಗಳಲ್ಲಿ ಅಪ್ರಾಪ್ತ ಯುವಕರಲ್ಲಿ ಸೆಲ್ಯೂಷನ್ ಸೇವನೆ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ ಇದು ಗಾಂಜಾ, ಆಫೀಮು ಸೇವನೆಗಿಂತ ಅಪಾಯಕಾರಿಯಾಗಿದ್ದು, ಇದಕ್ಕೂ ಕಡಿವಾಣ ಹಾಕಲು ಮುಂದಾಗಿದ್ದೇವೆ. ನಾವು ನಗರದಾದ್ಯಂತ ಅಪರಾಧ ಪ್ರವೃತ್ತಿಗಳನ್ನು ಪರಿಶೀಲಿಸುತ್ತಿದ್ದೇವೆ. ವಿಶೇಷವಾಗಿ ಸೂಕ್ಷ್ಮ ಪ್ರದೇಶಗಳಲ್ಲಿ ಕಾನೂನು ಜಾರಿ ಕುರಿತು ಗಂಭೀರವಾಗಿ ಪರಿಗಣಿಸಲಾಗುತ್ತಿದೆ ಎಂದರು.

ಸಾರ್ವಜನಿಕರ ಸಹಕಾರ ಮುಖ್ಯ: ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಬಿಂದುಮಣಿ, ಸಂಚಾರ ಮತ್ತು ಅಪರಾಧ ವಿಭಾಗದ ಡಿಸಿಪಿ ಕೆ.ಎಸ್.ಸುಂದರ್‌ರಾಜ್ ನೇತೃತ್ವದಲ್ಲಿ ಆಗಾಗ್ಗೆ ಗಾಂಜಾ ಸೇವನೆ ಹಾಗೂ ಮಾರಾಟಗಾರರ ವಿರುದ್ಧ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇಂತಹ ಸಮಸ್ಯೆಗಳನ್ನು ಇಲಾಖೆ ಗಮನಕ್ಕೆ ತರಲು ಎಲ್ಲಾ ಠಾಣಾ ವ್ಯಾಪ್ತಿಯಲ್ಲಿ ಪ್ರತಿ ತಿಂಗಳು ಸಾರ್ವಜನಿಕರ ಸಭೆ ಕರೆಯಮತೆ ಸದಸ್ಯರೊಬ್ಬರು ಮನವಿ ಮಾಡಿದರು.

ಮಂಡಿ ಮೊಹಲ್ಲಾ, ಉದಯಗಿರಿ, ಎನ್ ಆರ್ ಮೊಹಲ್ಲಾ, ನಜರ್‌ಬಾದ್, ಕೆ.ಆರ್ ಮೊಹಲ್ಲಾ ಇನ್ನಿತರೆಡೆ ಕಾರ್ಯಾಚರಣೆ ನಡೆಸಿ ಪರಿಶೀಲಿಸಲಾಗುತ್ತಿತ್ತು. ಇತ್ತೀಚೆಗೆ ಜೈಲಿನ ಪರಿಶೀಲನೆ ವೇಳೆ ಗಾಂಜಾ, ಆಫೀಮು ಪತ್ತೆಯಾಗಿತ್ತು. ಗಾಂಜಾ ಮಾರಾಟ ಪ್ರಕರಣದ ಹಿನ್ನೆಲೆಯುಳ್ಳ ಜನರನ್ನು ಕರೆಸಿ ವಿಚಾರಣೆ ನಡೆಸಿ ಅದನ್ನು ತಡೆಗಟ್ಟುವ ಪ್ರಯತ್ನವನ್ನು ನಮ್ಮ ಪೊಲೀಸ್ ಇಲಾಖೆ ಮಾಡುತ್ತಿದ್ದು, ಇದಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ ಎಂದರು.

ಸಭೆಯಲ್ಲಿ ಎಂಜಿಪಿ ಸದಸ್ಯರಾದ ಶೋಭಾ ಸಾಂಬಶಿವನ್, ಡಿ.ವಿ.ದಯಾನಂದಸಾಗರ್, ಕೆ.ಜಿ.ಶಶಿಧರ್, ಪಿ.ರಾಕೇಶ್, ಪ್ರಭಾ ನಂದೀಶ್, ಕೆ.ವಿ.ಭಾನುಮೋಹನ್, ಎಚ್.ಟ್.ರವಿ ಪ್ರಕಾಶ್, ಎಚ್.ಟಿ.ರವಿ ಪ್ರಕಾಶ್, ಎಸ್.ವಿ.ಶಂಕರ್, ಎಸ್.ಹರೀಶ್, ಮಾಲವಿಕ ಗುಬ್ಬಿವಾಣಿ, ರಘುನಂದನ್, ಎಸ್.ಕೆ.ದಿನೇಶ್, ಡಾ.ರೇಣು ಅಗರವಾಲ್ ಸೇರಿದಂತೆ ಇತರರಿದ್ದರು.

ಡಿಜಿಟಲ್ ಅರೆಸ್ಟ್ ಬಗ್ಗೆ ಮಾಹಿತಿ ಇರಲಿ

ಯಾವುದೇ ಬ್ಯಾಂಕ್ ಅಧಿಕಾರಿ ಮತ್ತು ಸಿಬ್ಬಂದಿ ನಿಮ್ಮ ಖಾತೆಯ ಮಾಹಿತಿ ಕೇಳುವುದಿಲ್ಲ. ಮೋಸ ಮಾಡುವ ವ್ಯಕ್ತಿಗಳು ಮಾತ್ರವೇ ಓಟಿಪಿ ಸಂಖ್ಯೆ ಹಾಗೂ ಇತರೆ ಮಾಹಿತಿ ಕೇಳುತ್ತಾರೆ. ವಂಚನೆಗೆ ಒಳಗಾದರೆ ತಕ್ಷಣ ಪೊಲೀಸ್ ಠಾಣೆಗೆ ಇಲ್ಲವೇ ಬ್ಯಾಂಕ್‌ಗೆ ದೂರು ನೀಡಿ. ಅಂತೆಯೇ ಸಾಮಾಜಿಕ ಜಾಲತಾಣಗಳು ಎಷ್ಟು ಉಪಯುಕ್ತವೋ, ಅಷ್ಟೇ ಅಪಾಯಕಾರಿ. ಎಷ್ಟು ಬೇಕೋ ಅಷ್ಟು ಮಾತ್ರ ಬಳಸಬೇಕು. ವೃದ್ಧರಿಗೆ ಎಟಿಎಂ ಕಾರ್ಡ್ ಕೊಟ್ಟು ಹಣ ಡ್ರಾ ಮಾಡಲು ಕಳಿಸುವುದರ ಬದಲು ಮನೆಯವರು ಜತೆಯಲ್ಲಿ ಹೋಗುವುದರಿಂದ ವಂಚನೆಗೆ ಒಳಗಾಗುವುದು ತಪ್ಪಲಿದೆ.

– **ಮ್ಯಾಥ್ಯೂ ಥಾಮಸ್,** ಎಸಿಪಿ, ನರಸಿಂಹರಾಜ ಉಪವಿಭಾಗ

► ಸಂಚಾರ ನಿಯಮ ಉಲ್ಲಂಘನೆಗೆ ವಿಧಿಸಿದ ದಂಡದ ಬಗ್ಗೆ ಗೊಂದಲವಿದ್ದರೆ ಇಲಾಖೆಯ ವೆಬ್‌ಸೈಟ್ ಅಥವಾ ದಂಡ ಪಾವತಿ ಕೇಂದ್ರಗಳಲ್ಲಿ ಎಐ ತೆಗೆದಿರುವ ಚಿತ್ರವನ್ನು ಗಮನಿಸಬಹುದು. ಅಲ್ಲಿರುವುದು ತಮ್ಮ ವಾಹನ ಅಲ್ಲದೇ ಇದ್ದರೆ ಪೊಲೀಸ್ ಇಲಾಖೆಯನ್ನು ಸಂಪರ್ಕಿಸಿದರೆ ಪ್ರಕರಣವನ್ನು ಹಿಂಪಡೆಯುತ್ತಾರೆ. ಅಷ್ಟೇ ಅಲ್ಲದೆ ಮೈಸೂರು ನಗರದ ಎಐ ಕ್ಯಾಮರಾ ಕಂಟ್ರೋಲ್ ರೂಂ ಸಂಖ್ಯೆ 0821–2418595 ಅಥವಾ ಸಂಚಾರ ವಿಭಾಗದ ಡಿಸಿಪಿ ಮೊ.ಸಂ 94808 02203 ಸಂಪರ್ಕಿಸಿದರೆ ಮಾಹಿತಿ ದೊರೆಯಲಿದೆ.

ಮೈಸೂರು ಜೈಲಲ್ಲಿ ಗಾಂಜಾ ಬಳಕೆಯ ಮಣ್ಣಿನ ಚಿಲುಮೆ ಪತ್ತೆ

ಮೈಸೂರು, ಡಿ.14– ಮಾದಕ ವಸ್ತುವನ್ನು ಜೀನ್ಸ್ ಪ್ಯಾಂಟ್ ಸೊಂಟದ ಪಟ್ಟಿಯಲ್ಲಿಟ್ಟು ಮೈಸೂರು ಕೇಂದ್ರ ಕಾರಾಗೃಹಕ್ಕೆ ಸಾಗಿಸಲೆತ್ನಿಸಿದ ಪ್ರಕರಣದ ಹಿನ್ನೆಲೆಯಲ್ಲಿ ಭಾನುವಾರ ಕಾರಾಗೃಹದ ಕೆಲ ಕೊಠಡಿಗಳನ್ನು ಪರಿಶೀಲಿಸಲಾಗಿದೆ.

ಕಾರಾಗೃಹ ಹಾಗೂ ಮಂಡಿ ಠಾಣೆ ಪೊಲೀಸರು ಇಂದು ಸಂಜೆ 4ರಿಂದ 6.15ರವರೆಗೂ ಜಂಟಿಯಾಗಿ ವಿಚಾರಣಾಧೀನ ಬಂಧಿಗಳ ವಿಭಾಗದ ಕೊಠಡಿ ಸಂಖ್ಯೆ 17 ಹಾಗೂ 21, ಸಜಾ ಬಂಧಿಗಳ ವಿಭಾಗದ ಕೊಠಡಿ ಸಂಖ್ಯೆ 16 ಹಾಗೂ ಭದ್ರತಾ ಸೆಲ್ ಕೊಠಡಿ 23ರಲ್ಲಿ ತಲಾಶ್ ನಡೆಸಿದ್ದಾರೆ.

ಈ ವೇಳೆ ಭದ್ರತಾ ಸೆಲ್ ಕೊಠಡಿ 23ರಲ್ಲಿದ್ದ ಆರೋಪಿ ಆಕಾಶ್ ಬಳಿ 500 ರೂ. ಹಾಗೂ ವಿಚಾರಣಾ ಬಂಧಿ ವಿಭಾಗದ ಕೊಠಡಿ ಸಂಖ್ಯೆ 17ರಲ್ಲಿ ಗಾಂಜಾ ಸೇವನೆಗೆ ಬಳಸುವ ಮಣ್ಣಿನ ಚಿಲುಮೆ ಪತ್ತೆಯಾಗಿದ್ದು, ಅವುಗಳನ್ನು ಮಂಡಿ ಠಾಣೆಗೆ ಒಪ್ಪಿಸಲಾಗಿದೆ ಎಂದು ಕಾರಾಗೃಹ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೈಲಿನಲ್ಲಿರುವ ಆಕಾಶ್‌ಗೆ ಭೇಟಿಯಾಗಿ ಆತನಿಗೆ ಬಟ್ಟೆ ನೀಡುವ ನೆಪದಲ್ಲಿ ಗಾಂಜಾ ರೀತಿಯ ಮಾದಕ ವಸ್ತುವನ್ನು ಜೈಲಿನೊಳಗೆ ಸಾಗಿಸಲು ಪ್ರಯತ್ನಿಸಿದ್ದ ರೂಪಾ ಹಾಗೂ ಆ ಕೃತ್ಯಕ್ಕೆ ಸೂಚನೆ ನೀಡಿದ್ದ ಸುರೇಶ್‌ನನ್ನು ಶುಕ್ರವಾರ ವಶಕ್ಕೆ ಪಡೆಯಲಾಗಿತ್ತು.

ವೋಟ್ ಚೋರಿ ಪ್ರತಿಭಟನೆಯಲ್ಲಿ ಮೈಸೂರು ಕಾಂಗ್ರೆಸ್ ನಾಯಕರು ಭಾಗಿ


ನವದೆಹಲಿಯ ರಾಮಲೀಲಾ ಮೈದಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ಶಾಸಕ ತನ್ವೀರ್ ಸೇಠ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಸೇರಿದಂತೆ ಹಲವರು ಭಾಗಿಯಾಗಿದ್ದರು.

ಮೈಸೂರು, ಡಿ.14(ಬಿಎಲ್‌ಯು)– ವೋಟ್ ಚೋರಿ ವಿರುದ್ಧ ರಾಷ್ಟ್ರ ರಾಜಧಾನಿ ನವದೆಹಲಿಯ ರಾಮಲೀಲಾ ಮೈದಾನದಲ್ಲಿ ಇಂದು ನಡೆದ ಪ್ರತಿಭಟನೆಯಲ್ಲಿ ಮೈಸೂರಿನ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಸೇರಿದಂತೆ ಹಲವರು ಭಾಗಿಯಾಗಿದ್ದರು.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಗೆ ಮೈಸೂರಿನ ಕಾಂಗ್ರೆಸ್ ನಾಯಕರು ಬೆಂಬಲ ನೀಡಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಅಲ್ಪಸಂಖ್ಯಾತ ವಿಭಾಗದ ಮುಖಂಡರಾದ ಇಕ್ಬಾಲ್, ಅಕಂ, ಯುವ ಕಾಂಗ್ರೆಸ್ ರಾಷ್ಟ್ರೀಯ ಕಾರ್ಯದರ್ಶಿ ನಾಗೇಶ್ ಕಾರ್ಯಪ್ಪ, ಎಡಿಸಿಸಿ ನಿರ್ದೇಶಕ ಮಂಜುನಾಥ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಮಹಾರಾಜರಿಂದ ನಿರ್ಮಾಣವಾದ ಮೈಸೂರಿನ ಸೌಂದರ್ಯ ಉಳಿಸಿಕೊಳ್ಳಬೇಕು

ಎನ್‌ಐಇ ಸಹ ಪ್ರಾಧ್ಯಾಪಕ ಶಾಮಸುಂದರ್ ಸುಬ್ಬರಾವ್ ಅಭಿಮತ


'ಸುಸ್ಥಿರ ಮೈಸೂರು ವಿಷನ್ 2040ಗಾಗಿ ಸ್ವಚ್ಛ ಮತ್ತು ಹಸಿರು ತಂತ್ರಜ್ಞಾನಗಳು' ವಿಷಯ ಕುರಿತು ಎನ್‌ಐಇ, ಡಿಎಂಇ ಕಾಲೇಜಿನ ಸಹ ಪ್ರಾಧ್ಯಾಪಕ ಶಾಮಸುಂದರ್ ಸುಬ್ಬರಾವ್ ಮಾತನಾಡಿದರು.

ಮೈಸೂರು,ಡಿ.14(ಎಸ್‌ಪಿಎನ್)– ಮೈಸೂರು ಮಹಾರಾಜರು ನಿರ್ಮಿಸಿರುವ ಸಾಂಸ್ಕೃತಿಕ ನಗರಿ ಮೈಸೂರಿನ ಸೌಂದರ್ಯವನ್ನು ನಾವೆಲ್ಲರೂ ಹಾಗೆಯೇ ಉಳಿಸಿಕೊಂಡು ಹೋಗುವ ನಿಟ್ಟಿನಲ್ಲಿ ಕೆಲಸ ಮಾಡಬೇಕಿದೆ ಎಂದು ಮೈಸೂರು ಎನ್‌ಐಇ, ಡಿಎಂಇ ಕಾಲೇಜಿನ ಸಹ ಪ್ರಾಧ್ಯಾಪಕ ಶಾಮಸುಂದರ್ ಸುಬ್ಬರಾವ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ದಿ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಮೈಸೂರು ಘಟಕದ ವತಿಯಿಂದ ಇಂಧನ ಸಂರಕ್ಷಣಾ ದಿನಾಚರಣೆ ಅಂಗವಾಗಿ 'ಸುಸ್ಥಿರ ಮೈಸೂರು ವಿಷನ್ 2040 ಗಾಗಿ ಸ್ವಚ್ಛ ಮತ್ತು ಹಸಿರು ತಂತ್ರಜ್ಞಾನಗಳು' ವಿಷಯ ಕುರಿತು ಮಾತನಾಡಿದರು.

ಇಂಧನ ಸಂರಕ್ಷಣೆಯ ಕ್ಷೇತ್ರವು ನಿಂತ ನೀರಲ್ಲ. ತಂತ್ರಜ್ಞಾನದಲ್ಲಿನ ಪ್ರಗತಿಗಳು ಹೆಚ್ಚು ಸುಸ್ಥಿರ ಭವಿಷ್ಯಕ್ಕಾಗಿ ಪರಿಹಾರಗಳನ್ನು ಮುಂದುವರೆಸುತ್ತವೆ ಎಂದ ಅವರು, ಹಸಿ ಕಸದ ಮೂಲಕ ಗ್ಯಾಸ್ ಉತ್ಪಾದನೆ, ಸೂರ್ಯ ಬೆಳಕಿನಿಂದ ವಿದ್ಯುತ್ ಉತ್ಪಾದನೆ ಹೀಗೆ ಪ್ರತಿ ಹಂತದಲ್ಲೂ ಇಂಧನ ಸಂರಕ್ಷಣೆ ಕುರಿತು ಚರ್ಚೆಗಳು ಅಗತ್ಯವಿದೆ. ಹಾಗಾಗಿ ರಾಜ–ಮಹಾರಾಜರ ಕಾಲೇಜಿನಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿನ ಉಳಿವಿಗೆ ಪ್ರಕೃತಿ ಸ್ನೇಹಿ ಅಭಿವೃದ್ಧಿ ಯೋಜನೆ ಜಾರಿಗೊಳಿಸಿದ್ದು, ಇಂದಿಗೂ ಕಾಣಬಹುದು ಎಂದರು.

ಸುಸ್ಥಿರ ಮೈಸೂರು ವಿಷನ್2040ಗಾಗಿ ಇಂಜಿನಿಯರ್‌ಗಳ ಕೊಡುಗೆ ಪ್ರಧಾನವಾಗುತ್ತದೆ. ಮೂಲಸೌಕರ್ಯ ಅನುಷ್ಠಾನ ಸಂದರ್ಭದಲ್ಲಿ ಪರಿಸರಕ್ಕೆ ಧಕ್ಕೆ ತರದ ಹಾಗೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮುಂದಾಗಬೇಕು ಎಂದು ಮನವಿ ಮಾಡಿದರು.

ಈ ವೇಳೆ ದಿ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್(ಇಂಡಿಯಾ) ಮೈಸೂರು ಘಟಕದ ಅಧ್ಯಕ್ಷ ಎಚ್.ಎಸ್.ಸುರೇಶ್ ಬಾಬು, ಕಾರ್ಯದರ್ಶಿ ಎಂ.ಕೆ.ನಂಜಯ್ಯ, ಸಂಚಾಲಕ ಬಾನು ಪ್ರಸಾದ್ ಸೇರಿದಂತೆ ಇತರರಿದ್ದರು.

ಮೀಸಲಾತಿ ಯಾರಪ್ಪನ ಸ್ವತ್ತಲ್ಲ; ವಿ.ಎಸ್. ಉಗ್ರಪ್ಪ ಆಕ್ಷೇಪದ ಹೇಳಿಕೆ

ಹಾವೇರಿ, ಡಿ.14: ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡ ಸ್ಥಾನಮಾನಕ್ಕೆ ಸೇರ್ಪಡೆಗೊಳಿಸುವ ವಿಚಾರವಾಗಿ ಹಾವೇರಿ ನಗರದಲ್ಲಿ ಮಾಜಿ ಸಂಸದರಾದ ವಿಎಸ್ ಉಗ್ರಪ್ಪ ಅವರು ಮಹತ್ವದ ಹೇಳಿಕೆ ನೀಡಿದ್ದಾರೆ.



ಮೀಸಲಾತಿ ಯಾರಪ್ಪನ ಸ್ವತ್ತಲ್ಲ: ಸರಕಾರಕ್ಕೆ ಮೀಸಲಾತಿ ನೀಡುವುದು ಕರ್ತವ್ಯವಾಗಿದ್ದು, ದೇಶದಲ್ಲಿ ಮೀಸಲಾತಿ ಅನ್ನೋದು ಯಾರಪ್ಪನ ಸ್ವತ್ತಲ್ಲ. ಜನಪ್ರತಿನಿಧಿಗಳೂ ಸಂವಿಧಾನದಂತೆ ನಡೆದುಕೊಳ್ಳುತ್ತೇವೆ ಅಂತ ಹೇಳುತ್ತಾರೆ. ಆದರೆ ಮೀಸಲಾತಿ ವಿಚಾರದಲ್ಲಿ ಮೊದಲು ಕುಲಶಾಸ್ತ್ರ ಅಧ್ಯಯನ ಆಗಬೇಕು ಅಲ್ವಾ, ಕುಲಶಾಸ್ತ್ರ ಅಧ್ಯಯನವಿಲ್ಲದೆ ನೇರವಾಗಿ ಸೇರಿಸೋದಕ್ಕೆ ಆಗುತ್ತಾ ಎಂದು ಪ್ರಶ್ನಿಸಿದರು.

ಎಸ್‌ಟಿ ಮೀಸಲಾತಿ ಪರ್ಸೆಂಟ್ ಕುರಿತು ಉಗ್ರಪ್ಪ ಆಕ್ಷೇಪ: ಎಸ್‌ಟಿ ಮೀಸಲಾತಿ ಪರ್ಸೆಂಟ್ ಕುರಿತು ಆಕ್ಷೇಪ ವ್ಯಕ್ತಪಡಿಸಿದ ಉಗ್ರಪ್ಪ ಅವರು, ಮೀಸಲಾತಿಯ ಪರ್ಸೆಂಟೇಜ್ 7 ಇದ್ದದ್ದನ್ನು 3 ಕ್ಕೆ ತಂದು ನಿಲ್ಲಿಸಿದ್ದಾರೆ. ಇನ್ನೊಂದು 7 ಪರ್ಸೆಂಟ್ ಜನರನ್ನ ಇಲ್ಲಿಗೆ ತಂದು ಹಾಕಿದ್ದಲ್ಲಿ ಸುಮಾರು 12 ರಿಂದ 14% ಜನರು ಕಿತ್ತಾಡಬೇಕಾ? ಎಂದು ಪ್ರಶ್ನಿಸಿದ್ದಾರೆ.

ಇಂಡಿಯನ್ ಟಿವಿ ವರದಿಗಾರ, ಕ್ಯಾಮರಾಮನ್‌ಗೆ ಪ್ರಶಸ್ತಿ

ಮೈಸೂರು, ಡಿ.14– ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ನಡೆದ ಪತ್ರಿಕಾ ದಿನಾಚರಣೆಯಲ್ಲಿ ಉತ್ತಮ ವರದಿಗಾರಿಕೆಗೆ ಪ್ರಶಸ್ತಿ ಸ್ವೀಕರಿಸಿದ ಇಂಡಿಯನ್ ಟಿವಿ ವರದಿಗಾರ ಚಂದನ್ ಬಲರಾಮ್ ಹಾಗೂ ಕ್ಯಾಮರಾಮನ್ ಸತೀಶ್‌ಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎಸ್.ವೆಂಕಟೇಶ್‌ಕುಮಾರ್ ಅಭಿನಂದಿಸಿದ್ದಾರೆ.

ಮೈಸೂರಿನಲ್ಲಿ ನಡೆಯುತ್ತಿದ್ದ ರೇವ್ ಪಾರ್ಟಿ ಬಯಲಿಗೆಳೆಯಲು ಸತತ ಎರಡು ತಿಂಗಳಿನಿಂದ ಶ್ರಮಿಸಿದ ಇಂಡಿಯನ್ ಟಿವಿ ತಂಡ, ಮೈಸೂರು ಜಿಲ್ಲಾ ಪೊಲೀಸರ ಗಮನಕ್ಕೆ ತಂದು ದಾಳಿ ನಡೆಸಲು ಸಹಕರಿಸಿತ್ತು. ಈ ವೇಳೆ ಪಾರ್ಟಿ ಆಯೋಜಕರು ಹಾಗೂ ಡ್ರಗ್ಸ್ ಸೇವನೆ ಮಾಡುತ್ತಿದ್ದ ಯುವಕರನ್ನು ಬಂಧಿಸಿ, ಕಾನೂನು ಕ್ರಮ ಕೈಗೊಳ್ಳಲಾಗಿತ್ತು. ಈ ವಿಚಾರ ಮುಖ್ಯಮಂತ್ರಿಗಳ ಗಮನಕ್ಕೆ ಹೋಗಿತ್ತಲ್ಲದೆ, ರಾಷ್ಟ್ರಮಟ್ಟದಲ್ಲೂ ಸುದ್ದಿಯಾಗಿತ್ತು. ಇದನ್ನು ಗುರುತಿಸಿದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು ಪ್ರಶಸ್ತಿ ನೀಡಿ, ಅಭಿನಂದಿಸಿರುವುದು ಸಂತಸ ತಂದಿದೆ ಎಂದು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.



ಹಾಸನ ಜಿಲ್ಲಾ ಬಳಗಕ್ಕೆ ನಿವೇಶನ ಕೊಡಿಸಲು ಬದ್ಧ

ಎಂಎಲ್ಸಿ ಸಿ.ಎನ್. ಮಂಜೇಗೌಡ ಭರವಸೆ



ಮೈಸೂರಿನ ಇನ್ಸಿಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ನಡೆದ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ ಹಾಗೂ ಸರ್ವ ಸದಸ್ಯರ ಸಭೆಯನ್ನು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಉದ್ಘಾಟಿಸಿದರು.

ಮೈಸೂರು, ಡಿ.14– ಹಾಸನ ಜಿಲ್ಲಾ ಬಳಗಕ್ಕೆ ಎಂಡಿಎದಿಂದ ನಿವೇಶನ ಕೊಡಿಸುವುದರ ಜೊತೆಗೆ ಕಟ್ಟಡ ಕಟ್ಟಿಸಲು ಧನ ಸಹಾಯ ಮಾಡುವುದಾಗಿ ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ತಿಳಿಸಿದರು.

ನಗರದ ಇನ್ಸಿಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಹಾಸನ ಜಿಲ್ಲಾ ಬಳಗದ ವತಿಯಿಂದ ನಡೆದ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ ಹಾಗೂ ಸರ್ವ ಸದಸ್ಯರ ಸಭೆ (2025–26) ಉದ್ಘಾಟಿಸಿ ಮಾತನಾಡಿದ ಅವರು ನಾನು ಇಂದು ಎಂಎಲ್‌ಸಿ ಆಗಿರಬೇಕಾದರೆ ಶಿಕ್ಷಣವೇ ಕಾರಣ. ಆದ್ದರಿಂದ ನಿಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಪ್ರತಿಭಾವಂತ ಮಕ್ಕಳನ್ನು ಶೈಕ್ಷಣಿಕ ಕಾರ್ಯಾಗಾರಗಳಿಗೆ, ಸಭೆ–ಸಮಾರಂಭಗಳಿಗೆ ಕರೆದುಕೊಂಡು ಹೋದರೆ ಅವರ ಜ್ಞಾನ, ಸಂಬಂಧಗಳು ಹೆಚ್ಚಾಗುತ್ತವೆ.

ಹಾಸನ ಜಿಲ್ಲೆಯವರು ಮೈಸೂರಿನಲ್ಲಿ ಅಂದಾಜು 25 ಸಾವಿರ ಜನ ಇದ್ದಾರೆ. ಆದರೆ, ಇಲ್ಲಿ ಕಡಿಮೆ ಜನ ಸೇರಿದ್ದೀರಿ, ಸಂಘ ಬೆಳೆದು ಸಾಧನೆ ಮಾಡಬೇಕಾದರೆ ನೀವೆಲ್ಲರೂ ಸಂಘಟಿತರಾಗಬೇಕು. ಬಾಂಧವ್ಯಗಳನ್ನು ಬೆಳೆಸಿಕೊಳ್ಳಬೇಕು. ಮನುಷ್ಯ ಹುಟ್ಟಿದ ಮೇಲೆ ಈ ಭೂಮಿಯ ಮೇಲೆ ಹೆಜ್ಜೆ ಗುರುತನ್ನು ಬಿಟ್ಟು ಹೋಗಬೇಕು. ಈ ನಿಟ್ಟಿನಲ್ಲಿ ಸಮಾಜ ಮತ್ತು ಸಂಘದ ಕೆಲಸ ಮಾಡಲು ಸದಾ ಸಿದ್ಧನಿದ್ದೇನೆ. ಸಚಿವರಾದ ಭೈರತಿ ಸುರೇಶ್ ಅವರೊಂದಿಗೆ ಮಾತನಾಡಿದ್ದೇನೆ. ಎಂಡಿಎದಲ್ಲಿ ಸಿಎ ನಿವೇಶನಕ್ಕೆ ಹಣ ಕಟ್ಟಿರುವವರಿಗೆಲ್ಲಾ ನಿವೇಶನ ಕೊಡುವುದಾಗಿ ತಿಳಿಸಿದ್ದಾರೆ. ಹಾಸನ ಜಿಲ್ಲಾ ಬಳಗಕ್ಕೆ ನಿವೇಶನ ಮಂಜೂರಾಗುತ್ತದೆ. ನಿವೇಶನಕ್ಕೆ ಹಾಗೂ ಕಟ್ಟಡ ನಿರ್ಮಾಣ ಮಾಡಲು ಧನ ಸಹಾಯ ಮಾಡುವುದಾಗಿ ತಿಳಿಸಿದರು

ಸಮಾರಂಭದಲ್ಲಿ ಪ್ರೊ. ಲಕ್ಷ್ಮಿನಾರಾಯಣ ಆರೋರ, ಉದ್ಯಮಿ ಬಾಲಾಜಿ ಶೇಖರ್, ಡಿವೈಎಸ್‌ಪಿ ಶಾಂತಮಲ್ಲಪ್ಪ, ನಿವೃತ್ತ ಪ್ರಾಂಶುಪಾಲ ಶಿವೇಗೌಡ, ಅಧ್ಯಕ್ಷರಾದ ಪಿ.ಶಾರದಮ್ಮ, ಗೌರವಾಧ್ಯಕ್ಷರಾದ ಬಿ.ಬಿ.ರಾಮಕೃಷ್ಣ, ಉಪಾಧ್ಯಕ್ಷರಾದ ಮೋದಾಮಣಿ, ರಘುನಾಥ್, ಟಿ.ಎಸ್.ರಾಮಚಂದ್ರ, ಜೆ.ಬಿ.ರಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಬಿ.ಜಿ. ರಂಗೇಗೌಡ, ಡಿ.ಎಂ ಸುಬ್ಬೇಗೌಡ, ಬಿ.ಡಿ. ಶಿವಣ್ಣ, ಜಿ.ಜೆ ರೇವಣ್ಣ ಉಪಸ್ಥಿತರಿದ್ದರು.

ವೋಟ್ ಚೋರಿ ವಿರುದ್ಧ ದೆಹಲಿಯಲ್ಲಿ ಕಾಂಗ್ರೆಸ್ ಕಹಳೆ

ಪ್ರತಿಧ್ವನಿಸಿದ ಆಳಂದ ಕ್ಷೇತ್ರದ ಮತಗಳ್ಳತನ



ನವದೆಹಲಿ, ಡಿ.14– ವೋಟ್ ಚೋರಿ ವಿರುದ್ಧವಾಗಿ ಇಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಆಳಂದ ಕ್ಷೇತ್ರದ ಮತಗಳ್ಳತನ ಬಗ್ಗೆ ರಾಹುಲ್ ಗಾಂಧಿ ಪ್ರಸ್ತಾಪಿಸಿದ್ದಾರೆ. ಅಷ್ಟೇ ಅಲ್ಲದೆ ಚುನಾವಣಾ ಆಯೋಗ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ಮಾಡಿದ್ದಾರೆ.

ದೆಹಲಿಯಲ್ಲಿ ನಡೆದ ಬೃಹತ್ ಪ್ರತಿಭಟನೆ ವೇಳೆ ಮಾತನಾಡಿದ ರಾಹುಲ್ ಗಾಂಧಿ, ಕರ್ನಾಟಕದಲ್ಲಿ ಮತಗಳ್ಳತನ ಆಗಿದ್ದು ಸಾಬೀತಾಗಿದೆ. ನರೇಂದ್ರ ಮೋದಿ ಮತ ಕಳ್ಳತನ ಮಾಡಿ ಅಧಿಕಾರಕ್ಕೆ ಬಂದಿದ್ದಾರೆ. ಅಷ್ಟೇ ಅಲ್ಲದೆ ಬಿಜೆಪಿಯ ಜೊತೆ ಕೇಂದ್ರ ಚುನಾವಣಾ ಆಯೋಗ ಶಾಮೀಲಾಗಿದ್ದು, ಚುನಾವಣಾ ಆಯೋಗಕ್ಕಾಗಿ ಕಾನೂನನ್ನೇ ಬದಲಾವಣೆ ಮಾಡಿದ್ದಾರೆ ಎಂದು ಆರೋಪ ಮಾಡಿದ್ದಾರೆ.

ಹರಿಯಾಣದಲ್ಲಿ ಮತಗಳ್ಳತನ ಹೇಗೆ ಆಗಿದೆ ಎಂಬುದು ತಿಳಿಯಬೇಕಿದೆ. ಒಂದೇ ಬೂತ್‌ನಲ್ಲಿ 200 ಸಲ ಹೇಗೆ ಮತ ಹಾಕಲು ಸಾಧ್ಯ? ಸಂಸತ್‌ನಲ್ಲಿ ಪ್ರಸ್ತಾಪ ಮಾಡಲು ಮುಂದಾದರೆ ಅವಕಾಶ ಕೊಡಲಿಲ್ಲ. ಹಿಂಸೆಯಿಲ್ಲದೆ ನಾವು ಈ ಯುದ್ಧ ಗೆಲ್ಲುತ್ತೇವೆ ಎಂದಿದ್ದಾರೆ.

ಸತ್ಯವು ಅತ್ಯಂತ ಮುಖ್ಯ ಎಂದು ಮಹಾತ್ಮ ಗಾಂಧೀಜಿ ಹೇಳಿದ್ದರು. ಆದರೆ ಸತ್ಯವಲ್ಲ, ಶಕ್ತಿಯೇ ಮುಖ್ಯ ಎಂದು ಭಾಗವತ್ ಹೇಳಿದರು. ಸತ್ಯ ಎತ್ತಿಹಿಡಿಯುವ ಮೂಲಕ ಮೋದಿ ಮತ್ತು ಆರ್‌ಎಸ್‌ಎಸ್ ಸರ್ಕಾರವನ್ನು ನಾವು ತೆಗೆದುಹಾಕುತ್ತೇವೆ. ಮೋಹನ್ ಭಾಗವತ್ ಸತ್ಯಕ್ಕೆ ಯಾವುದೇ ಬೆಲೆಯಿಲ್ಲ ಅಂತಾರೆ, ನಾವು ಸತ್ಯದ ಹಿಂದೆ ಇರುವವರು ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ಇವಿಎಂ ಮಷಿನ್ ಹ್ಯಾಕ್: ಪ್ರತಿಭಟನಾ ಸಮಾವೇಶದಲ್ಲಿ ಸಂಸದೆ ಪ್ರಿಯಾಂಕಾ ಗಾಂಧಿ ಮಾತನಾಡಿ, ಪ್ರತಿ ಚುನಾವಣೆಯಲ್ಲೂ ಇವಿಎಂ ಮಷಿನ್ ಹ್ಯಾಕ್ ಮಾಡಲಾಗಿದೆ. ಮಹಾರಾಷ್ಟ್ರ, ಹರಿಯಾಣ ಚುನಾವಣೆಯಲ್ಲಿ ಮತಗಳ್ಳತನ ಆಗಿದೆ. ಸಂಸತ್‌ನಲ್ಲಿ ಮತಗಳ್ಳನದ ಬಗ್ಗೆ ಚರ್ಚೆಗೆ ಅವಕಾಶವನ್ನೇ ನೀಡುತ್ತಿಲ್ಲ ಎಂದ ಪ್ರಿಯಾಂಕಾ ಗಾಂಧಿ, ನ್ಯಾಯಯುತ ಚುನಾವಣೆ ಎದುರಿಸಲಿ ಎಂದು ಸವಾಲು ಹಾಕಿದ್ದಾರೆ.

ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆ ನಡೆದರೆ ಬಿಜೆಪಿ ಗೆಲ್ಲಲ್ಲ ಎಂದು ಅವರಿಗೂ ಗೊತ್ತಿದೆ. ಬಿಹಾರ ಚುನಾವಣೆಯಲ್ಲಿ ಸೋತಿದ್ದಕ್ಕೆ ನಿರಾಸೆಗೊಳ್ಳಬೇಕಾಗಿಲ್ಲ. ಏಕೆಂದರೆ ಅವರು ಕಳ್ಳತನದ ಮೂಲಕ ಗೆದ್ದಿದ್ದಾರೆ ಎಂದು ಗೊತ್ತಿದೆ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ಮಾಡಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಪ್ರಧಾನಿ ಮೋದಿ ಯಾವತ್ತೂ ಅಧಿವೇಶನಕ್ಕೆ ಹಾಜರಾಗುವುದಿಲ್ಲ. ಅಧಿವೇಶನದ ನಂತರ ರಾಹುಲ್ ವಿದೇಶಕ್ಕೆ ಹೋಗ್ತಾರೆ ಅಂತಾರೆ. ರಾಹುಲ್ ವಿದೇಶಕ್ಕೆ ಹೋಗುತ್ತಾರೆಂದು ಬಿಜೆಪಿಗರು ಪ್ರಶ್ನಿಸುತ್ತಿದ್ದರು, ಆದರೆ ಮೋದಿ ಅಧಿವೇಶನಕ್ಕೆ ಹಾಜರಾಗದೆ ವಿದೇಶಕ್ಕೆ ಹೋಗುತ್ತಾರೆ ಎಂದು ಆರೋಪಿಸಿದರು.

ತೆಲಂಗಾಣ ಸಿಎಂ ರೇವಂತ್ ಮಾತನಾಡಿ, ನಮ್ಮ ಮಾತು ಮೋದಿಗೆ ಕೇಳಬೇಕು, ಅವರು ನಿದ್ದೆಯಿಂದ ಏಳಬೇಕು. ಮೊದಲು ಮತದಾರರ ಪಟ್ಟಿಯಿಂದ ನಮ್ಮ ಹೆಸರನ್ನು ತೆಗೆಯುತ್ತಾರೆ. ಆಮೇಲೆ ಆಧಾರ್ ರದ್ದು ಮಾಡ್ತಾರೆ, ರೇಷನ್ ಕಾರ್ಡ್ ತೆಗೆದು ಹಾಕ್ತಾರೆ, ಅದಕ್ಕೆ ನಾವು ಅವಕಾಶ ನೀಡಬಾರದು ಎಂದು ಗುಡುಗಿದ್ದಾರೆ.

ಈ ಪ್ರತಿಭಟನೆಯಲ್ಲಿ ಕರ್ನಾಟಕ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿ ಕಾಂಗ್ರೆಸ್ ಸಚಿವರು, ಶಾಸಕರು ಭಾಗವಹಿಸಿದ್ದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿ, ಪ್ರಜಾಪ್ರಭುತ್ವ ಅಡಿಯಲ್ಲಿ ಮತ ಚಲಾಯಿಸುವುದು ಪ್ರತಿಯೊಬ್ಬನ ಕರ್ತವ್ಯ. 1 ಕೋಟಿ 33 ಲಕ್ಷ ಸಹಿ ಸಂಗ್ರಹ ಆಗಿದೆ ಎಂದು ತಿಳಿಸಿದ್ದಾರೆ. ಬಿಜೆಪಿ ಬಹಳಷ್ಟು ರಾಜ್ಯಗಳಲ್ಲಿ ವೋಟ್ ಚೋರಿಯಿಂದಲೇ ಅಧಿಕಾರಕ್ಕೆ ಬಂದಿದ್ದಾರೆ. ಇದರ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ ಮಾಡುತ್ತಿದೆ. ಈ ಮೂಲಕ ಪ್ರಧಾನಿ ಮೋದಿ, ಎಲೆಕ್ಷನ್ ಕಮಿಷನ್, ಅಮಿತ್ ಶಾಗೆ ಪ್ರಶ್ನೆ ಮಾಡುತ್ತೇವೆ. ಚುನಾವಣಾ ಆಯೋಗ, ಇಡಿ, ಐಟಿ ಇವರ ನಿರ್ದೇಶನದಲ್ಲೇ ಕಾರ್ಯ ನಿರ್ವಹಿಸುತ್ತವೆ. ಬೆಂಗಳೂರು ಸೆಂಟ್ರಲ್, ಆಳಂದದಲ್ಲಿ ವೋಟ್ ಚೋರಿ ಆಗಿದೆ ಅಂತ ದಾಖಲೆ ಕೊಟ್ಟಿದ್ದೇವೆ. ಮುಂದಿನ ಚುನಾವಣೆಗಳಲ್ಲಿ ಮತಗಳ್ಳತನ ಮುಂದುವರೆಯಬಾರದು ಎಂಬುದು ಇದು ಉದ್ದೇಶ ಎಂದು ತಿಳಿಸಿದ್ದಾರೆ.

ಎಸ್‌ಟಿಜಿ ಸಂಸ್ಥೆಯಿಂದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ

ಶಾಲಾ ವಾರ್ಷಿಕೋತ್ಸವ ಸಮಾರೋಪದಲ್ಲಿ ಚಿತ್ರನಟ ಸುಚೇಂದ್ರ ಪ್ರಸಾದ್





ಸಮಾರೋಪ ಸಮಾರಂಭವನ್ನು ಚಿತ್ರನಟ ಸುಚೇಂದ್ರಪ್ರಸಾದ್ ಉದ್ಘಾಟಿಸಿದರು. ಮತ್ತೊಂದು ಚಿತ್ರದಲ್ಲಿ ಸೋಷಿಯಲ್ ಮೀಡಿಯಾದಿಂದಾಗುತ್ತಿರುವ ದುಷ್ಪರಿಣಾಮಗಳ ಕುರಿತು ಮಕ್ಕಳ ನೃತ್ಯ ಪ್ರದರ್ಶನ.

ಚಿನಕುರಳಿ, ಡಿ.14– ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕೆಂದು ಆರಂಭ ಗೊಂಡಿರುವ ಎಸ್‌ಟಿಜಿ ಶಿಕ್ಷಣ ಸಂಸ್ಥೆಯು ಗುಣಮಟ್ಟದ ಶಿಕ್ಷಣದ ಮೂಲಕ ಮಕ್ಕಳನ್ನು ದೇಶದ ಆಸ್ತಿ ಮಾಡಲು ಹೊರಟಿದೆ ಎಂದು ಚಿತ್ರನಟ ಸುಚೇಂದ್ರ ಪ್ರಸಾದ್ ತಿಳಿಸಿದರು.

ಚಿನಕುರಳಿಯ ಎಸ್‌ಟಿಜಿ ಪಬ್ಲಿಕ್ ಶಾಲೆಯಲ್ಲಿ ನಡೆದ ಸಂಸ್ಕೃತಿ ಸಮಾಗಮ–2025 ಶಾಲಾ ವಾರ್ಷಿಕೋತ್ಸವ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳು ಅದ್ಭುತ ಸಾಧನೆ ಮಾಡಬೇಕು. ಸಮಾಜದಲ್ಲಿ ಉನ್ನತ ಸ್ಥಾನಕ್ಕೆ ಏರಬೇಕು ಎಂಬ ಕನಸ್ಸು ಕಾಣುತ್ತಾರೆ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಎಸ್‌ಟಿಜಿ ಶಿಕ್ಷಣ ಸಂಸ್ಥೆಯೂ ಸಹಕಾರಿಯಾಗುತ್ತಿದೆ. ಮಕ್ಕಳು ಸಿಕ್ಕ ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ದೊಡ್ಡಮಟ್ಟದಲ್ಲಿ ಸಾಧನೆ ಮಾಡುವ ಕಡೆಗೆ ಮುನ್ನಡೆಯಬೇಕು ಎಂದು ಸಲಹೆ ನೀಡಿದರು.

> ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು ಎಂಬ ಉದ್ದೇಶದಿಂದಲೇ ಶಾಲೆ ಆರಂಭಿಸಿದ್ದೇವೆ. ಮಕ್ಕಳ ಭವಿಷ್ಯ ರೂಪಿಸಲು ಪೋಷಕರು ಅತ್ಯುತ್ತಮ ಶಿಕ್ಷಣ ನೀಡಬೇಕಾಗಿದೆ. ಅದಕ್ಕಾಗಿ ನಮ್ಮ ಸಂಸ್ಥೆ ಅಮೆರಿಕಾದ ವಿಶ್ವವಿದ್ಯಾನಿಲಯದೊಂದಿಗೆ ವಿದ್ಯಾರ್ಥಿ ವಿನಿಮಯಕ್ಕೆ ಒಪ್ಪಂದ ಮಾಡಿಕೊಂಡು ಶಿಕ್ಷಣ ನೀಡುವ ಕೆಲಸ ಮಾಡುತ್ತಿದ್ದೇವೆ. ನಮ್ಮ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ನೂರಾರು ವಿದ್ಯಾರ್ಥಿಗಳು ಮೆಡಿಕಲ್, ಇಂಜಿನಿಯರಿಂಗ್ ಸೇರಿದಂತೆ ಅನೇಕ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ ಎಂದರೆ ನಮಗೆ ಖುಷಿಯಾಗುತ್ತದೆ. ನಮ್ಮ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳಿಗೆ ಅಂತರರಾಷ್ಟ್ರ ಮಟ್ಟದಲ್ಲೂ ಸಹ ಸಹಕಾರವೆಂದರೆ ನಮ್ಮ ಸಂಸ್ಥೆ ಅವರಿಗೆ ನೆರವು ನೀಡಲಿದೆ.
>
> - ಸಿ.ಎಸ್.ಪುಟ್ಟರಾಜು, ಎಸ್‌ಟಿಜಿ ಶಾಲೆ ಅಧ್ಯಕ್ಷರು, ಮಾಜಿ ಸಚಿವರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ತಮ್ಮ ತೋಟವನ್ನೇ ಸುಂದರ ಶಿಕ್ಷಣ ಸಂಸ್ಥೆಯನ್ನಾಗಿ ರೂಪಿಸಿದ್ದಾರೆ. ನಮ್ಮ ಮಕ್ಕಳು ಅಮೆರಿಕದಲ್ಲಿ ವಿದ್ಯಾಭ್ಯಾಸ ಮಾಡಬೇಕು ಎಂಬ ಕನಸ್ಸು ಕಾಣುವ ಪೋಷಕರ ನಡುವೆ ಸಿ.ಎಸ್.ಪುಟ್ಟರಾಜು ಅವರು ಅಮೆರಿಕದಲ್ಲಿ ವಿದ್ಯಾಭ್ಯಾಸ ಮಾಡಿದ ತಮ್ಮ ಮಗನನ್ನು ಹುಟ್ಟೂರಿಗೆ ಕರೆತಂದು ನಮ್ಮೂರಿನ ಮಕ್ಕಳಿಗೆ ನೀನು ಶಿಕ್ಷಣ ಸಂಸ್ಥೆಯ ಮೂಲಕ ಸೇವೆ ಮಾಡಬೇಕೆಂದು ಶಿಕ್ಷಣ ಸಂಸ್ಥೆ ಕಟ್ಟಿ ಮುನ್ನಡೆಸುತ್ತಿದ್ದಾರೆ. ಅವರ ಮಗ ಸಿ.ಪಿ.ಶಿವರಾಜು ತಂದೆ ಮಾತಿಗೆ ಬೆಲೆಕೊಟ್ಟು ಶಿಕ್ಷಣ ಸಂಸ್ಥೆಯ ಮೂಲಕ ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದಾರೆ. ಅಲ್ಲದೆ ಅಮೆರಿಕದ ವಿಶ್ವವಿದ್ಯಾನಿಲಯದೊಂದಿಗೆ ವಿದ್ಯಾರ್ಥಿಗಳ ವಿನಿಮಯಕ್ಕೆ ಒಪ್ಪಂದ ಮಾಡಿಕೊಂಡು ಇಲ್ಲಿನ ಕೆಲವು ಮಕ್ಕಳನ್ನು ಅಧ್ಯಯನಕ್ಕಾಗಿ ಅಮೆರಿಕಕ್ಕೆ ಕಳುಹಿಸಿ ವಿದ್ಯಾಭ್ಯಾಸ ಕೊಡಿಸುತ್ತಿರುವುದು ಶ್ಲಾಘನೀಯ ಎಂದು ಬಣ್ಣಿಸಿದರು.

ಸಂಸ್ಥೆ ಅಧ್ಯಕ್ಷರು, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ನಮ್ಮ ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುವ ಅಧ್ಯಾಪಕರು, ಸಿಬ್ಬಂದಿ ನಮ್ಮ ಕುಟುಂಬದ ಸದಸ್ಯರಿದ್ದಂತೆ. ನಮ್ಮ ಕುಟುಂಬ ಅವರ ಎಲ್ಲಾ ಕಷ್ಟಸುಖ, ನೋವು–ನಲಿವುಗಳಲ್ಲಿ ಜೊತೆಗೆ ನಿಲ್ಲುತ್ತೇವೆ ಎಂದರು.

ಈ ವೇಳೆ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ನೃತ್ಯ ಪ್ರದರ್ಶನ ನಡೆಯಿತು. ಪ್ರಸ್ತುತ ಸೋಷಿಯಲ್ ಮೀಡಿಯಾದಿಂದ ಆಗುತ್ತಿರುವ ದುಷ್ಪರಿಣಾಮ, ಪರಿಸರ ಸಂರಕ್ಷಣೆ, ಹಳ್ಳಿ ಪರಿಸರ ಸೇರಿದಂತೆ ನಾಡು–ನುಡಿ, ಭಾಷೆಗೆ ಸಂಬಂಧಿಸಿದ ಹಲವು ನೃತ್ಯ ಪ್ರದರ್ಶನಗಳು ಮೂಡಿ ಬಂದವು. ಮಕ್ಕಳ ನೃತ್ಯ ಪ್ರದರ್ಶನ ಕಂಡು ಪೋಷಕರು ಚಪ್ಪಾಳೆ ತಟ್ಟಿ ಸಂಭ್ರಮಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಸಿಇಒ ಸಿ.ಪಿ.ಶಿವರಾಜು, ಪ್ರಾಂಶುಪಾಲೆ ವಾಣಿಶ್ರೀ, ಆಡಳಿತಾಧಿಕಾರಿ ನಿವೇದಿತಾ ನಾಗೇಶ್, ಉಪಪ್ರಾಂಶುಪಾಲ ಲಿಂಗರಾಜು, ಅನಂತು ಹಾಜರಿದ್ದರು.

ನಾಳೆ ಹೆಚ್ಡಿಕೆ ಹುಟ್ಟುಹಬ್ಬ: ಮಂಡ್ಯ, ಮೈಸೂರು ಪ್ರವಾಸ



ಮಂಡ್ಯ, ಡಿ.14– ಕೇಂದ್ರದ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಡಿ.16ರಂದು 66ನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದು, ಈ ಹಿನ್ನೆಲೆಯಲ್ಲಿ ಸ್ವಕ್ಷೇತ್ರ ಮಂಡ್ಯ ಮತ್ತು ಮೈಸೂರು ಜಿಲ್ಲೆ ಪ್ರವಾಸ ಹಮ್ಮಿಕೊಂಡಿದ್ದಾರೆ. ಅಂದು ಬೆಳಿಗ್ಗೆ 8 ಗಂಟೆಗೆ ಮದ್ದೂರಿಗೆ ಆಗಮಿಸಲಿರುವ ಅವರು ನಗರದ ಟಿ.ಬಿ.ವೃತ್ತದಲ್ಲಿ ಕಾರ್ಯಕರ್ತರಿಂದ ಅಭಿನಂದನೆ ಸ್ವೀಕರಿಸಲಿದ್ದಾರೆ. ಬಳಿಕ 8.30ಕ್ಕೆ ಮಂಡ್ಯ ನಗರದ ಜಯ ಚಾಮರಾಜೇಂದ್ರ ಒಡೆಯರ್ (ಸಂಜಯ) ವೃತ್ತದಲ್ಲಿ ಕಾರ್ಯಕರ್ತರಿಂದ ಅಭಿನಂದನೆ ಮತ್ತು ಬೆಳಿಗ್ಗೆ 9 ಗಂಟೆಗೆ ಶ್ರೀರಂಗಪಟ್ಟಣದ ಬಸ್ ನಿಲ್ದಾಣದ ಬಳಿ ಅಭಿನಂದನೆ ಸ್ವೀಕರಿಸಲಿದ್ದಾರೆ. ಜೆಡಿಎಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಪಕ್ಷದ ಜಿಲ್ಲಾಧ್ಯಕ್ಷ ಡಿ.ರಮೇಶ್ ಮನವಿ ಮಾಡಿದ್ದಾರೆ. ಬಳಿಕ ಹತ್ತು ಗಂಟೆಗೆ ಮೈಸೂರಿನ ಚಾಮುಂಡೇಶ್ವರಿ ಬೆಟ್ಟಕ್ಕೆ ಆಗಮಿಸಿ ದೇವಿಗೆ ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ಬಳಿಕ ಮಧ್ಯಾಹ್ನ 3.30ಕ್ಕೆ ಮತ್ತೆ ಮಂಡ್ಯ ಜಿಲ್ಲೆಗೆ ಆಗಮಿಸಲಿರುವ ಅವರು, ಮಳವಳ್ಳಿಯಲ್ಲಿ ರಾಷ್ಟ್ರಪತಿ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಗುಡುಗನಹಳ್ಳಿ ಡೇರಿಗೆ ಅಧ್ಯಕ್ಷೆ, ಉಪಾಧ್ಯಕ್ಷೆ ಆಯ್ಕೆ



ನೂತನ ಅಧ್ಯಕ್ಷೆ ಗೌರಮ್ಮ, ಉಪಾಧ್ಯಕ್ಷೆ ಲಲಿತಾ ಅವರನ್ನು ಮುಖಂಡರು ಅಭಿನಂದಿಸಿದರು.

ಕೆ.ಆರ್.ಪೇಟೆ, ಡಿ.14– ತಾಲೂಕಿನ ಗುಡುಗನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಅಧ್ಯಕ್ಷೆಯಾಗಿ ಕಾಂಗ್ರೆಸ್ ಬೆಂಬಲಿತ ಸದಸ್ಯೆ ಗೌರಮ್ಮ ಉಪಾಧ್ಯಕ್ಷೆಯಾಗಿ ಲಲಿತಾ ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಗೌರಮ್ಮ ಮತ್ತು ಲಲಿತಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಸಂಘದ ಸಿಇಓ ಸೌಮ್ಯ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಚುನಾವಣೆಯಲ್ಲಿ ನಿರ್ದೇಶಕರಾದ ಪಲ್ಲವಿ, ಸುಜಾತ, ಅಶ್ವಿನಿ, ಜ್ಯೋತಿ, ಗೌರಮ್ಮ, ಲಲಿತಾ ಹಾಗೂ ಮನ್‌ಮುಲ್ ಮಾರ್ಗದ ವಿಸ್ತರಣಾಧಿಕಾರಿ ಬಿ.ಸಿ.ಮಧು ಭಾಗವಹಿಸಿದ್ದರು. ಉಳಿದ ನಾಲ್ವರು ನಿರ್ದೇಶಕರು ಚುನಾವಣೆಗೆ ಗೈರು ಹಾಜರಾಗಿದ್ದರು. ಚುನಾವಣಾ ಸಹಾಯಕರಾಗಿ ಹಾಲು ಪರೀಕ್ಷಕಿ ಸೌಮ್ಯ ಮತ್ತಿತರರು ಕಾರ್ಯ ನಿರ್ವಹಿಸಿದರು.

ಹಿರಿಯ ಮುಖಂಡ ಜಿ.ಎ.ರಾಯಪ್ಪ ಮಾತನಾಡಿ, ಗುಡುಗನಹಳ್ಳಿ ಡೇರಿ ನೂತನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಎಲ್ಲಾ ನಿರ್ದೇಶಕರು ಹಾಗೂ ಗ್ರಾಮಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಡೇರಿ ಅಭಿವೃದ್ಧಿಗೆ ಶ್ರಮಿಸಬೇಕು. ಹಾಲು ಉತ್ಪಾದಕು ಡೇರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕಾರ ನೀಡಬೇಕು. ಸಂಘಕ್ಕೆ ನಿತ್ಯ 15 ಕ್ಯಾನ್ ಹಾಲು ಪೂರೈಕೆ ಆಗುತ್ತಿದೆ. ಇದರಿಂದ ಗ್ರಾಮದಲ್ಲಿ ಹೈನುಗಾರಿಕೆ ನಂಬಿಕೊಂಡು ಬದುಕುತ್ತಿರುವ ಕುಟುಂಬಗಳಿಗೆ ಸಮಯಕ್ಕೆ ಸರಿಯಾಗಿ ಹಾಲಿನ ಹಣ ಹಾಗೂ ಸರ್ಕಾರದ ಪ್ರೋತ್ಸಾಹ ಧನ ಬಿಡುಗಡೆ ಆಗುವಂತೆ ನೋಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಕಳಪೆ ಹಾಲಿಗೆ ಅವಕಾಶ ನೀಡಬಾರದು ಎಂದರು. ನಮ್ಮ ಸಂಘದ ಅಭಿವೃದ್ಧಿಗೆ ಸಹಕಾರ ನೀಡುತ್ತಿರುವ ಮನ್‌ಮುಲ್ ನಿರ್ದೇಶಕರಾದ ಡಾಲು ರವಿ, ಎಂ.ಬಿ.ಹರೀಶ್, ಜಿಪಂ ಮಾಜಿ ಸದಸ್ಯ ದೇವರಾಜು, ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್ ಅವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ನೂತನ ಅಧ್ಯಕ್ಷೆ ಗೌರಮ್ಮ ಮತ್ತು ಉಪಾಧ್ಯಕ್ಷೆ ಲಲಿತಾ ಅವರನ್ನು ತಾಲೂಕು ದರಖಾಸ್ತು ಕಮಿಟಿ ಸದಸ್ಯೆ ಕೋಮಲಾ, ಗ್ರಾಮದ ಮುಖಂಡರಾದ ಜಿ.ಎ.ರಾಯಪ್ಪ, ಗ್ರಾಪಂ ಮಾಜಿ ಅಧ್ಯಕ್ಷ ಶ್ರೀನಿವಾಸ್, ಕರೀಗೌಡ, ನಾಗರಾಜು, ಎಲ್‌ಐಸಿ ಪಾಪಣ್ಣ, ತಿಮ್ಮಶೆಟ್ಟಿ, ರಘು, ಮಹೇಂದ್ರ, ಸತೀಶ್, ಗಜೇಂದ್ರ, ಸಾಗರ್, ನಾಗೇಗೌಡ, ಪುನೀತ್‌ಕುಮಾರ್, ಪುಟ್ಟೇಗೌಡ, ಗುರುಮೂರ್ತಿ, ಜಿ.ಆರ್.ರಾಘವೇಂದ್ರ, ತಿಮ್ಮಶೆಟ್ಟಿ, ಜಿ.ಪಿ.ವಿಶ್ವನಾಥ್, ಜಿ.ಎಸ್.ಅರುಣ್‌ಕುಮಾರ್, ಅಜಯ್, ಜಿ.ಎಸ್.ವಿಜಯ್, ಜಿ.ಎ.ಮುರುಳಿ, ಜಿ.ಸಿ.ಕೆಂಪರಾಜು ಸೇರಿದಂತೆ ಹಲವು ಮುಖಂಡರು ಅಭಿನಂದಿಸಿದರು.

ಡಿ.24, ದ್ವಿತೀಯ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ

ಮಂಡ್ಯ, ಡಿ.14– ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶಗಳ ಕಾರ್ಯಕ್ರಮವೂ ಸೇರಿದಂತೆ) ನವೆಂಬರ್–2025 ರವರೆಗಿನ ದ್ವಿತೀಯ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಧ್ಯಕ್ಷತೆಯಲ್ಲಿ ಡಿ.24 ರಂದು ಬೆಳಗ್ಗೆ 11 ಗಂಟೆಗೆ ಕಾವೇರಿ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಡ್ಯ ಮೀಡಿಯಾ ಪ್ರೀಮಿಯರ್ ಲೀಗ್ — ಒಡೆಯರ್ ಚಾಲೆಂಜರ್ಸ್ ತಂಡ ಚಾಂಪಿಯನ್

ಮಂಡ್ಯ, ಡಿ.14– ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ನಗರದ ಪಿಇಟಿ ಶಿಕ್ಷಣ ಸಂಸ್ಥೆಯ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಮಂಡ್ಯ ಮೀಡಿಯಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಒಡೆಯರ್ ಚಾಲೆಂಜರ್ಸ್ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಪತ್ರಕರ್ತರ ಸೌಹಾರ್ದಯುತ ಕ್ರೀಡಾಕೂಟವಾದ ಮಂಡ್ಯ ಮೀಡಿಯಾ ಪ್ರೀಮಿಯರ್ ಲೀಗ್‌ನಲ್ಲಿ ಒಡೆಯರ್ ಚಾಲೆಂಜರ್ಸ್, ಶುಗರ್ ಕ್ಯಾಪಿಟಲ್, ಹಳ್ಳಿಕಾರ್ ಬ್ಲಾಸ್ಟರ್ ಹಾಗೂ ಕಾವೇರಿ ವಾರಿಯರ್ಸ್ ಭಾಗವಹಿಸಿದ್ದವು. ಪ್ರತಿ ತಂಡವನ್ನು ಒಬ್ಬೊಬ್ಬ ಹಿರಿಯ ಪತ್ರಕರ್ತರು ಖರೀದಿಸಿದ್ದರೆ, ಜಿಲ್ಲೆಯ ಬಹುತೇಕ ಪತ್ರಕರ್ತರು 4 ತಂಡದಲ್ಲಿ ತಲಾ 15 ಆಟಗಾರರಂತೆ ಭಾಗಿಯಾಗಿದ್ದರು.

ಪ್ರತಿ ತಂಡ ಲೀಗ್‌ನಲ್ಲಿ 8 ಪಂದ್ಯಗಳನ್ನು ಎದುರಿಸಿ, ನೆಟ್ ರನ್‌ರೇಟ್ ಆಧಾರದ ಮೇಲೆ ಗೆದ್ದ ತಂಡವು ನೇರವಾಗಿ ಫೈನಲ್ ಪ್ರವೇಶಿಸುವ ಅವಕಾಶವಿತ್ತು ಪತ್ರಕರ್ತ ಕೆ.ಎನ್.ನಾಗೇಗೌಡ ಮಾಲೀಕತ್ವದ ಹಾಗೂ ಪತ್ರಕರ್ತ ಹೇಮಂತ್ ನಾಯಕತ್ವದ ಒಡೆಯರ್ ಚಾಲೆಂಜರ್ಸ್ ಮೊದಲ ಲೀಗ್ ಪಂದ್ಯ ಸೋತರಾದರೂ ಎರಡನೇ ಲೀಗ್ ಪಂದ್ಯದಲ್ಲಿ ಭಾರೀ ಅಂತರದ ಜಯ ಸಾಧಿಸಿ ರನ್‌ರೇಟ್ ಆಧಾರದಲ್ಲಿ ನೇರವಾಗಿ ಫೈನಲ್ ಪ್ರವೇಶಿಸಿ, ಫೈನಲ್‌ನಲ್ಲಿ ಪಂದ್ಯದಲ್ಲಿ ಶುಗರ್ ಕ್ಯಾಪಿಟಲ್ ತಂಡವನ್ನು ಸೋಲಿಸಿ ಟ್ರೋಫಿ ಮತ್ತು ನಗದು ಬಹುಮಾನವನ್ನು ಮುಡಿಗೇರಿಸಿಕೊಂಡಿತು.



ಟ್ರೋಫಿಯೊಂದಿಗೆ ಒಡೆಯರ್ ಚಾಲೆಂಜರ್ಸ್ ತಂಡದ ಆಟಗಾರರು.

ಪಂದ್ಯಾವಳಿಗೆ ಜಿಲ್ಲಾಧಿಕಾರಿ ಡಾ.ಕುಮಾರ್ ಹಾಗೂ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಚಾಲನೆ ನೀಡಿದರೆ, ಅಂತಿಮವಾಗಿ ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ ಹಾಗೂ ಎಎಸ್ಪಿ ತಿಮ್ಮಯ್ಯ ವಿಜೇತ ತಂಡಕ್ಕೆ ಟ್ರೋಫಿ ವಿತರಿಸಿದರು.

ಈ ವೇಳೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಎನ್.ರಾಘವೇಂದ್ರ, ಪ್ರಧಾನ ಕಾರ್ಯದರ್ಶಿ ಶಶಿಧರ್, ರಾಜ್ಯ ಕಾರ್ಯದರ್ಶಿ ಸೋಮಶೇಖರ ಕೆರಗೋಡು, ಉಪಾಧ್ಯಕ್ಷರಾದ ಕೆ.ಸಿ.ಮಂಜುನಾಥ, ರವಿ ಸಾವಂದಿಪುರ, ಮಾಜಿ ಅಧ್ಯಕ್ಷ ಬಿ.ಪಿ.ಪ್ರಕಾಶ್ ಇನ್ನಿತರರಿದ್ದರು.

ಒಂದನೇ ಪುಟದಿಂದ

ಶಿವಯೋಗಿಗಳ ಜಯಂತ್ಯೋತ್ಸವ

ಬ್ಯಾನರ್‌ಗಳನ್ನು ನಿಷೇಧಿಸಲಾಗಿದೆ. ರಾಷ್ಟ್ರಪತಿ ಆಗಮನದ ಹಿನ್ನೆಲೆ'ಯಲ್ಲಿ ಪೊಲೀಸ್ ಇಲಾಖೆ ಮತ್ತು ಜಿಲ್ಲಾಡಳಿತ ಕಟ್ಟೆಚ್ಚರ ವಹಿಸಿದ್ದು, ಹೆಲಿಪ್ಯಾಡ್ ನಿರ್ಮಾಣವಾಗಿರುವ ಮಾರೇಹಳ್ಳಿ ಮಾರ್ಗವಾಗಿ ಕೊಳ್ಳೇಗಾಲ ರಸ್ತೆ, ಮೈಸೂರು ರಸ್ತೆ ಮೂಲಕ ವೇದಿಕೆಗೆ ತೆರಳುವ ಮಾರ್ಗದಲ್ಲಿ ಯಾವುದೇ ತೊಂದರೆಯಾಗದಂತೆ ವ್ಯವಸ್ಥೆ ಮಾಡಲಾಗಿದೆ.

ಎಸ್‌ಪಿಜಿ ತಂಡ ಭೇಟಿ: ಈಗಾಗಲೇ ಎಸ್‌ಪಿಜಿ, ಭದ್ರತಾ ತಂಡ, ಹೆಲಿಕ್ಯಾಪ್ಟರ್ ಪೈಲೆಟ್‌ಗಳ ತಂಡ ಆಗಮಿಸಿ ಪರಿಶೀಲನೆ ನಡೆಸಿದ್ದು, ಯಾವುದೇ ಅಹಿತಕರ ಘಟನೆಯಾಗದಂತೆ ಎಲ್ಲಾ ರೀತಿ ಎಚ್ಚರ ವಹಿಸಿದ್ದಾರೆ. ಜೊತೆಗೆ ಜಿಲ್ಲಾಧಿಕಾರಿ ಡಾ. ಕುಮಾರ್, ಡಿಐಜಿಪಿ ಡಾ.ಬೋರ ಲಿಂಗಯ್ಯ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಎಲ್ಲಾ ರೀತಿಯ ಭದ್ರತೆಗಳನ್ನು ಪರಿಶೀಲನೆ ನಡೆಸಿದ್ದಾರೆ.

1 ಸಾವಿರ ಪೊಲೀಸರ ನಿಯೋಜನೆ: ರಾಷ್ಟ್ರಪತಿಗಳ ಭದ್ರತೆಗೆ ಒಂದು ಸಾವಿರ ಪೊಲೀಸರನ್ನು ನಿಯೋಜಿಸಿದ್ದು, 4 ಎಎಸ್ಪಿ, 9 ಡಿವೈಎಸ್ಪಿ, 35 ಸಿಪಿಐ, 125 ಎಎಸ್‌ಐ, 6 ಕೆಎಸ್‌ಆರ್‌ಪಿ ತುಕಡಿ, 8 ಡಿಎಆರ್, 3 ಕ್ಯೂಆರ್‌ಟಿ ತುಕಡಿ ಹಾಗೂ 1 ಸಾವಿರ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಮೂರು ಡ್ರೋನ್ ಕ್ಯಾಮೆರಾಗಳನ್ನು ಸಹ ಬಳಸಲಾಗುತ್ತಿದೆ.

ಮೈಸೂರು ಏರ್‌ಪೋರ್ಟ್‌ನಿಂದ ಹೆಲಿಕಾಪ್ಟರ್ ಮೂಲಕ ಆಗಮನ

ಡಿ.16ರಂದು ನವದೆಹಲಿಯಿಂದ ಹೊರಟು ಮಧ್ಯಾಹ್ನ 2.10ಕ್ಕೆ ಮೈಸೂರಿನ ಮಂಡಕಹಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಲ್ಲಿಂದ ಹೆಲಿಕಾಪ್ಟರ್ ಮೂಲಕ ಮಳವಳ್ಳಿ ತಾಲೂಕಿನ ಮಾರೇಹಳ್ಳಿ ಹೆಲಿಪ್ಯಾಡ್‌ಗೆ ಆಗಮಿಸಲಿದ್ದಾರೆ.

ಹೆಲಿಪ್ಯಾಡ್‌ನಿಂದ 4 ಕಿಲೋ ಮೀಟರ್ ದೂರದಲ್ಲಿರುವ ಶಾಂತಿ ಕಾಲೇಜು ಎದುರಿನ ಮೈದಾನಕ್ಕೆ ವಿಶೇಷ ಭದ್ರತಾ ವ್ಯವಸ್ಥೆಯೊಂದಿಗೆ ಕಾರಿನ ಮೂಲಕ ಆಗಮಿಸಲಿದ್ದು, ಅದೇ ವೇಳೆ ರಾಷ್ಟ್ರೀಯ ಹೆದ್ದಾರಿ–209ರಲ್ಲಿ ವಾಹನ ಸಂಚಾರವನ್ನು ಕೆಲಕಾಲ ನಿಷೇಧಿಸಲಾಗುವುದು. ಸಂಜೆ 5.25ಕ್ಕೆ ರಾಷ್ಟ್ರಪತಿ ಮೈಸೂರಿಗೆ ತೆರಳಲಿದ್ದಾರೆ.

ಭದ್ರತಾ ವ್ಯವಸ್ಥೆಗಳ ಪರಿಶೀಲನೆ, ಕಾರ್ಯಕ್ರಮ ಸಿದ್ಧತೆಗಳ ಬಗ್ಗೆ ಸಭೆ

ಮಳವಳ್ಳಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಡಿ.16ರಂದು ಮಳವಳ್ಳಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ದೆಹಲಿಯ ಭದ್ರತಾ ವಿಭಾಗದ ಅಧಿಕಾರಿ ಧನಂಜಯ್ ಕುಮಾರ್, ಕೇಂದ್ರ ಗುಪ್ತಚರ ಅಧಿಕಾರಿಗಳಾದ ವಿಶಾಲ್ ಅವರ ನೇತೃತ್ವದಲ್ಲಿ ಇಂದು ಮಳವಳ್ಳಿ ಪುರಸಭೆ ಸಭಾಂಗಣದಲ್ಲಿ ಎಎಸ್‌ಎಲ್ ಸಭೆ ನಡೆಯಿತು.

ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ಮಳವಳ್ಳಿಯಲ್ಲಿ ನಿರ್ಮಿಸಿರುವ ಹೆಲಿಪ್ಯಾಡ್ ಸ್ಥಳದಲ್ಲಿ ಗ್ರೀನ್ ರೂಂ, ಹೆಲಿಪ್ಯಾಡ್ ಸುತ್ತ ಬ್ಯಾರಿಕೇಡ್ ನಿರ್ಮಾಣ ಹಾಗೂ ರೆಡ್ ಕಾರ್ಪೆಟ್ ಹಾಕಲು ಅಗತ್ಯ ಕ್ರಮ ಕೈಗೊಳ್ಳಲು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕು ಎಂದರು. ರಾಷ್ಟ್ರಪತಿ ಆಗಮನ ಹಿನ್ನೆಲೆಯಲ್ಲಿ ಯಾವುದೇ ಲೋಪದೋಷವಾಗದಂತೆ ನಾನಾ ಇಲಾಖೆಗಳ ಅಧಿಕಾರಿಗಳು ಸಮನ್ವಯತೆ ಸಾಧಿಸಬೇಕು. ಕಾರ್ಯಕ್ರಮ ಮುಗಿಯುವವರೆಗೂ ಎಲ್ಲಿಯೂ ವಿದ್ಯುತ್ ಸಂಪರ್ಕಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಸಿಸಿ ಕ್ಯಾಮೆರಾ ಅಳವಡಿಸಬೇಕು. ಹೆಲಿಪ್ಯಾಡ್ ಮತ್ತು ಕಾರ್ಯಕ್ರಮ ನಡೆಯುವ ಜಾಗಗಳಲ್ಲಿ ಅಗ್ನಿಶಾಮಕ ದಳದ ವಾಹನಗಳು ಇರುವಂತೆ ನೋಡಿಕೊಳ್ಳಬೇಕು ಎಂದರು.

ಗಣ್ಯರು ಸಂಚರಿಸುವ ಮಾರ್ಗದ ರಸ್ತೆಗಳು ಸ್ವಚ್ಛತೆ ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು. ಸುಸಜ್ಜಿತ ಆಂಬುಲೆನ್ಸ್‌ನೊಂದಿಗೆ ನುರಿತ ಆರೋಗ್ಯ ಸಿಬ್ಬಂದಿಯನ್ನು ಕರ್ತವ್ಯಕ್ಕೆ ನಿಯೋಜಿಸಬೇಕು. ಉಪಹಾರ, ಕುಡಿಯುವ ನೀರು ಹಾಗೂ ಸ್ನ್ಯಾಕ್ಸ್‌ಗಳನ್ನು ನೀಡುವ ಮೊದಲು ಆಹಾರ ಸುರಕ್ಷತಾ ಅಧಿಕಾರಿಗಳಿಂದ ತಪಾಸಣೆ ಮಾಡಬೇಕು. ಯಾವುದೇ ಲೋಪದೋಷ ಆಗದಂತೆ ಪ್ರೋಟೋಕಾಲ್‌ನಂತೆ ಕಾರ್ಯ ನಿರ್ವಹಿಸಬೇಕು ಎಂದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಜೆಎಸ್‌ಎಸ್ ವಿದ್ಯಾಪೀಠದ ನಿರಂಜನ್ ಮೂರ್ತಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ಯೋಜನಾಬದ್ಧವಾಗಿ ರೂಪುಗೊಳ್ಳಲಿ

ಚೌಕಟ್ಟು ರೂಪಿಸಿ ಗ್ರೇಟರ್ ಮೈಸೂರು ಮೂಲಕ ಅಭಿವೃದ್ಧಿ ಮಾಡಬೇಕು ಎಂದು ಯದುವೀರ್ ಆಗ್ರಹಿಸಿದರು. ಮೈಸೂರು ನಗರದ ಬೆಳವಣಿಗೆಯನ್ನು ತಡೆಯಲು ಸಾಧ್ಯವಿಲ್ಲ. ಆದರೆ ಯೋಜನಾ ಬದ್ಧವಾಗಿ ಬೆಳವಣಿಗೆ ಮಾಡಬೇಕು. ಈ ಮೂಲಕ ವ್ಯವಸ್ಥಿತವಾದ ನಗರ ನಿರ್ಮಾಣ ಮಾಡಬೇಕು. ಇದರಿಂದ ಸ್ಥಳೀಯ ನಿವಾಸಿ ಗಳು ಗುಣಮಟ್ಟದ ಜೀವನ ಮಾಡಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಬೆಂಗಳೂರು ನಗರದ ಅಭಿವೃದ್ಧಿ ಸಂದರ್ಭದಲ್ಲಿ ಒಂದು ಚೌಕಟ್ಟು ರೂಪಿಸಿ, ವ್ಯವಸ್ಥಿತ ಹಾಗೂ ಯೋಜನಾಬದ್ಧವಾಗಿ ಬೆಳವಣಿಗೆ ಮಾಡಬೇಕಿತ್ತು. ಆದರೆ ಅಂದು ಈ ಕಾರ್ಯ ಮಾಡದೆ ಈಗ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇದೇ ರೀತಿ ಮೈಸೂರು ಮತ್ತೊಂದು ಬೆಂಗಳೂರು ಆಗಲು ಬಿಡಬಾರದು. ಬೆಂಗಳೂರಿನಂತೆ ಮೈಸೂರಿನಲ್ಲಿ ಅವ್ಯವಸ್ಥೆ ತಾಂಡವವಾಡಬಾರದು. ಅದ್ವಾನವಾದ ಮೇಲೆ ಪರಿಹಾರ ಕಂಡುಕೊಳ್ಳಲು ಹೆಣ ಗಾಡುವಂತಾಗಬಾರದು. ಇದಕ್ಕಾಗಿ ಗ್ರೇಟರ್ ಮೈಸೂರು ಮಾಡುವ ಸಂದರ್ಭದಲ್ಲಿ ವ್ಯವಸ್ಥಿತವಾದ ಯೋಜನೆ ರೂಪಿಸಬೇಕು ಎಂದು ಯದುವೀರ್ ಮತ್ತೊಮ್ಮೆ ಸಲಹೆ ನೀಡಿದರು.

ಹಳೇ ಮೈಸೂರು 5 ಕಿಲೋ ಮೀಟರ್ ವ್ಯಾಪ್ತಿ ಹೊಂದಿತ್ತು. ಆದರೆ, ಈಗ ಮಿತಿ ಮೀರಿ ಮೈಸೂರು ನಗರ ಬೆಳೆದಿದೆ. ದೇಶದ ಪಾರಂಪರಿಕ ನಗರಗಳಲ್ಲಿ ಮೈಸೂರು ಅಗ್ರ ಸ್ಥಾನ ಪಡೆದಿದೆ. ಗ್ರೇಟರ್ ಮೈಸೂರು ಮಾಡುವ ಸಂದರ್ಭದಲ್ಲಿ ಮೈಸೂರಿನ ಧಾರ್ಮಿಕ ಕ್ಷೇತ್ರ, ಪ್ರವಾಸೋದ್ಯಮ, ಕೈಗಾರಿಕೆ ಸೇರಿದಂತೆ ಇತರೆ ಕ್ಷೇತ್ರಗಳನ್ನು ಅಭಿವೃದ್ಧಿಗೊಳಿಸಬೇಕು. ಈ ಮೂಲಕ ಆಧುನಿಕ ಮೈಸೂರು ನಿರ್ಮಾಣದ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಮೈಸೂರಿನ ಪಾರಂಪರಿಕ ಕಟ್ಟಡಗಳ ಅಭಿವೃದ್ಧಿಗೂ ಪ್ರಮುಖ ಆದ್ಯತೆ ನೀಡಬೇಕು. ಗ್ರೇಟರ್ ಮೈಸೂರು ನಿರ್ಮಾಣಕ್ಕೆ ಅಗತ್ಯ ಅನುದಾನ ನೀಡಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರ ಎರಡೂ ಸೇರಿ ಆಧುನಿಕ ಮೈಸೂರು ನಿರ್ಮಿಸಬೇಕು ಎಂದು ಯದುವೀರ್ ಸಲಹೆ ನೀಡಿದರು.

ನಾಗರಿಕರ ಟ್ರಸ್ಟ್ ರಚನೆಯಾಗಬೇಕು: ಈ ವೇಳೆ ಮಾತನಾಡಿದ ಚಿತ್ರನಟ ಪ್ರಕಾಶ್ ಬೆಳವಾಡಿ ಅವರು, ಗ್ರೇಟರ್ ಮೈಸೂರು ರಚನೆ ಸಂಬಂಧ ಪಕ್ಷಾತೀತ ಹಾಗೂ ಜಾತ್ಯಾತೀತವಾಗಿ ನಾಗರಿಕರ ಟ್ರಸ್ಟ್ ರಚನೆ ಮಾಡಬೇಕು. ಎಲ್ಲರ ಅಭಿಪ್ರಾಯ ಆಲಿಸಿ ಸಮಗ್ರವಾಗಿ ಮೈಸೂರು ಅಭಿವೃದ್ಧಿ ಮಾಡಬೇಕು ಎಂದು ಸಲಹೆ ನೀಡಿದರು. ಮೈಸೂರು ಮಹಾರಾಜರಂತೆ ಅಭಿವೃದ್ಧಿ ಯಲ್ಲಿ ಬದ್ಧತೆ ಬೇಕು. ಆಗ ಮಾತ್ರ ಗ್ರೇಟರ್ ಮೈಸೂರು ಯೋಜನೆಯನ್ನು ವ್ಯವಸ್ಥಿತ ವಾಗಿ ಮಾಡಲು ಸಾಧ್ಯವಾಗುತ್ತದೆ ಎಂದು ಪ್ರಕಾಶ್ ಬೆಳವಾಡಿ ಅಭಿಪ್ರಾಯಪಟ್ಟರು.

ಮೈಸೂರು ಮತ್ತೊಂದು ಬೆಂಗಳೂರಂತೆ ಆಗಬಾರದು: ನಂತರ ಮಾತನಾಡಿದ ರಾಜ್ಯ ನಿವೃತ್ತ ಮುಖ್ಯ ಕಾರ್ಯದರ್ಶಿ ರವೀಂದ್ರ ಅವರು, ಪ್ರಸ್ತುತ ಬೆಂಗಳೂರಿ ನಲ್ಲಿ 1.40 ಜನ ಸಂಖ್ಯೆ ಇದೆ. ವ್ಯವಸ್ಥಿತವಾಗಿ ಬೆಂಗಳೂರು ಅಭಿವೃದ್ಧಿ ಮಾಡದ ಕಾರಣ ಇಂದು ಬಹಳಷ್ಟು ಸಮಸ್ಯೆಗಳು ಎದುರಾಗಿದೆ. ಆದ ಕಾರಣ ಮೈಸೂರು ಮತ್ತೊಂದು ಬೆಂಗಳೂರಿನಂತೆ ಆಗಬಾರದು. ಗ್ರೇಟರ್ ಮೈಸೂರು ರಚನೆ ಮಾಡುವ ವೇಳೆ ದೂರ ದೃಷ್ಟಿ ಇಟ್ಟುಕೊಂಡು ಯೋಜನೆ ರೂಪಿಸಬೇಕು ಎಂದು ಹೇಳಿದರು.

ಮೈಸೂರು ವಿಭಿನ್ನ ಹಾಗೂ ವಿಶಿಷ್ಟ ವಾದ ನಗರ. ಇಂತಹ ಯೋಜನಾಬದ್ಧ ನಗರ ಇಡೀ ಕರ್ನಾಟಕದಲ್ಲಿ ಎಲ್ಲೂ ಇಲ್ಲ. ಈ ಹಿನ್ನೆಲೆಯಲ್ಲಿ ಮೈಸೂರು ನಗರದ ಅಭಿವೃದ್ಧಿಯಲ್ಲಿ ಯಾವುದೇ ಲೋಪ ವಾಗದೆ ವ್ಯವಸ್ಥಿತವಾದ ಯೋಜನಾಬದ್ಧ ನಗರ ನಿರ್ಮಾಣವಾಗಬೇಕು ಎಂದು ರವೀಂದ್ರ ಪ್ರತಿಪಾದಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ನಿವೃತ್ತ ಪ್ರಾಧ್ಯಾಪಕ ಕೆ.ಸಿ.ಬಸವರಾಜು, ಉದ್ಯಮಿ ಕಿರಣ್ ರಂಗ, ಹಿರಿಯ ಪತ್ರಕರ್ತ ಶ್ಯಾಮ್ ಸುಂದರ್ ವಟ್ಟಂ, ವಿ.ಆರ್.ಟ್ರಸ್ಟ್ ಅಧ್ಯಕ್ಷ ಡಾ.ಶುಶ್ರೂತ್ ಗೌಡ, ಡಾ.ರಮೇಶ್, ನಾಗರಾಜ್ ಗರ್ಗೇಶ್ವರಿ, ಆಯೋಜಕ ಚೇತನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

'ಗ್ರೇಟರ್ ಮೈಸೂರು' ಅಡಿ ಪ್ರವಾಸೋದ್ಯಮ, ಕೈಗಾರಿಕಾ ಬೆಳವಣಿಗೆ ಆಗಬೇಕು

ರಸ್ತೆ, ಕುಡಿಯುವ ನೀರು, ಒಳಚರಂಡಿ ಸೇರಿದಂತೆ ಇತರೆ ಮೂಲಭೂತ ಸೌಕರ್ಯ ಕಲ್ಪಿಸಲು ಮಾತ್ರ ಗ್ರೇಟರ್ ಮೈಸೂರು ಪರಿಕಲ್ಪನೆ ಸೀಮಿತವಾಗದೆ, ಪ್ರವಾಸೋದ್ಯಮ ಹಾಗೂ ಕೈಗಾರಿಕಾ ಬೆಳವಣಿಗೆಯೂ ಆಗಬೇಕು ಎಂದು ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಸಲಹೆ ನೀಡಿದರು.

ಮೈಸೂರಿನ ಪ್ರವಾಸೋದ್ಯಮ ವಿಶ್ವ ವಿಖ್ಯಾತಿ ಪಡೆದಿದೆ. ಈ ಹಿನ್ನೆಲೆಯಲ್ಲಿ ಗ್ರೇಟರ್ ಮೈಸೂರು ಮಾಡುವ ವೇಳೆ ಪ್ರವಾಸೋದ್ಯಮದ ವಿಶ್ವಮಾನ್ಯತೆ ಉಳಿಸಿಕೊಳ್ಳಬೇಕು ಎಂದು ಹೇಳಿದರು. ದಸರಾ ವೇಳೆ ಮೈಸೂರು ದೇಶ– ವಿದೇಶದ ಪ್ರವಾಸಿಗರನ್ನು ಆಕರ್ಷಿಸಲಿದೆ. ದಸರಾದ ಒಂದು ತಿಂಗಳ ಅವಧಿಯಲ್ಲಿ ನಡೆಯುವ ವಹಿವಾಟು, ಇಡೀ ಒಂದು ವರ್ಷದ ಆರ್ಥಿಕತೆಗೆ ಆಧಾರವಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿ ದಸರಾ ಮಹೋತ್ಸವಕ್ಕೆ ಮಾತ್ರ ಸೀಮಿತವಾಗಬಾರದು. ದಸರಾ ನಂತರವೂ ಪ್ರವಾಸಿಗರನ್ನು ಆಕರ್ಷಿಸಲು ಯೋಜನೆ ರೂಪಿಸಬೇಕು ಎಂದು ತಿಳಿಸಿದರು.

ಗ್ರೇಟರ್ ಮೈಸೂರು ಮೂಲಕ ಇಲ್ಲಿನ ಕೆರೆ, ಪರಿಸರವನ್ನು ಉಳಿಸಿಕೊಳ್ಳಬೇಕು. ಉದ್ಯೋಗಾವಕಾಶ ಸೃಷ್ಟಿಯಾಗಬೇಕು ಎಂದು ಹೇಳಿದರು. ಮೈಸೂರಿನಲ್ಲಿ ಬಹಳಷ್ಟು ಸಂಪನ್ಮೂಲ ವ್ಯಕ್ತಿಗಳಿದ್ದಾರೆ. ಗ್ರೇಟರ್ ಮೈಸೂರು ಯೋಜನೆಗೆ ಇವರ ಸಲಹೆ ಪಡೆಯಬೇಕು. ವಿವಿಧ ಕ್ಷೇತ್ರದ ತಜ್ಞರ ಸಮಿತಿಯೊಂದನ್ನು ರಚಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದು ಸಲಹೆ ನೀಡಿದರು. ಪ್ರಸ್ತುತ ಮೈಸೂರು ನಗರ 100 ಚದರ ಕಿಲೋ ಮೀಟರ್ ವ್ಯಾಪ್ತಿ ಹೊಂದಿದೆ. 'ಗ್ರೇಟರ್ ಮೈಸೂರು' ರಚನೆಯಾಗಿದೆ. 338 ಚದರ ಕಿಲೋ ಮೀಟರ್‌ಗೆ ವಿಸ್ತಾರಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ನಗರದ ವಿಸ್ತೀರ್ಣಕ್ಕೆ ತಕ್ಕಂತೆ ಅಭಿವೃದ್ಧಿ ಮಾಡಬೇಕು ಎಂದು ಹರೀಶ್‌ಗೌಡ ಸಲಹೆ ನೀಡಿದರು.

ಗುಂಡಿನ ದಾಳಿ; 12 ಮಂದಿ ಸಾವು

ನೂರಾರು ಪ್ರವಾಸಿಗರು ತಮ್ಮ ಜೀವ ಉಳಿಸಿಕೊಳ್ಳಲು ಚೆಲ್ಲಾಪಿಲ್ಲಿಯಾಗಿ ಓಡಿದ್ದಾರೆ. ಪ್ರತ್ಯಕ್ಷದರ್ಶಿಗಳ ಪ್ರಕಾರ, ಕಪ್ಪು ಮುಖವಾಡ ಧರಿಸಿದ ಇಬ್ಬರು ಶಾಟ್‌ಗನ್‌ಗಳೊಂದಿಗೆ ಸರ್ಫ್ ಕ್ಲಬ್‌ನ ಪಕ್ಕದ ಪಾದಚಾರಿ ಸೇತುವೆಯ ಬಳಿ ಬಂದು ಗುಂಡು ಹಾರಿಸಿದ್ದಾರೆ. ಮುಖ್ಯವಾಗಿ, ಅಲ್ಲಿ ನಡೆಯುತ್ತಿದ್ದ ಯಹೂದಿಗಳ ಕಾರ್ಯಕ್ರಮವನ್ನೇ ಗುರಿಯಾಗಿಸಿ ದಾಳಿ ಮಾಡಲಾಗಿದೆ ಎಂದು ಹೇಳಲಾಗಿದೆ. ಭೀಕರ ದಾಳಿಯಲ್ಲಿ ಕನಿಷ್ಟ 12 ಜನರು ಸಾವನ್ನಪ್ಪಿದ್ದಾರೆ ಎಂದು ಆಸ್ಟ್ರೇಲಿಯಾದ ಪತ್ರಿಕೆಗಳು ವರದಿ ಮಾಡಿವೆ.

ಮೈಕಲ್ ವಾನ್ ಕೂದಲೆಳೆ ಅಂತರದಲ್ಲಿ ಪಾರು: ಇದೇ ಬೊಂಡಿ ಬೀಚ್‌ನಲ್ಲಿ ಭಾನು ವಾರದ ರಜಾ ದಿನ ಕಳೆಯಲು ಹೋದ ಇಂಗ್ಲೆಂಡ್ ಮಾಜಿ ನಾಯಕ ಮೈಕಲ್ ವಾನ್ ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಈ ಕರಾಳ ಅನುಭವವನ್ನು ಮೈಕಲ್ ವಾನ್ ಹೇಳಿಕೊಂಡಿದ್ದಾರೆ.

ಆ್ಯಶಸ್ ಟೆಸ್ಟ್ ಸರಣಿಯಿಂದ ಸಿಡ್ನಿಯಲ್ಲಿದ್ದಾರೆ ವಾನ್: 2025ರ ಆ್ಯಶಸ್ ಟೆಸ್ಟ್ ಸರಣಿ ನಡೆಯುತ್ತಿದೆ. ಆಸ್ಟ್ರೇಲಿಯಾ ಹಾಗೂ ಇಂಗ್ಲೆಂಡ್ ನಡುವಿನ ಟೆಸ್ಟ್ ಸರಣಿಯ ಕಾಮಂಟೇಟರಿ, ವಿಶ್ಲೇಷಣೆಗಾಗಿ ಮೈಕಲ್ ವಾನ್ ಸಿಡ್ನಿಯಲ್ಲಿ ಬೀಡು ಬಿಟ್ಟಿದ್ದಾರೆ. ಇಂದು ರಜಾ ದಿನವಾದ ಕಾರಣ ಮೈಕಲ್ ವಾನ್ ಸಿಡ್ನಿಯ ಅತ್ಯಂತ ಜನಪ್ರಿಯ ಪ್ರವಾಸಿ ತಾಣವಾದ ಬೊಂಡಿ ಬೀಚ್‌ಗೆ ತೆರಳಿದ್ದಾರೆ. ಇದೇ ಬೀಚ್‌ನಲ್ಲಿ ಯಹೂದಿಗಳ ಹನುಖ್ಖಾ ಹಬ್ಬಕೂಡ ಆಚರಿಸಲಾಗುತಿತ್ತು. ಆದರೆ ಏಕಾಏಕಿ ಗುಂಡಿನ ದಾಳಿ ಶುರುವಾಗಿದೆ. ಗುಂಡಿನ ದಾಳಿ ನಡೆಯುವ ಸ್ಥಳದ ಪಕ್ಕದಲ್ಲೇ ಇದ್ದ ಕೋಣೆಯಲ್ಲಿದ್ದ ಮೈಕಲ್ ವಾನ್ ಜೀವ ಭಯದಿಂದ ಒದ್ದಾಡಿದ್ದಾರೆ. ತಮ್ಮ ಕೋಣೆಯ ಬಾಗಿಲು ಲಾಕ್ ಮಾಡಿ ಭಯದಿಂದ ಒಳಗೆ ಕುಳಿತುಕೊಂಡಿದ್ದಾರೆ. ಗುಂಡಿನ ಮೊರೆತದ ಶಬ್ಧಗಳು ಪದೇ ಪದೇ ಕೇಳಿಸುತ್ತಿತ್ತು ಎಂದು ವಾನ್ ಕರಾಳ ಘಟನೆಯನ್ನು ಹೇಳಿಕೊಂಡಿದ್ದಾರೆ.

ಆಸ್ಟ್ರೇಲಿಯಾ ಪ್ರಧಾನಿ ಪ್ರತಿಕ್ರಿಯೆ: ಬೊಂಡಿಯಲ್ಲಿ ನಡೆದ ಘಟನೆ ತೀವ್ರ ನೋವುಂಟು ಮಾಡಿದೆ. ಪೊಲೀಸರು ಮತ್ತು ತುರ್ತು ರಕ್ಷಣಾ ಸಿಬ್ಬಂದಿ ಸಂಕಷ್ಟದಲ್ಲಿ ಸಿಲುಕಿದ್ದ ಜನರನ್ನು ರಕ್ಷಿಸಲು ಶ್ರಮಿಸಿದ್ದಾರೆ. ಸಂತ್ರಸ್ತರ ಕುಟುಂಬಗಳೊಂದಿಗೆ ನಾನಿದ್ದೇನೆ ಎಂದು ಆಸ್ಟ್ರೇಲಿಯಾದ ಪ್ರಧಾನಿ ಆಂಥೋನಿ ಆಲ್ಬನೀಸ್ ಪ್ರತಿಕ್ರಿಯೆ ಕೊಟ್ಟಿದ್ದಾರೆ.

ನೆತನ್ಯಾಹು ಆರೋಪ: ಆಸ್ಟ್ರೇಲಿಯಾದ ಸಿಡ್ನಿಯ ಬಾಂಡಿ ಬೀಚ್‌ನಲ್ಲಿ ಯಹೂದಿಗಳ ಆಚರಣೆಯನ್ನು ಗುರಿಯಾಗಿಸಿಕೊಂಡ ನಡೆದ ದಾಳಿ ಬಳಿಕ ಆಸ್ಟ್ರೇಲಿಯಾ ಸರ್ಕಾರ ಯಹೂದಿ ವಿರೋಧಿ ನೀತಿಯನ್ನು ಉತ್ತೇಜಿಸುತ್ತಿದೆ ಎಂದು ಇಸ್ರೇಲಿ ಪ್ರಧಾನಿ ಬೆಂಜಮಿನ್ ನೆತನ್ಯಾಹು ಆರೋಪಿಸಿದ್ದಾರೆ. ಪ್ಯಾಲೆಸ್ಟಿನಿಯನ್ ರಾಜ್ಯತ್ವವನ್ನು ಗುರುತಿಸುವುದಾಗಿ ಕ್ಯಾನ್‌ಬೆರಾ ಘೋಷಿಸಿದ ನಂತರ ಆಗಸ್ಟ್‌ನಲ್ಲಿ ಆಂಥೋನಿ ಅಲ್ಬನೀಸ್‌ಗೆ ಕಳುಹಿಸಿದ ಪತ್ರವನ್ನು ಉಲ್ಲೇಖಿಸಿದ ನೆತನ್ಯಾಹು ಹೇಳಿದ್ದಾರೆ. ಮೂರು ತಿಂಗಳ ಹಿಂದೆಯೇ ನಿಮ್ಮ ನೀತಿಯು ಯಹೂದಿ ವಿರೋಧಿ ನೀತಿಯ ಬೆಂಕಿ ಮೇಲೆ ತುಪ್ಪ ಸುರಿದಂತೆ ಎಂದು ಆಸ್ಟ್ರೇಲಿಯಾದ ಪ್ರಧಾನಿಗೆ ಬರೆದಿದ್ದಾಗಿ ತಿಳಿಸಿದ್ದಾರೆ

ಕೆಎಸ್‌ಆರ್‌ಟಿಸಿ ಅಧಿಕಾರಿ ಸಾವಿಗೆ ಬಿಗ್ ಟ್ವಿಸ್ಟ್: ಆಫೀಸರ್ ಬಲಿಪಡೆದ ಅಕ್ರಮ ಪಡಿತರ ಅಕ್ಕಿ ಸಾಗಾಟ



ಹಾಸನ, ಡಿ. 14– ಕರ್ತವ್ಯ ವೇಳೆ ಲಾರಿ ಡಿಕ್ಕಿಯಾಗಿ ಕೆಎಸ್‌ಆರ್‌ಟಿಸಿ ಚೆಕ್ಕಿಂಗ್ ಇನ್ಸ್‌ಪೆಕ್ಟರ್ ಸ್ಥಳದಲ್ಲೇ ಸಾವನ್ನಪ್ಪಿರುವಂತಹ ಘಟನೆ ಶನಿವಾರ ಮುಂಜಾನೆ ಜಿಲ್ಲೆಯ ಆಲೂರು ತಾಲೂಕಿನ ಪಾಳ್ಯ ಬಳಿ ನಡೆದಿದೆ. ಶಕುನಿಗೌಡ ಮೃತ ಕೆಎಸ್‌ಆರ್‌ಟಿಸಿ ಅಧಿಕಾರಿ. ಚಾಲಕ ಲಾರಿ ಬಿಟ್ಟು ಪರಾರಿಯಾಗಿದ್ದು, ಪರಿಶೀಲನೆ ವೇಳೆ ಅಕ್ರಮವಾಗಿ ಪಡಿತರ ಅಕ್ಕಿ ಕಳ್ಳಸಾಗಣೆ ಮಾಡುತ್ತಿರುವುದು ಪತ್ತೆಯಾಗಿದೆ. ವಾಹನ ತಪಾಸಣೆ ಮಾಡಿದರೆ ಸಿಕ್ಕಿ ಬೀಳುವ ಆತಂಕದಲ್ಲಿ ವೇಗವಾಗಿ ವಾಹನ ಚಲಾಯಿಸಿರುವ ಶಂಕೆ ವ್ಯಕ್ತವಾಗಿದ್ದು, ಆಲೂರು ಪೊಲೀಸರು ಪ್ರಕರಣವನ್ನು ಗಂಭೀರವಾಗಿದ್ದ ಪರಿಗಣಿಸಿದ್ದು, ತನಿಖೆ ನಡೆಸಿದ್ದಾರೆ.



ಶಕುನಿಗೌಡ

ನಡೆದದ್ದೇನು: ನಿನ್ನೆ ಮುಂಜಾನೆ ಹಾಸನ ಜಿಲ್ಲೆಯ ಆಲೂರು ತಾಲೂಕಿನ ಪಾಳ್ಯ ಬಳಿ ಸಂಭವಿಸಿದ್ದ ಭೀಕರ ಅಪಘಾತದಲ್ಲಿ ಕರ್ತವ್ಯದಲ್ಲಿದ್ದ ಕೆಎಸ್‌ಆರ್‌ಟಿಸಿ ಚೆಕಿಂಗ್ ಇನ್ಸ್‌ಪೆಕ್ಟರ್ ಶಕುನಿಗೌಡ (57) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೂಲತಃ ಹಾಸನ ಜಿಲ್ಲೆಯ ಅರಕಲಗೂಡು ಮೂಲದ ಶಕುನಿಗೌಡ, ಕಳೆದ 27 ವರ್ಷಗಳಿಂದ ಕೆಎಸ್‌ಆರ್‌ಟಿಸಿಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಎಂದಿನಂತೆ ನಿನ್ನೆ ಕೂಡ ಬೆಳಿಗ್ಗೆ ಟಿಕೆಟ್ ಪರಿಶೀಲನೆಗಾಗಿ ತಮ್ಮ ತಂಡದ ಜೊತೆಗೆ ಆಲೂರು ತಾಲೂಕಿಗೆ ತೆರಳಿದ್ದರು.

ಖಾಕಿ ಸಮವಸ್ತ್ರದಲ್ಲಿದ್ದು, ರಸ್ತೆಯಲ್ಲಿ ನಿಂತು ಬಸ್‌ಗಳಿಗೆ ಕೈಯೊಡ್ಡಿ ಟಿಕೆಟ್ ಚೆಕ್ ಮಾಡಲು ರಸ್ತೆ ದಾಟುವ ವೇಳೆ ಮಂಗಳೂರು ಕಡೆಯಿಂದ ಲಾರಿಯೊಂದು ಬಂದಿದೆ. ಚಾಲಕ ರಸ್ತೆಯಲ್ಲಿರುವ ವ್ಯಕ್ತಿ ಪೊಲೀಸ್ ಎಂದುಕೊಂಡನಾ, ಅಥವಾ ಆರ್‌ಟಿಓ ಅಧಿಕಾರಿ ಎಂದುಕೊಂಡನಾ ಗೊತ್ತಿಲ್ಲ. ಏಕಾಏಕಿ ವೇಗವಾಗಿ ಬಂದು ಅಧಿಕಾರಿಗೆ ಡಿಕ್ಕಿ ಹೊಡೆದಿದ್ದಾನೆ. ಡಿಕ್ಕಿಯ ರಭಸಕ್ಕೆ ಶಕುನಿಗೌಡ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅಕ್ರಮವಾಗಿ ಪಡಿತರ ಅಕ್ಕಿ ಸಾಗಟ: ಚಾಲಕ ದೇವರಾಜ್ ಲಾರಿ ಬಿಟ್ಟು ಎಸ್ಕೇಪ್ ಆಗಿದ್ದಾನೆ. ಇತ್ತ ಲಾರಿಯನ್ನು ವಶಕ್ಕೆ ಪಡೆದುಕೊಂಡು ಪರಿಶೀಲನೆ ನಡೆಸಿದಾಗ 50 ಕೆಜಿ ತೂಕದ ಸುಮಾರು 123 ಚೀಲ ಪಡಿತರ ಅಕ್ಕಿ ಪತ್ತೆಯಾಗಿದೆ. 80 ಚೀಲ ಕುಚಲಕ್ಕಿ ಜೊತೆಗೆ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಬಗ್ಗೆ ಆರೋಪ ಕೇಳಿಬಂದಿದ್ದು, ಖಾಕಿ ಡ್ರೆಸ್‌ನಲ್ಲಿದ್ದ ಅಧಿಕಾರಿಯನ್ನು ತಪ್ಪಾಗಿ ಗ್ರಹಿಸಿ ಇಂತಹ ದುರಂತ ಸಂಭವಿಸಿದೆ. ಇದು ಆಕಸ್ಮಿಕವೋ ಅಥವಾ ಸಿಕ್ಕಿಬೀಳುವ ಆತಂಕದಲ್ಲಿ ನಡೆದ ಕೃತ್ಯವೋ ಈ ಬಗ್ಗೆ ತನಿಖೆಯಲ್ಲಿ ಗೊತ್ತಾಗಬೇಕಿದೆ. ಲಾರಿಯ ಮಾಲೀಕನ ಸಂಪರ್ಕ ಮಾಡಿ ದಾಖಲೆಗಳನ್ನು ಪೊಲೀಸರು ಕಲೆ ಹಾಕುತ್ತಿದ್ದಾರೆ. ಇನ್ನೊಂದೆಡೆ ಲಾರಿಯಲ್ಲಿ ಇರುವ ಅಕ್ಕಿ ಮೇಲ್ನೋಟಕ್ಕೆ ಪಡಿತರ ಅಕ್ಕಿ ಎಂಬುದು ಕಂಡು ಬಂದಿದೆ.

ಆಹಾರ ಇಲಾಖೆ ನಿರೀಕ್ಷಕರಿಂದ ದೂರು: ಪಡಿತರ ಅಕ್ಕಿಯನ್ನು ಬೇರೆ ಚೀಲಕ್ಕೆ ತುಂಬಿ ಸಾಗಿಸುತ್ತಿರುವ ಬಗ್ಗೆ ಅನುಮಾನ ಇದೆ ಎನ್ನುವುದನ್ನು ಆಹಾರ ಇಲಾಖೆ ಅಧಿಕಾರಿಗಳು ದೃಢಪಡಿಸಿದ್ದು, ಅಕ್ರಮ ಸಾಗಾಟದ ಬಗ್ಗೆ ಕಾನೂನು ಕ್ರಮಕೈಗೊಳ್ಳುವಂತೆ ಆಹಾರ ಇಲಾಖೆ ನಿರೀಕ್ಷಕ ಮೋಹಲ್ ಪೊಲೀಸರಿಗೆ ದೂರು ನೀಡಿದ್ದಾರೆ.

ಮೈಸೂರು ಮಿತ್ರ ಸೋಮವಾರ 15 ಡಿಸೆಂಬರ್ 2025

ಬಿಜೆಪಿ ರಾಷ್ಟ್ರೀಯ ಕಾರ್ಯಾಧ್ಯಕ್ಷರಾಗಿ ಬಿಹಾರದ ಸಚಿವ ನಿತಿನ್ ನಬಿ ಆಯ್ಕೆ

ನವದೆಹಲಿ, ಡಿ.14– ಬಿಜೆಪಿ ರಾಷ್ಟ್ರೀಯ ಕಾರ್ಯಾಧ್ಯಕ್ಷರಾಗಿ ಬಿಹಾರದ ಸಚಿವ ನಿತಿನ್ ನಬಿ ಆಯ್ಕೆಯಾಗಿದ್ದಾರೆ. ಬಿಜೆಪಿ ಪಾರ್ಲಿಮೆಂಟರಿ ಬೋರ್ಡ್ ಸರ್ವಾನುಮತದಿಂದ ನಿತಿಶ್‌ಕುಮಾರ್ ಸರ್ಕಾರದಲ್ಲಿ ಸಚಿವರಾಗಿ ಸೇವೆ ಸಲ್ಲಿಸುತ್ತಿರುವ ನಿತಿನ್ ನಬಿ ಅವರನ್ನು ಆಯ್ಕೆ ಮಾಡಿದೆ. ಈ ತಕ್ಷಣದಿಂದಲೇ ಜಾರಿಗೆ ಬರುವಂತೆ ನಿತಿನ್ ನಬಿಯನ್ನು ಬಿಜೆಪಿ ರಾಷ್ಟ್ರೀಯ ಕಾರ್ಯಾಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ. ಈ ಕುರಿತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಅಧಿಕೃತ ಪ್ರಕಟಣೆ ಹೊರಡಿಸಿದ್ದಾರೆ.



ನಿತಿನ್ ನಬಿ ಆಯ್ಕೆಗೆ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ ಸಲ್ಲಿಸಿದ್ದಾರೆ. ಪಕ್ಷದ ನಿಷ್ಠಾವಂತ ಕಾರ್ಯಕರ್ತ, ಪಕ್ಷದ ಚಟುವಟಿಕೆಗಳಲ್ಲಿ ಗುರುತಿಸಿಕೊಂಡಿರುವ ನಾಯಕ ನಿತಿನ್ ನಬಿಗೆ ಅಭಿನಂದನೆಗಳು. ಯುವ ನಾಯಕ ತನ್ನ ಕಠಿಣ ಪರಿಶ್ರಮದ ಮೂಲಕ ಪಕ್ಷದಲ್ಲಿ ಅಪಾರ ಅನುಭವ ಪಡೆದಿದ್ದಾರೆ. ಬಿಹಾರದಲ್ಲಿ ಶಾಸಕರಾಗಿ, ಸಚಿವರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಜನರ ಆಶೋತ್ತರಗಳು, ಅವರ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಪ್ರತಿಯೊಬ್ಬರನ್ನು ಗೌರವದಿಂದ ಕಾಣುವ ನಿತಿನ್ ನಬಿ ಕಾರ್ಯಾಧ್ಯಕ್ಷತೆಯಲ್ಲಿ ಬಿಜೆಪಿ ಮತ್ತಷ್ಟು ಉತ್ತುಂಗಕ್ಕೆ ಏರಲಿದೆ. ನಿತಿನ್ ನಬಿ ಮೇಲೆ ನನಗೆ ಸಂಪೂರ್ಣ ವಿಶ್ವಾಸವಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಭವಿಷ್ಯದ ಉತ್ತಮ ಮೈಸೂರಿಗೆ ವಿವಿಧ ಕ್ಷೇತ್ರದ ಗಣ್ಯರ ಅತ್ಯುತ್ತಮ ಸಲಹೆ

ಸಾಂಸ್ಕೃತಿಕ ನಗರಿಯ ವೈಭವ, ಸಹಜತೆಗೆ ಧಕ್ಕೆ ಆಗಬಾರದು

ಮೈಸೂರು, ಡಿ.14(ಎಂಟಿವೈ)– ಐತಿಹಾಸಿಕ ಹಿನ್ನೆಲೆಯುಳ್ಳ ಸಾಂಸ್ಕೃತಿಕ ನಗರಿ ಮೈಸೂರನ್ನು ಭವಿಷ್ಯದಲ್ಲಿ ಸುಸಜ್ಜಿತ ನಗರವಾಗಿ ರೂಪಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವಿವಿಧ ಕ್ಷೇತ್ರಗಳ ಪ್ರಮುಖರಿಂದ ಅಭಿಪ್ರಾಯ ಸಂಗ್ರಹಿಸಲಾಯಿತು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿ ಬಿಎಸ್‌ಎಸ್ ವಿದ್ಯೋದಯ ಸಂಸ್ಥೆಯ ಸಭಾಂಗಣದಲ್ಲಿ ಜಿಎಸ್‌ಎಸ್ ಯೋಗಿಕ್ ಫೌಂಡೇಷನ್, ಜಿಎಸ್‌ಎಸ್– ಸಿಎಸ್‌ಆರ್ ವತಿಯಿಂದ ಭಾನುವಾರ ಆಯೋಜಿಸಿದ್ದ '2050ರ ದೃಷ್ಟಿಕೋನದಲ್ಲಿ ಉತ್ತಮ ಮೈಸೂರು ನಿರ್ಮಾಣ' ವಿಷಯ ಕುರಿತ ಕಾರ್ಯಕ್ರಮದಲ್ಲಿ ಹಲವರು ಉತ್ತಮ ಮೈಸೂರಿನ ನಿರ್ಮಾಣಕ್ಕಾಗಿ ಉಪಯುಕ್ತ ಸಲಹೆ ನೀಡಿದರು.


ಅಭಿವೃದ್ಧಿ ಹುಚ್ಚು ಹೆಚ್ಚಾಗಿದೆ: ಕಾರ್ಯಕ್ರಮಕ್ಕೆ ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಚಾಲನೆ ನೀಡಿ ಮಾತನಾಡಿ, ಇತ್ತೀಚೆಗೆ ಎಲ್ಲೆಡೆ ವೇಗ, ಗದ್ದಲ ಹಾಗೂ ಅಭಿವೃದ್ಧಿಯ ಹುಚ್ಚು ಹೆಚ್ಚಾಗಿದೆ. ಯಾವುದೇ ನಗರದ ಅಭಿವೃದ್ಧಿ ಅನಿವಾರ್ಯ. ಆದರೆ ಅದು ಸಹಜ ರೀತಿ ಬೆಳೆಯಲು ಬಿಡಬೇಕು. ಮೈಸೂರಿಗೆ ತನ್ನದೇ ಆದ ವಿಶೇಷತೆ ಇದೆ ಭಾರತ ಎಂದಿಗೂ ದುಃಖದ ಅಂತ್ಯವನ್ನು ಬಯಸದೆ, ಪ್ರತಿ ವಿಷಯದಲ್ಲೂ ಸುಖಾಂತ್ಯ ಬಯಸುತ್ತದೆ. ಈ ನಿಟ್ಟಿನಲ್ಲಿ ಅಡ್ಡಾದಿಡ್ಡಿ ಅಭಿವೃದ್ಧಿ ನಮಗೆ ಬೇಕೇ? ಎಂದು ಯೋಚಿಸಬೇಕು.

ಆಧುನಿಕ ಸಮಾಜದಲ್ಲಿ ಒಗ್ಗಟ್ಟು ಇಲ್ಲ. ಬುದ್ಧಿವಂತರು ಇರುವಲ್ಲಿ ಒಗ್ಗಟ್ಟು ಸಾಧ್ಯವಿಲ್ಲ. ಪ್ರವಾಸೋದ್ಯಮ ಅಸಹ್ಯಕರವಾಗಿದ್ದು, ಊರು ಇರುವುದು ನಿವಾಸಿಗಳಿಗೆ ಹೊರತು, ಪ್ರವಾಸಿಗರಿಗಾಗಿ ಅಲ್ಲ. ಇಂದು ಪ್ರವಾಸೋದ್ಯಮದಿಂದ ಹಲವು ಊರುಗಳ ಸಂಸ್ಕೃತಿ, ಹಿನ್ನೆಲೆಯೇ ನಶಿಸಿದೆ. ನಮ್ಮ ಜೀವನಶೈಲಿಯ ಅಗತ್ಯತೆಗೆ ತಕ್ಕಂತೆ ನಗರದ ಅಭಿವೃದ್ಧಿ ಮಾಡದೆ, ಊರಿಗೆ ನಾವು ಕಷ್ಟಪಟ್ಟು ಹೊಂದಿಕೊಳ್ಳುವಂತೆ ಅಭಿವೃದ್ಧಿ ಮಾಡುವುದಲ್ಲ ಎಂದು ಅಭಿಪ್ರಾಯಪಟ್ಟರು.

ಪ್ರವಾಸೋದ್ಯಮಕ್ಕೆ ಮನ್ನಣೆ: ತಪೋವನ ಸಂಸ್ಥೆ ಸಂಸ್ಥಾಪಕ ಕೆ.ಶ್ರೀರಾಮ್ ಮಾತನಾಡಿ, ಇತ್ತೀಚೆಗೆ ಎಲ್ಲೆಡೆ ಅಭಿವೃದ್ಧಿ, ಮೂಲಸೌಲಭ್ಯ ಕುರಿತ ಚರ್ಚೆ ನಡೆಯುತ್ತಿದೆ. ಮೈಸೂರು ಸುಂದರ ಹಾಗೂ ವ್ಯವಸ್ಥಿತವಾಗಿ ನಿರ್ಮಿಸಿರುವ ನಗರವಾಗಿದ್ದು, ಪ್ರವಾಸೋದ್ಯಮ, ರಸ್ತೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಇತರೆ ರಾಜ್ಯಗಳಿಗಿಂತ ಹಿಂದುಳಿದಿದೆ. ಮೈಸೂರಿನಲ್ಲಿ ಸಾಕಷ್ಟು ಆಕರ್ಷಕ ಸ್ಥಳಗಳಿದ್ದು, ಈ ನಿಟ್ಟಿನಲ್ಲಿ ಪ್ರವಾಸೋದ್ಯಮಕ್ಕೆ ಮನ್ನಣೆ ನೀಡಬೇಕಾಗಿದೆ. ಇದರಿಂದ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಗೂ ಅನುಕೂಲವಾಗಲಿದೆ ಎಂದರು.

ಫ್ಲೈಓವರ್ ಪರಿಹಾರವಲ್ಲ: ಮೈಸೂರಿನಲ್ಲಿ ಹೆಚ್ಚುತ್ತಿರುವ ಟ್ರಾಫಿಕ್ ಸಮಸ್ಯೆಗಳಿಗೆ ಫ್ಲೈ ಓವರ್ ನಿರ್ಮಾಣವೊಂದೇ ಪರಿಹಾರವಲ್ಲ. ಲಂಡನ್ ಸೇರಿದಂತೆ ಹಲವು ನಗರಗಳಲ್ಲಿ ಇಂದಿಗೂ ಫ್ಲೈ ಓವರ್ ನಿರ್ಮಿಸಿಲ್ಲ. ಬದಲಾಗಿ ಟ್ರಾಫಿಕ್ ಸಮಸ್ಯೆ ತಪ್ಪಿಸಲು 'ಪಾರ್ಕ್ ಅಂಡ್ ರೈಡ್' ನಂತಹ ವ್ಯವಸ್ಥೆಗಳನ್ನು ಪ್ರವಾಸಿಗರಿಗೆ ಒದಗಿಸಿದರೆ, ಮೈಸೂರಿನಲ್ಲಿ ವಾರಾಂತ್ಯ ಹಾಗೂ ಸಾರ್ವತ್ರಿಕ ರಜಾ ದಿನಗಳಲ್ಲಿ ಪ್ರವಾಸಿಗರಿಂದ ಉಂಟಾಗುತ್ತಿರುವ ಟ್ರಾಫಿಕ್ ಸಮಸ್ಯೆಗೆ ಪರಿಹಾರ ದೊರಕಲಿದೆ ಎಂದು ಅಭಿಪ್ರಾಯಪಟ್ಟರು.

ಶಾಂತಿ ಇಲ್ಲದೆ ಸುಖವಿಲ್ಲ: ಅಂಕಣಕಾರ ಡಾ. ಜಾವೇದ್ ನಯೀಮ್ ಮಾತನಾಡಿ, ಉತ್ತಮ ಹಾಗೂ ಪ್ರಶಾಂತ ನಗರದ ನಿರ್ಮಾಣಕ್ಕೆ ಪ್ರತಿಯೊಬ್ಬರ ಪಾತ್ರವೂ ಮುಖ್ಯ. ಯಾವುದೇ ಕೆಲಸದಲ್ಲಿ ಕೇವಲ ಒಬ್ಬರಿಗೆ ಆದ್ಯತೆ ಸಿಗಬೇಕೆಂಬ ಮನಸ್ಥಿತಿ ಕೈಬಿಟ್ಟು, ಎಲ್ಲರೂ ಒಗ್ಗೂಡಿ ಸಾಗಿದರೆ ದೀರ್ಘಕಾಲ ಮುನ್ನಡೆಯಬಹುದು. ಒಂದು ನಗರ, ರಾಜ್ಯ, ದೇಶ ಅಥವಾ ಜಗತ್ತು ಮನುಷ್ಯನ ದೇಹದಂತಿದ್ದು, ಒಂದು ಅಂಗದಲ್ಲಿ ಸಣ್ಣ ಸಮಸ್ಯೆ ಆದರೆ, ಇಡೀ ದೇಹದ ನಿರ್ವಹಣೆಯಲ್ಲಿ ಲೋಪವಾಗಲಿದೆ. ಶಾಂತಿ ಇಲ್ಲದೇ ಸಮಾಜ ಸುಖಮಯವಾಗಿರಲು ಸಾಧ್ಯವಿಲ್ಲ. ಮೈಸೂರಿನ ಚಿತ್ರಣ ಉತ್ತಮವಾಗಿರಬೇಕೆಂಬ ಕಾರಣಕ್ಕೆ ದಶಕಗಳ ಹಿಂದೆ 'ಆಕ್ಟ್' ಸಂಘಟನೆ ಅನುಷ್ಠಾನಗೊಳಿಸಲಾಯಿತು. ಇದರ ಮೂಲಕ ನಾವೆಲ್ಲರೂ ಜಾತಿ, ಧರ್ಮ, ಸ್ಥಾನಮಾನವನ್ನು ಬದಿಗಿಟ್ಟು ಕೆಲಸ ಮಾಡುತ್ತಾ ಬಂದಿದ್ದೇವೆ ಎಂದು ಹೇಳಿದರು.



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿನ ಬಿಎಸ್‌ಎಸ್ ವಿದ್ಯೋದಯ ಸಂಸ್ಥೆಯ ಸಭಾಂಗಣದಲ್ಲಿ '2050ರ ದೃಷ್ಟಿಕೋನದಲ್ಲಿ ಉತ್ತಮ ಮೈಸೂರು ನಿರ್ಮಾಣ' ವಿಷಯ ಕುರಿತ ಚರ್ಚಾ ಕಾರ್ಯಕ್ರಮಕ್ಕೆ ವಾಗ್ಮಿ ಪ್ರೊಎಂ. ಕೃಷ್ಣೇಗೌಡ ಚಾಲನೆ ನೀಡಿದರು.

ಮಕ್ಕಳಿಗೆ ಸಂಸ್ಕಾರ ಕಲಿಸಬೇಕು: ಬಿಎಸ್‌ಎಸ್ ವಿದ್ಯೋದಯ ಸಂಸ್ಥೆಯ ಕಾರ್ಯದರ್ಶಿ ಆರ್. ವಾಸುದೇವ ಭಟ್ ಮಾತನಾಡಿ, ನಾಲ್ವಡಿಯವರು ಕಟ್ಟಿ ಬೆಳೆಸಿರುವ ಮೈಸೂರನ್ನು ಉಳಿಸಿ, ಬೆಳೆಸುವುದರತ್ತ ಪ್ರತಿಯೊಬ್ಬರೂ ಗಮನಹರಿಸಬೇಕು. ಮೈಸೂರು ಯೋಜನಾಬದ್ಧ ನಗರವಾಗಿದ್ದು, ಇಲ್ಲಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಿದೆ. ಮೈಸೂರನ್ನು ನಿವೃತ್ತರ ಸ್ವರ್ಗ ಎನ್ನುತ್ತಾರೆ. ಆದರೆ ಕೈ ಕೆಸರಾದರೆ ಬಾಯಿ ಮೊಸರು ಎಂಬ ರೀತಿಯಲ್ಲಿ ಎಲ್ಲರೂ ದುಡಿಯಬೇಕು. ಶಿಕ್ಷಣ ಕ್ಷೇತ್ರಕ್ಕೆ ಬಂದರೆ ಎಲ್ಲ ಹಂತದ ಶಿಕ್ಷಣ ಮೈಸೂರಿನಲ್ಲಿ ಲಭ್ಯವಿದೆ. ಆದರೆ ಸಂಸ್ಕಾರಯುತ ಶಿಕ್ಷಣಕ್ಕೆ ಆದ್ಯತೆ ನೀಡಬೇಕಿದೆ. ಮಕ್ಕಳನ್ನು ಅಂಕಗಳಿಕೆಯ ಯಂತ್ರವನ್ನಾಗಿ ಮಾಡದೆ, ಪ್ರಾಥಮಿಕ ಹಂತದಿಂದಲೇ ಅವರಿಗೆ ನಮ್ಮ ಸಂಸ್ಕೃತಿ, ಸಂಸ್ಕಾರ ಕಲಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್, ಸಿ.ಕೆ. ಮಹೇಂದ್ರ ಮಾತನಾಡಿದರು. ಜಿಎಸ್‌ಎಸ್ ಸಂಸ್ಥೆಯ ಮುಖ್ಯಸ್ಥ ಶ್ರೀಹರಿ ದ್ವಾರಕಾನಾಥ್ ಪ್ರಾಸ್ತಾವಿಕ ಭಾಷಣ ಮಾಡಿದರು. ಈ ಸಂದರ್ಭದಲ್ಲಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಡಾ.ಗಂಗಾಧರ, ಹೆಚ್.ಆರ್. ಭಗವಾನ್, ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಪತ್ರಕರ್ತರಾದ ಎಂ.ಆರ್. ಸತ್ಯನಾರಾಯಣ, ರಮೇಶ್ ಉತ್ತಪ್ಪ ರಾಮ್, ಡಾ.ಹೆಚ್.ಪಿ ಜ್ಯೋತಿ, ಡಾ.ಗಜಾನನ ಹೆಗಡೆ, ಡಾ.ಎ.ಎಸ್. ಚಂದ್ರಶೇಖರ್, ಪಿ.ಎನ್. ಗಣೇಶ್ ಕುಮಾರ್, ಡಾ.ಲಕ್ಷ್ಮೀನಾರಾಯಣ ಶೆಣೈ, ಬಿ.ಪಿ. ಮೂರ್ತಿ, ಎಂ.ಎನ್. ನಟರಾಜ್, ಬಿ.ಎಸ್. ಕೃಷ್ಣಪ್ರಸಾದ್, ಡಾ.ಬಸವರಾಜ ಆರ್. ಶ್ರೇಷ್ಠ ಇನ್ನಿತರರು ಪಾಲ್ಗೊಂಡಿದ್ದರು.

ಕಾರಂಜಿ–ಸಿದ್ಧಾರ್ಥನಗರ ತೆರಿಗೆದಾರರ ಸಂಘದ ನೂತನ ಪದಾಧಿಕಾರಿಗಳ ಆಯ್ಕೆ



ಕಾರಂಜಿ ಮತ್ತು ಸಿದ್ಧಾರ್ಥನಗರ ತೆರಿಗೆದಾರರ ಸಂಘದ ನೂತನ ನಿರ್ದೇಶಕರು ಸಂಭ್ರಮ

ಮೈಸೂರು, ಡಿ.14– ಮೈಸೂರಿನ ಸಿದ್ಧಾರ್ಥನಗರ ವಿನಯಮಾರ್ಗದಲ್ಲಿರುವ ಕಾರಂಜಿ ಮತ್ತು ಸಿದ್ಧಾರ್ಥನಗರ ತೆರಿಗೆದಾರರ ಸಂಘದ ಆಡಳಿತ ಮಂಡಳಿಗೆ ಭಾನುವಾರ ಚುನಾವಣೆ ನಡೆಯಿತು.

ಚುನಾವಣೆಯಲ್ಲಿ ಎಂ.ಮಹದೇವಮ್ಮ(367 ಮತ), ಎಸ್.ಪಿ.ಮಹೇಶ್(348), ಎಂ.ಸಿ.ವಿನಯ್(348), ಬಿ.ಎಲ್.ಅರುಣಾಕ್ಷಿ(344), ಕೆ.ಎಂ.ನಾಗಣ್ಣ(293), ಸಿ.ಡಿ.ಭಾರತಿ(289), ಎಸ್.ಈಶ್ವರ್‌ರಾವ್(283), ಮಾಂಬಳ್ಳಿ ಪಾಪೇಗೌಡ (266), ಸಿ.ಸುರೇಶ್‌ಕುಮಾರ್(261), ಎನ್.ಜಾನಕಿ(260), ಸೌಭಾಗ್ಯ(259), ಪುಟ್ಟಮಲ್ಲಯ್ಯ(243), ಎಸ್.ಸುರೇಶ್‌ಗೌಡ(243), ಕೆ.ಪಿ.ವೆಂಕಟೇಶ್(227) ಹಾಗೂ ಸಂತೋಷ್‌ಕುಮಾರ್(208) ನೂತನ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಹೆಚ್.ಎಂ.ಪುಟ್ಟಸ್ವಾಮಿಗೌಡ ತಿಳಿಸಿದ್ದಾರೆ.

ಶೀಘ್ರದಲ್ಲೇ ತೆರೆಗೆ 'ಧರ್ಮಿಷ್ಠ' ಚಲನಚಿತ್ರ

ಮೈಸೂರು, ಡಿ.14(ಜಿಎ)–ಗೋಲ್ಡನ್ ಸುರೇಶ್ ಫಿಲಂಸ್ ಅಡಿ ನಿರ್ಮಿಸಿರುವ ಜ್ಯೂನಿಯರ್ ರಾಜ್‌ಕುಮಾರ್ ಎಂದೇ ಖ್ಯಾತರಾಗಿರುವ ಅಜಿತ್ ಕುಮಾರ್ ನಾಯಕ ನಟರಾಗಿರುವ ಧರ್ಮಿಷ್ಠ ಚಲನಚಿತ್ರ ಸೆನ್ಸಾರ್ ಮಂಡಳಿ ಪ್ರಮಾಣಪತ್ರ ಪಡೆದುಕೊಂಡಿದ್ದು, ಶೀಘ್ರದಲ್ಲೇ ತೆರೆ ಕಾಣಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಮಾಜಿ ಸದಸ್ಯ ಎಂ.ಟಿ.ಪಾರ್ಥಸಾರಥಿ ಈ ವಿಷಯ ತಿಳಿಸಿ, ಈ ಚಿತ್ರದಲ್ಲಿ ಬಹುತೇಕ ಹೊಸ ಮುಖಗಳಿಗೆ ಆದ್ಯತೆ ನೀಡಲಾಗಿದೆ. ಲಯನ್ ಗೋಲ್ಡನ್ ಸುರೇಶ್ ಚಿತ್ರ ನಿರ್ಮಿಸಿದ್ದು, ಹೆಚ್.ವಿ. ಪುಟ್ಟಸ್ವಾಮಿ ನಿರ್ದೇಶಿಸಿದ್ದಾರೆ. ಇದು ಸಾಂಸಾರಿಕ ಚಿತ್ರವಾಗಿದ್ದು, ಭಾಸ್ಕರ್ ಕೃಷ್ಣ ಅವರು ನೀತಿ ಧರ್ಮ ಪಾಲನೆ ಬಗ್ಗೆ ತಿಳಿವಳಿಕೆ ನೀಡುವ ಸಂಭಾಷಣೆ, ಚಿತ್ರಕತೆ ಬರೆದಿದ್ದಾರೆ, ರವಿಶಂಕರ್ ಸಂಗೀತ ನೀಡಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಲಯನ್ ಗೋಲ್ಡನ್ ಸುರೇಶ್, ನಾಯಕ ನಟ ಅಜಿತ್ ಕುಮಾರ್, ಲಯನ್ ಎಸ್.ಪ್ರಮೀಳಾ, ಎನ್.ಸರಸ್ವತಿ ಉಪಸ್ಥಿತರಿದ್ದರು.

ನೌಕಾಪಡೆ ನಿವೃತ್ತ ಅಧಿಕಾರಿಗಳ ಸಂಘದಿಂದ ನೌಕಾಪಡೆ ದಿನಾಚರಣೆ



ನೌಕಾಪಡೆ ನಿವೃತ್ತ ಅಧಿಕಾರಿಗಳ ಸಂಘ ಮೈಸೂರು ವಿಭಾಗದ ವತಿಯಿಂದ 'ನೌಕಾಪಡೆ' ದಿನ ಆಚರಿಸಲಾಯಿತು.

ಮೈಸೂರು, ಡಿ.14(ಎಂಕೆ)– ಮೈಸೂರಿನ ಬೆಳವಾಡಿ ಖಾಸಗಿ ಹೋಟೆಲ್‌ನಲ್ಲಿ ನೌಕಾಪಡೆ ನಿವೃತ್ತ ಅಧಿಕಾರಿಗಳ ಸಂಘ ಮೈಸೂರು ವಿಭಾಗದ ವತಿಯಿಂದ 'ನೌಕಾಪಡೆ' ದಿನವನ್ನು ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು.

1971ರ ಡಿ.14 ರಂದು ಪಾಕಿಸ್ತಾನ ವಿರುದ್ಧ ನಡೆದ ಯುದ್ಧದ ಆಪರೇಷನ್ ಟ್ರೈಡೆಂಟ್‌ನಲ್ಲಿ ಭಾರತೀಯ ನೌಕಾಪಡೆ ಸಾಧಿಸಿದ ವಿಜಯದ ಸಂಕೇತವಾಗಿ ಆಚರಿಸುವ 'ನೌಕಾಪಡೆ' ದಿನವನ್ನು ಜೈಕಾರದ ಘೋಷಣೆಗಳೊಂದಿಗೆ ಸಂಭ್ರಮಿಸಲಾಯಿತು. ಹಾಗೆಯೇ ನಿವೃತ್ತ ಹಿರಿಯ ನೌಕಾಪಡೆ ಅಧಿಕಾರಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ವೇಳೆ ನಿವೃತ್ತ ಅಡ್ಮಿರಲ್ ರವಿ ಗಾಯಕ್‌ವಾಡ್ ನೌಕಾಪಡೆ ನಿವೃತ್ತ ಅಧಿಕಾರಿಗಳ ಸಂಘ ಮೈಸೂರು ವಿಭಾಗದ ಮುಖ್ಯ ಪೋಷಕ ಕೆ.ಪಿ.ಸೋಮಣ್ಣ, ನೌಕಾಪಡೆ ನಿವೃತ್ತ ಅಧಿಕಾರಿಗಳ ಸಂಘ ಮೈಸೂರು ವಿಭಾಗದ ಅಧ್ಯಕ್ಷ ಗಜಾನನ ಭಟ್, ಉಪಾಧ್ಯಕ್ಷ ಕೆ.ಪಿ.ಉತ್ತಪ್ಪ, ಕಾರ್ಯದರ್ಶಿ ಎಂ.ಎನ್.ನವೀನ್, ಜಂಟಿ ಕಾರ್ಯದರ್ಶಿ ಆನಂದ ರಾಮನ್, ಸಂಘಟನಾ ಕಾರ್ಯದರ್ಶಿ ಎಸ್.ಸಂಜಯ್ ಪ್ರಭು, ಸಲಹಾ ಸದಸ್ಯರಾದ ಜಾಲಿ ಸೋಮಣ್ಣ, ಆರ್.ರಾಜೇಶ್ ಮತ್ತಿತರರಿದ್ದರು.

ಸನ್ಮಾನ



ಮೈಸೂರಿನ ಟಿ.ಕೆ. ಬಡಾವಣೆಯಲ್ಲಿರುವ ಮಿತ್ರ ಹಿಂದಿ ವಿದ್ಯಾಲಯದ ವತಿಯಿಂದ ಯುಎಸ್‌ಎ ಫ್ಲೋರಿಡಾದ ಯೂನಿವರ್ಸಿಟಿ ಆಫ್ ದಿ ಅಮೇರಿಕಾಸ್ ವಿಶ್ವವಿದ್ಯಾಲಯದಲ್ಲಿ ಡಾ. ರಾಘವೇಂದ್ರ ಪೈ ಅವರ ಮಾರ್ಗದರ್ಶನದಲ್ಲಿ ಪ್ರಬಂಧ ಮಂಡಿಸಿ ಪಿಎಚ್‌ಡಿ ಪದವಿಗೆ ಭಾಜನರಾದ ಮೈಸೂರಿನ ಶ್ರೀಮತಿ ಬಿ.ಕೆ. ಮೀರಾ ಹಾಗೂ ಯುಎಸ್‌ಎ ಅಟ್ಲಾಂಟಾದ ಶ್ರೀಮತಿ ಶಾರದಾದೇವಿ ಅವರನ್ನು ಸನ್ಮಾನಿಸಲಾಯಿತು. ಶ್ರೀಮತಿ ಶಾಂತ, ಶ್ರೀಮತಿ ನಾಗರತ್ನ, ಶ್ರೀಮತಿ ಗಾಯತ್ರಿ ಶರ್ಮ, ಶ್ರೀಮತಿ ಪದ್ಮ, ಶ್ರೀಮತಿ ಶಾಲಿನಿ ಹಾಗೂ ವಿದ್ಯಾಲಯದ ರಘುವೀರ್ ಉಪಸ್ಥಿತರಿದ್ದರು.

ಹೊಸ ರಾಜಕೀಯ ಪಕ್ಷ ಸ್ಥಾಪಿಸುವುದಾಗಿ ಮಾಜಿ ಸಚಿವ ಸಿಎಂ ಇಬ್ರಾಹಿಂ ಘೋಷಣೆ

ಬೆಂಗಳೂರು: ಶೀಘ್ರದಲ್ಲೇ ಹೊಸ ರಾಜಕೀಯ ಪಕ್ಷ ಸ್ಥಾಪಿಸುವುದಾಗಿ ಕೇಂದ್ರದ ಮಾಜಿ ಸಚಿವ ಸಿಎಂ ಇಬ್ರಾಹಿಂ ಅವರು ಶನಿವಾರ ಘೋಷಣೆ ಮಾಡಿದ್ದಾರೆ.



ಇಬ್ರಾಹಿಂ

ಬೆಂಗಳೂರಿನ ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜನರಿಗಾಗಿ ಮೂರನೇ ಶಕ್ತಿಯನ್ನು ತರಲು ಸಿದ್ಧನಾಗಿದ್ದೇನೆ, ಪಕ್ಷದ ಚಿಹ್ನೆ ನಿರ್ಧರಿಸಲು ಭಾನುವಾರ ಕಲಬುರಗಿಯಲ್ಲಿ ಸಭೆ ನಡೆಸಲಾಗುವುದು. ನಂತರ ಮೈಸೂರು ಮತ್ತು ಬೆಳಗಾವಿಯಲ್ಲಿ ಸಮಾನ ಮನಸ್ಕ ಜನರ ಸಭೆಗಳನ್ನು ನಡೆಸಲಾಗುವುದು. ನಮ್ಮ ಹೊಸ ಪಕ್ಷ ಬಸವಣ್ಣ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಅವರ ಸಿದ್ಧಾಂತವನ್ನು ಅಳವಡಿಸಿಕೊಳ್ಳಲಿದೆ ಎಂದು ಹೇಳಿದರು.

ರಾಜ್ಯದ ಯಾವುದೇ ರಾಜಕೀಯ ಪಕ್ಷವು ದಲಿತ ಮತ್ತು ಮುಸ್ಲಿಂ ಮುಖ್ಯಮಂತ್ರಿಯಾಗಬೇಕೆಂದು ಹೇಳಲು ಸಿದ್ಧರಿಲ್ಲ. ಐದು ವರ್ಷಗಳ ಕಾಲ ಪರ್ಯಾಯ ಅಧಿಕಾರಕ್ಕಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಹೊಂದಾಣಿಕೆ ಮಾಡಿಕೊಂಡಂತೆ ಕಾಣುತ್ತಿದೆ.

ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ನಡುವಿನ ಕುರ್ಚಿ ಕಿತ್ತಾಟದ ವಿಚಾರದಲ್ಲಿ ಕರ್ನಾಟಕ ಇಬ್ಭಾಗ ಆಗುತ್ತದೆ, ಇವತ್ತು ರಾಜ್ಯ ಸರ್ಕಾರ ಸಂಪೂರ್ಣ ವೈಫಲ್ಯವಾಗಿದೆ. ಒಂದೊಂದು ವಸ್ತುಗಳ ಬೆಲೆ ಹೆಚ್ಚಳವಾಗಿದೆ. ನಮ್ಮ ಹೊಸ ಪಕ್ಷಕ್ಕೆ ಎಲ್ಲರ ಸಹಕಾರ ಬೇಕು. ರಾಜ್ಯದ ಜನ ಸಂಕಷ್ಟದಲ್ಲಿದ್ದಾರೆ. ಸರ್ಕಾರಗಳು ಕೆಲಸ ಮಾಡುತ್ತಿಲ್ಲ. ನಾನು, ನೀನು, ಎನ್ನುವ ಹೋರಾಟ ನಡೆಯುತ್ತಿದೆ.

ಬೆಳಗಾವಿಯಲ್ಲಿ ಡಿನ್ನರ್ ಮಾಡುತ್ತಿದ್ದಾರೆ. ಇದು ಹೀಗೆ ಮುಂದುವರೆದರೆ ಕರ್ನಾಟಕ ಎರಡು ಭಾಗವಾಗುತ್ತದೆ. ಹೀಗಾಗಿ ಜನರಿಗಾಗಿ ನಾವು ಒಂದು ಪಕ್ಷವನ್ನ ಸ್ಥಾಪನೆ ಮಾಡುತ್ತಿದ್ದೇವೆ. ಎಲ್ಲಾ ಪಕ್ಷಗಳು ನಮ್ಮನ್ನ ಬಳಸಿಕೊಂಡರು, ಆದರೆ, ಏನು ಮಾಡಲಿಲ್ಲ ಎಂದು ಕಿಡಿಕಾರಿದರು.

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಮೂಲ ಸೌಕರ್ಯ ಕಲ್ಪಿಸುವ ಯತ್ನ

● ಸಂಸದ ಯದುವೀರ್ ಭರವಸೆ ● ಇತರ ಗಣ್ಯರೊಂದಿಗೆ ಎಲ್ಲೆಡೆ ಆಲೂರು ವೆಂಕಟರಾಯರ ಫೋಟೋ ಹಾಕಲು ಆಗ್ರಹ

ಮೈಸೂರು, ಡಿ.14(ಎಂಟಿವೈ)– ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತ ಸ್ಥಾನಮಾನ ನೀಡಲು ಕೇಂದ್ರ ಸರ್ಕಾರ ಶೀಘ್ರದಲ್ಲೇ ನಿರ್ಣಯ ಕೈಗೊಂಡು, ಇದಕ್ಕೆ ಮೂಲಭೂತ ಸೌಲಭ್ಯ ಒದಗಿಸುತ್ತದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭರವಸೆ ನೀಡಿದ್ದಾರೆ.

ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಭಾರತೀಯ ಭಾಷಾ ಸಂಸ್ಥಾನದಲ್ಲಿನ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದಲ್ಲಿ ಭಾನುವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತ ಸ್ಥಾನ ನೀಡುವಂತೆ ಈ ಹಿಂದೆಯೇ ಹೋರಾಟ ನಡೆದಿತ್ತು. ಈ ಕೇಂದ್ರಕ್ಕೆ ಸ್ವಾಯತ್ತತೆ ಸಿಕ್ಕಿಲ್ಲದ ಕಾರಣ ನಿರೀಕ್ಷಿತ ಮಟ್ಟದಲ್ಲಿ ಕನ್ನಡ ಭಾಷೆಯ ಸಂಶೋಧನೆ ಮತ್ತು ಅಧ್ಯಯನ ಚಟುವಟಿಕೆಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲ. ಸ್ವಾಯತ್ತತೆ ನೀಡುವ ಸಂಬಂಧ ಕೆಲವೇ ಕೆಲವು ಪ್ರಕ್ರಿಯೆ ಮಾತ್ರ ಬಾಕಿ ಇದೆ. ಶೀಘ್ರದಲ್ಲೇ ಸ್ವಾಯತ್ತತೆ ನೀಡುವ ನಿರ್ಣಯ ಕೈಗೊಳ್ಳಲಿದೆ ಎಂದರು.

ಸ್ವಾಯತ್ತತೆ ದೊರೆತ ನಂತರ ಭಾರತೀಯ ಭಾಷಾ ಸಂಸ್ಥೆಯಿಂದ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಬೇರ್ಪಡಿಸಿ, ಸೂಕ್ತ ಸ್ಥಳ ಗುರುತಿಸಿ, ಪ್ರತ್ಯೇಕವಾಗಿ ಕಾರ್ಯನಿರ್ವಹಿಸುವ ವ್ಯವಸ್ಥೆ ಮಾಡಲಾಗುತ್ತದೆ. ಅಲ್ಲದೆ, ಕೇಂದ್ರಕ್ಕೆ ಬೇಕಾದ ಮೂಲ ಸೌಲಭ್ಯ ಒದಗಿಸಲಾಗುತ್ತದೆ. ಆ ಸೌಲಭ್ಯ ಬಳಸಿಕೊಂಡು ಕನ್ನಡ ಭಾಷೆ, ಪರಂಪರೆ ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಸಂಶೋಧನೆ ನಡೆಸಬೇಕಾಗಿದೆ ಎಂದು ಸಲಹೆ ನೀಡಿದರು.

ರಾಜ್ಯ ಸರ್ಕಾರಗಳಿಗೆ ಕೇಂದ್ರವು ಸಾಕಷ್ಟು ಮೂಲ ಸೌಕರ್ಯ ನೀಡುತ್ತಿದೆ. ಜಿಎಸ್ಟಿ ಕಡಿತ ಲಾಭವನ್ನು ಐಷಾರಾಮಿ ಜೀವನಕ್ಕೆ ಬಳಸದೇ ಸಮಾಜಮುಖಿ ಕೆಲಸಕ್ಕೆ ಬಳಸಬೇಕು. ಆಗ ಮಾತ್ರ ವಿಕಸಿತ ಭಾರತ ನಿರ್ಮಾಣ ಸಾಧ್ಯ. ಕರ್ನಾಟಕ ಅಭಿವೃದ್ಧಿಯಲ್ಲಿ ಸ್ವಲ್ಪ ಹಿಂದುಳಿದಿದೆ. ಐಟಿ ವಲಯಕ್ಕೆ ಹಿಂದೆ ಇದ್ದಂಥ ಸೂಕ್ತ ವ್ಯವಸ್ಥೆ ದೊರೆಯುತ್ತಿಲ್ಲ. ನೆರೆಯ ಆಂಧ್ರಪ್ರದೇಶ, ತೆಲಂಗಾಣ ಸರ್ಕಾರಗಳು ಹಲವಾರು ಯೋಜನೆಗಳ ಮೂಲಕ ಉದ್ಯಮಗಳನ್ನು ಸೆಳೆಯುತ್ತಿವೆ. ಈ ನಿಟ್ಟಿನಲ್ಲಿ ಕರ್ನಾಟಕದ ಗತವೈಭವ ಹಾಗೂ ಅಭಿವೃದ್ಧಿಯನ್ನೂ ಒಟ್ಟಿಗೆ ಕೊಂಡೊಯ್ಯುವ ಕೆಲಸವಾಗಬೇಕು ಎಂದು ಆಶಿಸಿದರು.



ಮೈಸೂರಿನ ಭಾರತೀಯ ಭಾಷಾ ಸಂಸ್ಥೆಯಲ್ಲಿರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದಲ್ಲಿ ಭಾನುವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿ, ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಭಾವಚಿತ್ರ ಅಳವಡಿಸಬೇಕು: ಕರ್ನಾಟಕ ಏಕೀಕರಣ ಹೋರಾಟದಲ್ಲಿ ಕನ್ನಡದ ಕುಲಪುರೋಹಿತರಾದ ಆಲೂರು ವೆಂಕಟರಾಯರ ಶ್ರಮ ಹೆಚ್ಚಾಗಿದೆ. ಕನ್ನಡ ಭಾಷೆ ಸಂರಕ್ಷಣೆಗೆ ಹಲವು ಸಂಸ್ಥೆಗಳಿವೆ. ಸರ್ಕಾರಿ ಕಚೇರಿ, ಕನ್ನಡ ಅಧ್ಯಯನ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಕಚೇರಿಗಳಲ್ಲಿ ಬಸವಣ್ಣ, ಕುವೆಂಪು ಸೇರಿದಂತೆ ಮಹನೀಯರ ಫೋಟೋ ಹಾಕಲಾಗಿದೆ. ಅವರೊಂದಿಗೆ ಕರ್ನಾಟಕ ಏಕೀಕರಣ ಹೋರಾಟಕ್ಕೆ ಚಾಲನೆ ನೀಡಿದ ಹಾಗೂ ಅಖಂಡ ಕರ್ನಾಟಕ ಕನಸು ನನಸು ಮಾಡಿದ ಕನ್ನಡದ ಕುಲಪುರೋಹಿತ ಆಲೂರು ವೆಂಕಟರಾಯರ ಫೋಟೊ ಅಳವಡಿಸಿ, ಗೌರವಿಸಬೇಕಾಗಿದೆ ಎಂದರು.

ಆಲೂರು ವೆಂಕಟರಾಯರು, ಕರ್ನಾಟಕ ಗತವೈಭವ ಪುಸ್ತಕ ಬರೆದು ಕರ್ನಾಟದ ಏಕೀಕರಣದ ಮಹತ್ವ ಸಾರಿದರು. ಮೈಸೂರು ಸಂಸ್ಥಾನ ಎಂಬ ಹೆಸರಿದ್ದ ಕರುನಾಡಿಗೆ 1973ರಲ್ಲಿ ಕರ್ನಾಟಕ ಎಂದು ನಾಮಕರಣ ಮಾಡಲಾಯಿತು. ಇದರ ಹಿಂದೆ ಅನೇಕ ಮಹನೀಯರ ತ್ಯಾಗ, ಪರಿಶ್ರಮವಿದೆ. ಈ ಹಿನ್ನೆಲೆಯಲ್ಲಿ ಭವಿಷ್ಯದಲ್ಲಿ ರಾಜ್ಯವನ್ನು ಹೇಗೆ ರೂಪಿಸಬಹುದು ಎಂದು ಎಲ್ಲರೂ ಚಿಂತಿಸಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ಈ ಹಿಂದೆ ಪ್ರಗತಿಪರ ರಾಜ್ಯವಾಗಿ ತನ್ನದೇ ಆದ ಪರಂಪರೆ ಹೊಂದಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕಕ್ಕೆ ಎಲ್ಲಾ ರೀತಿಯಲ್ಲೂ ಹಿನ್ನಡೆಯಾಗಿದೆ. ದಕ್ಷಿಣ ಭಾರತ ಎಂದರೆ ಈ ಹಿಂದೆ ವಾಣಿಜ್ಯ ದೃಷ್ಟಿಯಲ್ಲಿ ಬೆಂಗಳೂರು, ಸಾಂಸ್ಕೃತಿಕ ಮೈಸೂರಿನತ್ತ ದೇಶದ ಜನ ಹಾಗೂ ಉದ್ಯಮಿಗಳು ನೋಡುತ್ತಿದ್ದರು. ಆದರೆ, ಇದೀಗ ಬೆಂಗಳೂರಿಂದ ಐಟಿ ಹಬ್ ವಿಜಯವಾಡಕ್ಕೆ ಹೋಗಿದೆ. ಐಟಿ ಕ್ರಾಂತಿಯಲ್ಲಿ ಕರ್ನಾಟಕ ಸಾಧನೆ ಮಾಡಿತ್ತು. ಭವಿಷ್ಯದ ದೃಷ್ಟಿಯಿಂದ ಬೇರೆ ರಾಜ್ಯದಂತೆ ಗುಣಮಟ್ಟದ ಸೌಲಭ್ಯ ಒದಗಿಸಬೇಕಾಗಿದೆ ಎಂದರು.


ಇದೇ ವೇಳೆ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ ಮಾತನಾಡಿ, ಕೇಂದ್ರವು ಹಲವು ಪುಸ್ತಕಗಳನ್ನು ಹೊರತರುತ್ತಿದೆ 22 ಪುಸ್ತಕಗಳು ಸಿದ್ಧವಾಗಿದ್ದು, ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯ ಅನುಮತಿಗೆ ಕಾಯುತ್ತಿದ್ದು, ಈ ಬಗ್ಗೆ ಸಂಸದರು ಗಮನಹರಿಸಬೇಕು ಎಂದು ಮನವಿ ಮಾಡಿದರು.

ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿದರು. ಶಾಸ್ತ್ರೀಯ ಭಾಷೆಗಳು ವಿಭಾಗದ ಸಂಯೋಜಕ ಎಲ್.ಆರ್.ಪ್ರೇಮ್ ಕುಮಾರ್ ಹಾಜರಿದ್ದರು.

ದೇಶ – ವಿದೇಶ

ಪಾಕ್‌ನ ಎರಡು ವಿವಿಗಳಲ್ಲಿ ಸಂಸ್ಕೃತ ಕೋರ್ಸ್ ಆರಂಭ; ಭಗವದ್ಗೀತೆ, ಮಹಾಭಾರತ ಕಲಿಸಲು ಪ್ಲಾನ್


ಇಸ್ಲಾಮಾಬಾದ್: ವಿಭಜನೆಯ ನಂತರ ಇದೇ ಮೊದಲ ಬಾರಿಗೆ ಪಾಕಿಸ್ತಾನದ ಎರಡು ವಿಶ್ವವಿದ್ಯಾಲಯಗಳು ಸಂಸ್ಕೃತ ಕೋರ್ಸ್ ಆರಂಭಿಸಿವೆ. ವಿಭಜನೆಯ ಪರಂಪರೆ ಉಲ್ಲೇಖಿಸಿ ಪಂಜಾಬ್‌ನ ಎರಡು ವಿಶ್ವವಿದ್ಯಾನಿಲಯಗಳು ಸಂಸ್ಕೃತದಲ್ಲಿ ಕಿರು ಕೋರ್ಸ್‌ಗಳನ್ನು ಪ್ರಾರಂಭಿಸಿದ್ದು, ಭವಿಷ್ಯದಲ್ಲಿ ಭಗವದ್ಗೀತೆ ಮತ್ತು ಮಹಾಭಾರತವನ್ನು ಕಲಿಸಲು ಯೋಜಿಸಿವೆ.



ಪಂಜಾಬ್ ಲಾಹೋರ್ ವಿಶ್ವವಿದ್ಯಾಲಯ (ಸಾರ್ವಜನಿಕ) ಮತ್ತು ಲಾಹೋರ್ ಯೂನಿವರ್ಸಿಟಿ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್ (ಖಾಸಗಿ) ಈ ಶಾಸ್ತ್ರೀಯ ಭಾಷೆಯಲ್ಲಿ ಮೂರು ತಿಂಗಳ ಕೋರ್ಸ್ ಅನ್ನು ಪ್ರಾರಂಭಿಸಿವೆ. ಸಂಶೋಧನೆಗಾಗಿ ಪಂಜಾಬ್ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತದ ಹಸ್ತಪ್ರತಿಗಳ ಸಂಗ್ರಹ ಕಾರ್ಯವನ್ನು ಬೋಧಕರು ಮಾಡುತ್ತಿದ್ದಾರೆ. ಕಳೆದ ವರ್ಷ ಅಲ್ಪಾವಧಿಯ ಕೋರ್ಸ್‌ಗಳಿಗೆ ಸಿದ್ಧತೆ ಪ್ರಾರಂಭವಾಗಿತ್ತು. 2025ರಲ್ಲಿ ಮೊದಲ ಕೋರ್ಸ್‌ಗೆ ಪ್ರವೇಶ ಮಾಡಿಕೊಳ್ಳಲಾಗಿದೆ.

ಪತ್ನಿ ಕೊಂದ ಭಾರತೀಯ ಮೂಲದ ವ್ಯಕ್ತಿಗೆ ಕುವೈತ್‌ನಲ್ಲಿ ಗಲ್ಲು ಶಿಕ್ಷೆ

ಕುವೈತ್: ವೈವಾಹಿಕ ಕಲಹದಿಂದ ಪತ್ನಿಯನ್ನು ಕೊಂದ ಭಾರತೀಯ ಮೂಲದ ವ್ಯಕ್ತಿಗೆ ಕುವೈತ್‌ನಲ್ಲಿ ಮರಣ ದಂಡನೆ ಶಿಕ್ಷೆ ಪ್ರಕಟವಾಗಿದೆ.



ಕುವೈತ್‌ನ ಸಲ್ಮಿ ಎಂಬ ಪ್ರದೇಶದಲ್ಲಿ ಭಾರತೀಯ ಮೂಲದ ವ್ಯಕ್ತಿಯೊಬ್ಬ ವೈವಾಹಿಕ ಕಲಹದಿಂದ ತನ್ನ ಪತ್ನಿಯ ತಲೆಗೆ ಮಾರಕಾಯುಧದಿಂದ ಹೊಡೆದು ಕೊಂದಿದ್ದಾನೆ. ಈ ಪ್ರಕರಣದ ವಿಚಾರಣೆ ನಡೆಸಿರುವ ಕುವೈತ್‌ನ ಕ್ರಿಮಿನಲ್ ಕೋರ್ಟ್‌ನ ನ್ಯಾಯಾಧೀಶ ನಾಯೆಫ್ ಅಲ್–ದಹೌವ್ ಆತನಿಗೆ ಮರಣಶಿಕ್ಷೆ ವಿಧಿಸಿದೆ. ಅರಬ್ ಟೈಮ್ಸ್ ವರದಿ ಪ್ರಕಾರ ಭಾರತೀಯ ಮೂಲದ ಈ ವ್ಯಕ್ತಿ ತನ್ನ ಪತ್ನಿಯ ತಲೆಗೆ ಹಲವು ಬಾರಿ ಸುತ್ತಿಗೆಯಿಂದ ಹೊಡೆದಿದ್ದಾನೆ. ಇದರಿಂದ ಆಕೆ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಪೊಲೀಸರು ತಕ್ಷಣವೇ ಆರೋಪಿಯನ್ನು ಬಂಧಿಸಿ, ತನಿಖೆ ನಡೆಸಿದರು. ನಂತರ ಪ್ರಕರಣವನ್ನು ಕ್ರಿಮಿನಲ್ ಕೋರ್ಟ್‌ಗೆ ಒಪ್ಪಿಸಲಾಯಿತು. ಸಾಕ್ಷ್ಯಗಳನ್ನು ಪರಿಶೀಲಿಸಿದ ನಂತರ, ನ್ಯಾಯಾಲಯವು ಆರೋಪಿಯ ತಪ್ಪನ್ನು ದೃಢಪಡಿಸಿ ಮರಣದಂಡನೆ ವಿಧಿಸಿದೆ.

ಕೆನಡಾದಲ್ಲಿ ಗುಂಡಿಕ್ಕಿ ಪಂಜಾಬ್‌ನ ಇಬ್ಬರು ಯುವಕರ ಹತ್ಯೆ

ಕೆನಡಾ: ಕೆನಡಾದ ಆಗ್ನೇಯ ಎಡ್ಮಂಟನ್‌ನಲ್ಲಿ ಅಪರಿಚಿತ ದುಷ್ಕರ್ಮಿಗಳು ಪಂಜಾಬ್ ಮೂಲದ ಇಬ್ಬರು ಯುವಕರನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ಮೃತರನ್ನು ಬರೆಹ್ ಗ್ರಾಮದ ಗುರುದೀಪ್ ಸಿಂಗ್ ಮತ್ತು ಪಂಜಾಬ್‌ನ ಮಾನ್ಸಾದ ಬುಧ್ಲಾಡಾ ಬಳಿಯ ಉದ್ದತ್ ಸೈದೇವಾಲಾ ಗ್ರಾಮದ ರಣಬೀರ್ ಸಿಂಗ್ ಎಂದು ಗುರುತಿಸಲಾಗಿದೆ.



ಗುರುದೀಪ್ ಅವರ ಕುಟುಂಬವು ಅವರ ಸ್ನೇಹಿತ ಅರ್ಷ್ ದೀಪ್ ಅವರಿಂದ ಪಡೆದ ಮಾಹಿತಿ ಪ್ರಕಾರ ಸ್ನೇಹಿತನ ಹುಟ್ಟುಹಬ್ಬ ಆಚರಿಸಲು ಇಬ್ಬರು ಹೋಗುತ್ತಿದ್ದಾಗ ಶುಕ್ರವಾರ ಮುಂಜಾನೆ ಅವರ ಮೇಲೆ ಗುಂಡು ಹಾರಿಸಲಾಗಿದೆ ಎಂದು ಹೇಳಲಾಗಿದೆ.

ಉತ್ತಮ ವೃತ್ತಿ ಹುಡುಕಾಟದಲ್ಲಿ ಇಬ್ಬರೂ ಪ್ರತ್ಯೇಕವಾಗಿ ಕೆನಡಾಕ್ಕೆ ತೆರಳಿದ್ದರು. ಈ ಘಟನೆಯನ್ನು ಉದ್ದೇಶಿತ ದಾಳಿ ಎಂದು ಎಡ್ಮಂಟನ್ ಪೊಲೀಸ್ ಸೇವೆ ಶಂಕಿಸಿದ್ದು, ತನಿಖೆಯನ್ನು ಪ್ರಾರಂಭಿಸಿರುವುದಾಗಿ ತಿಳಿಸಿದೆ. ಪೊಲೀಸರು ತನಿಖೆ ನಡೆಸುತ್ತಿದ್ದು, ಡಿ.16 ಮತ್ತು 17 ರಂದು ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ಬ್ರಾನ್ ಯೂನಿವರ್ಸಿಟಿ ಶೂಟಿಂಗ್‌ನಲ್ಲಿ ಇಬ್ಬರು ಸಾವು

ವಾಷಿಂಗ್ಟನ್: ಸ್ಥಳೀಯ ಕಾಲಮಾನ ಶನಿವಾರ ಅಮೆರಿಕದ ಬ್ರೌನ್ ವಿಶ್ವವಿದ್ಯಾಲಯದಲ್ಲಿ ಗುಂಡಿನ ದಾಳಿ ನಡೆದಿದ್ದು, ಘಟನೆಯಲ್ಲಿ ಇಬ್ಬರು ಮೃತಪಟ್ಟು, ಎಂಟು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ರೋಡ್ ಐಲೆಂಡ್‌ನ ಪ್ರಾವಿಡೆನ್ಸ್‌ನ ಮೇಯರ್ ರಾಯಿಟರ್ಸ್ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.



ಗುಂಡಿನ ದಾಳಿ ಆರಂಭವಾಗಿ ಮೂರು ಗಂಟೆಗಳ ನಂತರ, ವಿದ್ಯಾರ್ಥಿಗಳು ರೋಡ್ ಐಲೆಂಡ್‌ನ ಪ್ರಾವಿಡೆನ್ಸ್‌ನಲ್ಲಿರುವ ಕ್ಯಾಂಪಸ್‌ನಲ್ಲಿರುವ ತಮ್ಮ ವಸತಿ ನಿಲಯಗಳು ಮತ್ತು ತರಗತಿ ಕೋಣೆಗಳಲ್ಲಿ ಅಡಗಿ ಕುಳಿತುಕೊಂಡು ತಮ್ಮನ್ನು ರಕ್ಷಿಸಿಕೊಂಡರು ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಮೇಯರ್ ಬ್ರೆಟ್ ಸ್ಮೈಲಿ ಆರಂಭದಲ್ಲಿ ಮಾಧ್ಯಮಗಳಿಗೆ ತಿಳಿಸಿದ್ದು, ಪೊಲೀಸರು ಕಪ್ಪು ಬಟ್ಟೆ ಧರಿಸಿದ ಶಂಕಿತ ವ್ಯಕ್ತಿಯನ್ನು ಹುಡುಕುತ್ತಿದ್ದಾರೆ. ಶಂಕಿತ ದಾಳಿಕೋರನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಬರಸ್ ಮತ್ತು ಹೋಲಿ ಎಂಜಿನಿಯರಿಂಗ್ ಕಟ್ಟಡದಲ್ಲಿ ಸಹ ಗುಂಡಿನ ದಾಳಿಯಿಂದ ಇಬ್ಬರು ಮೃತಪಟ್ಟಿದ್ದಾರೆ. ಆಸ್ಪತ್ರೆಯಲ್ಲಿ ಎಂಟು ಮಂದಿ ಗಂಭೀರ ಸ್ಥಿತಿಯಲ್ಲಿದ್ದಾರೆ. ನಿನ್ನೆ ಸಂಜೆ 4:22ರ ಸುಮಾರಿಗೆ ಗುಂಡಿನ ದಾಳಿ ವರದಿಯಾಗಿದೆ.

ಹರ್ಯಾಣ ಹೆದ್ದಾರಿಯಲ್ಲಿ ದಟ್ಟ ಮಂಜು: ಡಜನ್‌ಗೂ ಅಧಿಕ ವಾಹನಗಳ ಸರಣಿ ಅಪಘಾತ

ಹರ್ಯಾಣ: ಹರ್ಯಾಣದ ಹೆದ್ದಾರಿಗಳಲ್ಲಿ ಭಾನುವಾರ ಮುಂಜಾನೆ ದಟ್ಟವಾದ ಮಂಜು ಕವಿದಿದ್ದರಿಂದ ಎರಡು ಪ್ರಮುಖ ಅಪಘಾತಗಳಲ್ಲಿ ಹಲವಾರು ವಾಹನಗಳು ಜಖಂಗೊಂಡಿರುವ ಘಟನೆ ನಡೆದಿದ್ದು ಕೆಲವು ಪ್ರಯಾಣಿಕರು ಗಾಯಗೊಂಡಿದ್ದಾರೆ.



ಹರ್ಯಾಣದ ಹಿಸಾರ್‌ನಲ್ಲಿ, ರಾಷ್ಟ್ರೀಯ ಹೆದ್ದಾರಿ 52ರ ಧಿಕ್ತಾನಾ ಮೋಡಾದಲ್ಲಿ ಬೆಳಗ್ಗೆ 8 ಗಂಟೆ ಸುಮಾರಿಗೆ ಸರಣಿ ಡಿಕ್ಕಿ ಸಂಭವಿಸಿದೆ. ಎರಡು ಹರ್ಯಾಣ ರಸ್ತೆ ಸಾರಿಗೆ ಬಸ್‌ಗಳು, ಒಂದು ಡಂಪರ್ ಟ್ರಕ್, ಹಲವು ಕಾರುಗಳು, ದ್ವಿಚಕ್ರ ವಾಹನಗಳು ಒಂದರ ಹಿಂದೆ ಒಂದರಂತೆ ಸತತವಾಗಿ ಡಿಕ್ಕಿ ಹೊಡೆದಿದ್ದು ಈ ವೀಡಿಯೊ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಕೈತಾಲ್ ರಸ್ತೆ ಸಾರಿಗೆ ಬಸ್ ಡಂಪರ್ ಟ್ರಕ್‌ಗೆ ಡಿಕ್ಕಿ ಹೊಡೆದ ನಂತರ ಘಟನೆ ನಡೆದಿದೆ. ನಂತರ ಹಿಂದಿನಿಂದ ಬಂದ ಮತ್ತೊಂದು ರಾಜ್ಯ ಸಾರಿಗೆ ಬಸ್ ಈಗಾಗಲೇ ಅಪಘಾತಕ್ಕೀಡಾದ ವಾಹನಗಳಿಗೆ ಡಿಕ್ಕಿ ಹೊಡೆದಿದೆ.

ಕ್ರೀಡಾ ಚಟುವಟಿಕೆಯಿಂದ ಸಮಾಜದಲ್ಲಿ ಉನ್ನತಿ



ಅರಮೇರಿ ಕಳಂಚೇರಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ಉದ್ಘಾಟಿಸಿ, ಮಾತನಾಡಿದರು.

ವಿರಾಜಪೇಟೆ, ಡಿ.14– ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದರಿಂದ ನಮ್ಮ ಗೌರವವನ್ನು ಇಮ್ಮಡಿಗೊಳಿಸಿ ಸಮಾಜದಲ್ಲಿ ಪ್ರಸಿದ್ಧಿಗೊಳ್ಳಲು ಕಾರಣವಾಗುತ್ತದೆ ಎಂದು ಅರಮೇರಿ ಕಳಂಚೇರಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ಕೊಡಗು ಬ್ರಾಹ್ಮಣರ ವಿದ್ಯಾಭಿವೃದ್ಧಿ ನಿಧಿ ಇಲ್ಲಿನ ಜೂನಿಯರ್ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದ್ದ ನಾಲ್ಕನೇ ವರ್ಷದ ಜಿಲ್ಲಾ ಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿದ ಸ್ವಾಮೀಜಿ, ಬ್ರಾಹ್ಮಣರ ವಿದ್ಯಾಭಿವೃದ್ಧಿ ನಿಧಿಯಿಂದ ಗ್ರಾಮೀಣ ಭಾಗದಲ್ಲಿ ಎಲೆಮರೆ ಕಾಯಿಯಂತಿರುವ ಯುವಕರ ಪ್ರತಿಭೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ವರ್ಷಂಪ್ರತಿ ಕ್ರೀಡಾಕೂಟ ನಡೆಸಿಕೊಂಡು ಬರುತ್ತಿರುವುದು ಶ್ಲಾಘನಿಯ, ಎಂದರು.

ಬ್ರಾಹ್ಮಣರ ವಿದ್ಯಾಭಿವೃದ್ಧಿ ನಿಧಿ ಅಧ್ಯಕ್ಷ ರಾಮಚಂದ್ರ ಮೂಗೂರು ಮಾತನಾಡಿ ನಾಲ್ಕು ವರ್ಷಗಳಿಂದ ಪಂದ್ಯಾವಳಿಯನ್ನು ನಡೆಸಿಕೊಂಡು ಬರುತ್ತಿದ್ದು, ಮುಂದೆಯೂ ಇನ್ನೂ ಹೆಚ್ಚಿನ ರೀತಿಯಲ್ಲಿ ಪುರುಷರು, ಮಹಿಳೆಯರು ಮತ್ತು ಮಕ್ಕಳಿಗೆ ಪ್ರತ್ಯೇಕವಾಗಿ ಪಂದ್ಯಾಟವನ್ನು ಏರ್ಪಡಿಸುವುದಾಗಿ ತಿಳಿಸಿದರು.

ಜಿಲ್ಲಾ ಸಹ ಕಾರ್ಯದರ್ಶಿ ಎ.ವಿ.ಮಂಜುನಾಥ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಕೊಡಗು ಹವ್ಯಕ ಬ್ರಾಹ್ಮಣರ ಉತ್ತಮ ಜೀವನ ಸಹಕಾರ ಸಂಘದ ಹರಿಶಂಕರ್ ಪ್ರಸಾದ್, ಕ್ರೀಡಾ ಸಂಚಾಲಕ ಬಿ.ಕೆ. ಜಗದೀಶ್, ಸಹ ಸಂಚಾಲಕ ಸುಧೀರ್ ಮಕ್ಕಿಮನೆ ಮತ್ತು ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ನಾಪೋಕ್ಲು ಮುಖ್ಯ ಶಿಕ್ಷಕ ಸಿ.ಎಸ್. ಸುರೇಶ್ ಸ್ವಾಗತಿಸಿದರು, ಎ.ವಿ.ಮಂಜುನಾಥ್ ನಿರೂಪಿಸಿದರೆ, ಕ್ರೀಡಾ ಸಂಚಾಲಕ ಬಿ.ಕೆ.ಜಗದೀಶ್ ವಂದಿಸಿದರು. ನಾಲ್ಕನೆ ವರ್ಷದ ಪಂದ್ಯಾವಳಿಯಲ್ಲಿ ಟೆನ್ನಿಸ್ ಬಾಲ್ ಕ್ರಿಕೆಟ್ 9 ತಂಡಗಳು ಭಾಗವಹಿಸಿದ್ದವು. ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ಹಗ್ಗ ಜಗ್ಗಾಟ ಪಂದ್ಯ ಏರ್ಪಡಿಸಲಾಗಿತ್ತು, ಜಿಲ್ಲೆಯ ಇತರೆಡೆಗಳಿಂದಲು ಕ್ರೀಡಾಪಟುಗಳು ಹಾಗೂ ಕ್ರೀಡಾಭಿಮಾನಿಗಳು ಭಾಗವಹಿಸಿದ್ದರು.

ಶಿಸ್ತು, ವಿಧೇಯತೆ, ಸಮಯ ಪಾಲನೆ ವಿದ್ಯಾರ್ಥಿಗಳಿಗೆ ಉತ್ತಮ ಹವ್ಯಾಸ



ಶ್ರೀರಾಮ ಟ್ರಸ್ಟ್ ಆಂಗ್ಲ ಮಾಧ್ಯಮ ಶಾಲೆ ವಾರ್ಷಿಕೋತ್ಸವ ಸಮಾರಂಭದಲ್ಲಿ ಚಿಣ್ಣರ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ನಾಪೋಕ್ಲು, ಡಿ.14(ದುಗ್ಗಳ)– ಶಿಸ್ತು, ವಿಧೇಯತೆ ಮತ್ತು ಸಮಯ ಪಾಲನೆ ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕಾದ ಉತ್ತಮ ಹವ್ಯಾಸಗಳು ಎಂದು ಫೀಲ್ಡ್ ಮಾರ್ಷಲ್ ಕೆಎಂ ಕಾರ್ಯಪ್ಪ ಕಾಲೇಜು ನಿವೃತ್ತ ಪ್ರಾಂಶುಪಾಲ ಚೌರಿರ ಡಾ.ಜಗತ್ ತಿಮ್ಮಯ್ಯ ಹೇಳಿದರು.

ಇಲ್ಲಿನ ಶ್ರೀರಾಮ ಟ್ರಸ್ಟ್ ಆಂಗ್ಲ ಮಾಧ್ಯಮ ಶಾಲೆಯ ವತಿಯಿಂದ ಶನಿವಾರ ಆಯೋಜಿಸಲಾಗಿದ್ದ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ಪೋಷಕರು ಮಕ್ಕಳಿಗೆ ಒಳ್ಳೆಯ ಮಾರ್ಗದರ್ಶನ ನೀಡದಿದ್ದರೆ ಮಕ್ಕಳು ಬೆಳೆಯಲು ಸಾಧ್ಯವಿಲ್ಲ. ಪೋಷಕರು ಮಕ್ಕಳಿಗೆ ಶಿಸ್ತು ಮತ್ತು ಸಮಯ ಪಾಲನೆಯ ಮಹತ್ವವನ್ನು ಅರಿವು ಮೂಡಿಸಬೇಕು. ಎಂದರು.

ಸಂಸ್ಥೆಯ ಅಧ್ಯಕ್ಷ ಕಲಿಯಂಡ ಹ್ಯಾರಿ ಮಂದಣ್ಣ ಅಧ್ಯಕ್ಷತೆ ವಹಿಸಿ ಮಾತನಾಡಿ ನಮ್ಮ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಉನ್ನತ ಸ್ಥಾನಮಾನಗಳನ್ನು ಪಡೆದಿದ್ದು, ಸಂಸ್ಥೆಗೆ ಕೀರ್ತಿಯನ್ನು ತಂದಿದ್ದಾರೆ. ಸಂಸ್ಥೆಯ ಉನ್ನತೀಕರಣಕ್ಕೆ ಎಲ್ಲರ ಸಹಕಾರ ಅವಶ್ಯಕತೆವಾಗಿದ್ದು ಸಹಕರಿಸುವಂತೆ ಮನವಿ ಮಾಡಿದರು. ಶೈಕ್ಷಣಿಕ ವರ್ಷದಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಗಣ್ಯರು ಬಹುಮಾನಗಳನ್ನು ವಿತರಿಸಿ ಶುಭ ಹಾರೈಸಿದರು.

ವೇದಿಕೆಯಲ್ಲಿ ಆಡಳಿತ ಮಂಡಳಿ ಉಪಾಧ್ಯಕ್ಷ ನೆರುವಂಡ ಸುನಿಲ್ ದೇವಯ್ಯ, ಕಾರ್ಯದರ್ಶಿ ನಾಯಕಂಡ ದೀಪಕ್ ಚಂಗಪ್ಪ, ನಿರ್ದೇಶಕರಾದ ಬಿದ್ದಾಟಂಡ ಪಾಪ ಮುದ್ದಯ್ಯ, ಬಿದ್ದಾಟಂಡ ಮುತ್ತಣ್ಣ, ಬೊಳ್ಳಚೆಟ್ಟಿರ ಸುರೇಶ್, ಕಲಿಯಂಡ ಕೌಶಿಕ್ ಕುಶಾಲಪ್ಪ, ಅಪ್ಪಚೆಟೊಳಂಡ ನವೀನ್ ಅಪ್ಪಯ್ಯ, ಚೌರಿರ ಮಂದಣ್ಣ, ಭಟ್ಟಿರ ಸುಬ್ಬಯ್ಯ, ಹಾಗೂ ಕೇಟೋಳಿರ ಅಪ್ಪಚ್ಚ ಉಪಸ್ಥಿತರಿದ್ದರು.

ಶಿಕ್ಷಕಿ ಪಾಡಿಯಮ್ಮಂಡ ಚಂದ್ರಕಲಾ ಮಹೇಶ್ ಸ್ವಾಗತಿಸಿದ ಸಭೆಯಲ್ಲಿ ಕಲ್ಯಾಟಂಡ ತನುಜ ಅತಿಥಿಗಳ ಪರಿಚಯ ಮಾಡಿದರು. ಶಾಲಾ ಚಟುವಟಿಕೆ ವರದಿಯನ್ನು ಸಾನ್ವಿಕ ಹಾಗೂ ಶಾಲಾ ವರದಿಯನ್ನು ಪ್ರಾಂಶುಪಾಲೆ ಶಾರದಾ ವಾಚಿಸಿದರು, ಉದಿಯಂಡ ಶ್ವೇತಾ ಲೀಲಾವತಿ ಹಾಗೂ ಬುಟ್ಟೋಳಂದ ಸೌಮ್ಯ ಕಾರ್ಯಕ್ರಮವನ್ನು ನಿರೂಪಿಸಿ ಬೊಳ್ಳಚೆಟ್ಟಿರ ಶೋಭ ವಂದಿಸಿದರು.

ಹಲ್ಲೆಗೈದಿದ್ದ ಇಬ್ಬರು ಆರೋಪಿಗಳ ಬಂಧನ



ಬಿ.ಎ.ದರ್ಶನ್ ರೈ ಎಸ್.ರವಿ

ಮಡಿಕೇರಿ,ಡಿ.14– ಫೇಸ್‌ಬುಕ್‌ನಲ್ಲಿ ಪರಿಚಯವಾದ ಮಹಿಳೆಯನ್ನು ನೋಡಲು ಬೆಂಗಳೂರಿನಿಂದ ಮಡಿಕೇರಿಗೆ ಬಂದಿದ್ದ ಯುವಕನೋರ್ವನಿಗೆ ಹನಿಟ್ರ್ಯಾಪ್ ಮಾಡಿದ್ದ ಇಬ್ಬರು ಆರೋಪಿಗಳನ್ನು ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಗರದ ದೇಚೂರು ಹೌಸಿಂಗ್ ಬೋರ್ಡ್ ಕಾಲೋನಿ ನಿವಾಸಿ, ಪೇಯಿಂಟ್ ಮಳಿಗೆಯಲ್ಲಿ ಕೆಲಸ ಮಾಡುವ ಬಿ.ಎ.ದರ್ಶನ್ ರೈ(25) ಹಾಗೂ ಆಟೋ ಚಾಲಕ ಎಸ್.ರವಿ (31) ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ.

ಪ್ರಕರಣದಲ್ಲಿ ಭಾಗಿಯಾಗಿರುವ ಇತರ ಆರೋಪಿಗಳ ಪತ್ತೆಗಾಗಿ ತನಿಖೆ ಮುಂದುವರೆದಿದೆ.

ಚೇರಂಬಾಣೆ ಶ್ರೀ ರಾಜರಾಜೇಶ್ವರಿ ವಿದ್ಯಾಸಂಸ್ಥೆಯ ಕ್ರೀಡಾ ದಿನಾಚರಣೆ


ಶ್ರೀ ರಾಜರಾಜೇಶ್ವರಿ ವಿದ್ಯಾಸಂಸ್ಥೆಯ ವಾರ್ಷಿಕ ಕ್ರೀಡಾ ದಿನಾಚರಣೆಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ನಾಪೋಕ್ಲು, ಡಿ.14–ಚೇರಂಬಾಣೆಯ ಶ್ರೀ ರಾಜರಾಜೇಶ್ವರಿ ವಿದ್ಯಾಸಂಸ್ಥೆಯ ವಾರ್ಷಿಕ ಕ್ರೀಡಾ ದಿನಾಚರಣೆ ಶಾಲಾ ಆಟದ ಮೈದಾನದಲ್ಲಿ ನೆರವೇರಿತು.

ಶಾಲಾ ಆಡಳಿತ ಮಂಡಳಿ ಸದಸ್ಯ ಕುಟ್ಟೆಟಿರ ಕುಂಞಪ್ಪರ ಅಧ್ಯಕ್ಷತೆಯಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಪೊನ್ನಚನ ಶ್ರೀನಿವಾಸ್ ಮಾತನಾಡಿ, ವಿದ್ಯಾರ್ಥಿಗಳಿಗೆ ಉತ್ತಮ ಕ್ರೀಡಾಂಗಣ ಒದಗಿಸಿಕೊಟ್ಟು ಕ್ರೀಡಾ ಆಸಕ್ತಿ ಬೆಳೆಸುವುದು ಎಲ್ಲರ ಕರ್ತವ್ಯವಾಗಿರುತ್ತದೆ ಎಂದರು,

ತಾತಪಂಡ ಜ್ಯೋತಿ ಸೋಮಯ್ಯ ಮಾತನಾಡಿ ಮಕ್ಕಳು ದುಶ್ಚಟಗಳಿಗೆ ಬಲಿಯಾಗದೆ ಆದಷ್ಟು ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಂಡು ಶಿಸ್ತನ್ನು ಮೈಗೂಡಿಸಿ ಹಿರಿಯರಿಗೆ ಗೌರವ ನೀಡುವ ಮನೋಭಾವನೆ ಎಲ್ಲರಲ್ಲೂ ಬೆಳೆಯಬೇಕು ಎಂದರು.

ವಿದ್ಯಾರ್ಥಿಗಳಿಂದ ನೃತ್ಯ, ಯೋಗ ಕರಾಟೆ, ಹಾಡು ಪ್ರದರ್ಶನ ನಡೆಯಿತು. ವಿದ್ಯಾರ್ಥಿಗಳಿಗೆ ಆಯೋಜಿಸಿದ ವಿವಿಧ ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸಿ ವಿಜೇತರಾದವರಿಗೆ ಮುಖ್ಯ ಅತಿಥಿಗಳಿಂದ ಬಹುಮಾನ ವಿತರಣೆ ನಡೆಯಿತು. ಕ್ರೀಡೆಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಶಾಲಾ ಆಡಳಿತ ಮಂಡಳಿಯ ಸದಸ್ಯ ಕುಟ್ಟೆಟ್ಟಿರ ಕುಂಞಪ್ಪ ಮೊಟ್ಟೆಯಂಡ ತಮ್ಮಯ್ಯ ಶಾಲಾ ವ್ಯವಸ್ಥಾಪಕ ನಾಟೋಳಂಡ ವಿಜು, ಶಾಲಾ ಮುಖ್ಯ ಶಿಕ್ಷಕ ಕುದುಪಜೆ ಕವನ್ ಕುಮಾರ್, ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ್ತಿ ತಾತಪಂಡ ಜ್ಯೋತಿ ಸೋಮಯ್ಯ ನಿವೃತ್ತ ಮುಖ್ಯ ಶಿಕ್ಷಕ ಕೆ.ಎಸ್.ರಾಮಮೂರ್ತಿ ಹಾಜರಿದ್ದರು. ಬಹುಮಾನ ವಿತರಣೆ ಕಾರ್ಯಕ್ರಮವನ್ನು ಪಿ.ಸಿ ರಾಧಿಕ ನೆರವೇರಿಸಿಕೊಟ್ಟರು.

ಕಾರ್ಯಕ್ರಮದ ನಿರೂಪಣೆಯನ್ನು ಪ್ರಾಥಮಿಕ ವಿಭಾಗದ ಮುಖ್ಯ ಶಿಕ್ಷಕಿ ಸ್ವರೂಪ್ ಕೆ.ಬಿ., ಸ್ವಾಗತ ಭಾಷಣವನ್ನು ಇಂಗ್ಲೀಷ್ ಶಿಕ್ಷಕ ಲೋಹಿತ್ ಪಿ.ಎಲ್, ವಂದನಾರ್ಪಣೆಯನ್ನು ಗಣಿತ ಶಿಕ್ಷಕಿ ರಾಜೇಶ್ವರಿ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕಿ, ಚೈತ್ರ ನೇರವಿಸಿದರು. ಕ್ರೀಡಾಕೂಟದ ತೀರ್ಪುಗಾರರಾಗಿ ಮನೋಜ್ ಕುಮಾರ್, ಸಜನಿ ಎ. ಟಿ, ಬೃಂದಾ ಕವನ್, ಸಂಧ್ಯಾ ಬಿ.ಎಸ್, ಅನಿಲ್ .ಯು.ಟಿ, ಸೀಮಾ ಗಣಪತಿ ಪಾಲ್ಗೊಂಡಿದ್ದರು

ಸಿಲಿಕಾನ್ ಚಿತಾಗಾರ ನಿರ್ಮಾಣ ಕಾಮಗಾರಿಗೆ ಶಿಲಾನ್ಯಾಸ


ಸಿಲಿಕಾನ್ ಚಿತಾಗಾರ ನಿರ್ಮಾಣ ಕಾಮಗಾರಿಗೆ ಶಾಸಕ ಡಾ. ಮಂತರ್‌ಗೌಡ ಭೂಮಿ ಪೂಜೆ ನೆರವೇರಿಸಿದರು.

ಸುಂಟಿಕೊಪ್ಪ: ಹರದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಲ್ಲಿಕಾರ್ಜುನ ಕಾಲೋನಿಯ ರುದ್ರಭೂಮಿಯಲ್ಲಿ 4.50 ಲಕ್ಷ ವೆಚ್ಚದ ಸಿಲಿಕಾನ್ ಚಿತಾಗಾರ ನಿರ್ಮಾಣ ಕಾಮಗಾರಿಗೆ ಶಾಸಕ ಡಾ. ಮಂತರ್‌ಗೌಡ ಭೂಮಿ ಪೂಜೆ ನೆರವೇರಿಸಿದರು.

ಕಾಲೋನಿ ನಿವಾಸಿಗಳಾದ ಅಬ್ಬಾಸ್, ಮಂಜುನಾಥ್, ರವಿ ಪೂರ್ವಕಾಲೋನಿ ವ್ಯಾಪ್ತಿಯಲ್ಲಿ ಶವ ಸಂಸ್ಕಾರಕ್ಕೆ ಸಾಕಷ್ಟು ಸಮಸ್ಯೆಯನ್ನು ಎದುರಿಸುತ್ತಿದ್ದು ಚಿತಾಗಾರದ ಅವಶ್ಯಕತೆಯ ಕುರಿತು ಶಾಸಕರ ಗಮನ ಸೆಳೆದಿದ್ದರು. ಇದಕ್ಕೆ ಸ್ಪಂದಿಸಿದ ಮಂತರ್ ಗೌಡ ಶಾಸಕರ ನಿಧಿಯಿಂದ ಅನುದಾನ ಒದಗಿಸಿದ್ದರು. ಈ ಸಂದರ್ಭ ಗ್ರಾಪಂ ಅಧ್ಯಕ್ಷೆ ಭೋಜಮ್ಮ, ಉಪಾಧ್ಯಕ್ಷೆ ಮುಸ್ತಾಫ, ಸದಸ್ಯರಾದ ಸಲೀಂ, ರಮೇಶ್, ಲವಕೃಷ್ಣ, ಮಾಜಿ ಸದಸ್ಯರಾದ ದೇವಪ್ಪ, ಗೌತಮ್ ಶಿವಪ್ಪ, ಸೋಮವಾರಪೇಟೆ ಕಾಂಗ್ರೆಸ್ ವಲಯಾಧ್ಯಕ್ಷ ಸತೀಶ್ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಫೈರಿಂಗ್ ರೇಂಜ್ ನಿರ್ಮಾಣಕ್ಕೆ ಹಳೇ ವಿದ್ಯಾರ್ಥಿ ಸಂಘ ನಿರ್ಧಾರ

ಮಡಿಕೇರಿ, ಡಿ.14–ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಎನ್‌ಸಿಸಿ ವಿದ್ಯಾರ್ಥಿಗಳಿಗೆ ಕಾಲೇಜಿನ ಮೈದಾನದಲ್ಲಿ ಸುಸಜ್ಜಿತ ಫೈರಿಂಗ್ ರೇಂಜನ್ನು ನಿರ್ಮಾಣ ಮಾಡಲು ಕಾಲೇಜು ಹಳೇ ವಿದ್ಯಾರ್ಥಿಗಳ ಸಂಘ ನಿರ್ಧರಿಸಿದೆ.

ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಅಧ್ಯಕ್ಷತೆಯಲ್ಲಿ ಕಾಲೇಜ್‌ನ ಸೆಮಿನಾರ್ ಹಾಲ್‌ನಲ್ಲಿ ನಡೆದ ಸಂಘದ ಸಭೆಯಲ್ಲಿ ಸಾರ್ವಜನಿಕರು, ಹಳೇ ವಿದ್ಯಾರ್ಥಿಗಳು ಹಾಗೂ ಕಾಲೇಜು ವಿದ್ಯಾರ್ಥಿಗಳಿಗಾಗಿ ಕ್ರೀಡೆ ಮತ್ತು ಮನರಂಜನಾ ಕಾರ್ಯಕ್ರಮಗಳನ್ನು ನಡೆಸಲು ನಿರ್ಧರಿಸಲಾಯಿತು. ಹಳೇ ವಿದ್ಯಾರ್ಥಿ ಸಂಘಕ್ಕೆ ನೂತನ ಕಟ್ಟಡವನ್ನು ನಿರ್ಮಿಸುವ ಕುರಿತು ಚರ್ಚಿಸಿ, ಖಾತೆಯಲ್ಲಿ ಹೆಚ್ಚು ಹಣ ಇಲ್ಲದಿರುವ ಕಾರಣ ಮುಂದಿನ ದಿನಗಳಲ್ಲಿ ದಾನಿಗಳನ್ನು ಸಂಪರ್ಕಿಸಿ, ಸೂಕ್ತ ನಿರ್ಣಯ ಕೈಗೊಳ್ಳಲು ತೀರ್ಮಾನಿಸಲಾಯಿತು.

ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಾತನಾಡಿ, ಲೆಕ್ಕಪತ್ರ ಮಂಡಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಚಂದನ್ ನಂದರಬೆಟ್ಟು ಕಳೆದ ಸಭೆ ಹಾಗೂ ಮಹಾಸಭೆಯ ವರದಿ ವಾಚಿಸಿ, ಅನುಮೋದನೆ ಪಡೆದರು.

ಸಭೆಯಲ್ಲಿ ಕಾಲೇಜಿನ ಪ್ರಾಂಶುಪಾಲ ಮೇಜರ್ ಪ್ರೊ.ರಾಘವಬಿ, ಸಂಘದ ಉಪಾಧ್ಯಕ್ಷ ಬೊಟ್ಟಂಗಡ ಗಣಪತಿ, ನಿರ್ದೇಶಕರಾದ ಪೆಬ್ಬಟ್ಟೀರ ಶೀತಲ್ ಕಾರ್ಯಪ್ಪ, ಕೆ.ಹೆಚ್.ಖುರ್ಷಿದ್ ಬಾನು, ಲೋಹಿತ್ ಮಾಗಲು, ಆದರ್ಶ್ ಅದ್ಕಲೌರ್, ಎಸ್.ಆರ್. ವತ್ಸಲ, ಬಲ್ಯದ ಚರಣ್, ಐತಿಚಂಡ ರಶ್ಮಿ ಮೇದಪ್ಪ, ಸಬ್ಬಂಡ್ರ ಜಗದೀಶ್, ಆಪಾಡಂಡ ಜಾನ್ಸಿ ಗಣಪತಿ ಉಪಸ್ಥಿತರಿದ್ದರು.

ಕುವೆಂಪು ಮಂತ್ರಮಾಂಗಲ್ಯದಡಿ ಸತಿಪತಿಗಳಾದ ಯುವಜೋಡಿ


ಮಂತ್ರ ಮಾಂಗಲ್ಯ ವಿಧಾನದಲ್ಲಿ ಮದುವೆಯಾದ ವಧುವರ ವಿವಾಹ ಸಂಹಿತೆಯನ್ನು ಪ್ರದರ್ಶಿಸಿದರು

ಕೊಳ್ಳೇಗಾಲ, ಡಿ.14–ಇದೇ ಡಿ.28 ರಾಷ್ಟ್ರಕವಿ ಕುವೆಂಪು ಜನ್ಮದಿನ ಅವರ ಆದರ್ಶದ ಹಾದಿಯಲ್ಲಿ ಸಾಗುವ ದಿಸೆಯಲ್ಲಿ ಯುವ ಜೊಡಿಯೊಂದು ಸಂಪ್ರದಾಯವನ್ನು ಬದಿಗೊತ್ತಿ ಕುವೆಂಪುರವರ ಮಂತ್ರ ಮಾಂಗಲ್ಯವನ್ನೇ ಪ್ರೇರಣೆಯಾಗಿರಿಸಿಕೊಂಡು ಪರಸ್ಪರ ಸತಿಪತಿಗಳಾದರು.

ಪಟ್ಟಣದ ಕನಕ ಸಮುದಾಯ ಭವನದಲ್ಲಿ ಭಾನುವಾರ ನಡೆದ ಸರಳ ಸಮಾರಂಭದಲ್ಲಿ ಮೂಲತಃ ಯಳಂದೂರು ತಾಲೂಕು ಗಣಿಗನೂರು ಗ್ರಾಮದವನಾಗಿ ಹಾಲಿ ಬೆಂಗಳೂರು ಕಂಪನಿಯ ಉದ್ಯೋಗಿಯಾಗಿರುವ ಎನ್. ಸೋಮಶೇಖರ್ ಮತ್ತು ಶ್ರೀರಂಗಪಟ್ಟಣ ತಾಲೂಕಿನ ಪಿ.ಹೊಸಹಳ್ಳಿ ಪಂಚಾಯತ್ ಗ್ರಂಥಾಲಯ ಇಲಾಖೆ ಉದ್ಯೋಗಿ ಹೆಚ್.ಬಿ, ಶಿಲ್ಪಾ. ಕುವೆಂಪು ಮಂತ್ರ ಮಾಂಗಲ್ಯ ವಿಧಾನದಲ್ಲಿ ಮದುವೆಯಾದರು.

ಜಿಲ್ಲೆಯ ಹಿರಿಯ ಸಾಹಿತಿ ಶಂಕನಪುರ ಮಹದೇವ ವಧುವರರಿಗೆ ಮಂತ್ರಮಾಂಗಲ್ಯದ ಪ್ರಮಾಣವಚನ ಮತ್ತು ವಿವಾಹ ಸಂಹಿತೆಯನ್ನು ಬೋಧಿಸಿದರು. ಅದಕ್ಕೂ ಮೊದಲು ಭಾರತದ ಸಂವಿಧಾನದ ಪೀಠಿಕೆಯನ್ನು ವಧು–ವರರ ಸಮೇತ ನೆರೆದಿದ್ದ ಎಲ್ಲರಿಗೂ ಬೋಧಿಸಿದರು.

ಮಾಂಗಲ್ಯ, ಅಕ್ಷತೆ, ಹೂವಿನ ದಳಗಳು ಇಷ್ಟೇ ಮದುವೆಯಲ್ಲಿ ಕಂಡು ಬಂದದ್ದು. ಹಿರಿಯರು ಮತ್ತು ಬಂಧುಮಿತ್ರರ ಹಾರೈಕೆಯಂತೆ ಕೆಲವೇ ಸಮಯದಲ್ಲಿ ಮದುವೆ ಅರ್ಥಪೂರ್ಣವಾಗಿ ನೆರವೇರಿತು. ಈ ವಿವಾಹ ಕಾರ್ಯದಲ್ಲಿ ವಧುವರರ ಕುಟುಂಬಸ್ಥರು, ಗಣಿಗನೂರು ಗ್ರಾಮ ಮತ್ತು ಪಿ.ಹೊಸಹಳ್ಳಿ ಗ್ರಾಮದ ಯಜಮಾನರು, ಸಾಹಿತಿ ಸುಂದರ್ ಕಲಿವೀರ, ವರನ ಸಹೋದರ ಚೇತನ್, ಯಜಮಾನ ರಘು, ಬಂಧುಮಿತ್ರರು ಹಾಜರಿದ್ದರು.

ಇಂದಿನಿಂದ ಮರಿಯಾಲ ಮಠದಲ್ಲಿ ಗುರು ಪಟ್ಟಾಧಿಕಾರ ರಜತಮಹೋತ್ಸವ

ಚಾಮರಾಜನಗರ, ಡಿ.14– ತಾಲೂಕಿನ ಮರಿಯಾಲ ಮುರುಘ ರಾಜೇಂದ್ರಸ್ವಾಮಿ ಮಠದಲ್ಲಿ ಡಿ.15, 16ರಂದು ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ಅವರ ಗುರು ಪಟ್ಟಾಧಿಕಾರ ರಜತಮಹೋತ್ಸವ, ನೂತನ ಬಸವದ್ವಾರ, ಪುತ್ಥಳಿಗಳ ಅನಾವರಣ ಕಾರ್ಯಕ್ರಮ, ಮುರುಘ ರಾಜೇಂದ್ರ ಸ್ವಾಮೀಜಿ ಅವರ 109ನೇ ಸಂಸ್ಮರಣೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮರಿಯಾಲ ಮುರುಘ ರಾಜೇಂದ್ರಸ್ವಾಮಿ ಮಠದ ಉಪಾಧ್ಯಕ್ಷ ಕುಮಾರ ಸ್ವಾಮೀಜಿ ತಿಳಿಸಿದರು.

140 ವರ್ಷಗಳ ಹಿಂದೆ ಉತ್ತರ ಕರ್ನಾಟಕದಿಂದ ಮರಿಯಾಲ ಗ್ರಾಮಕ್ಕೆ ಬಂದ ಮುರುಘ ರಾಜೇಂದ್ರ ಸ್ವಾಮೀಜಿ ಮಠ ಸ್ಥಾಪಿಸುವ ಮೂಲಕ ಇಲ್ಲಿಯೇ ಲಿಂಗೈಕ್ಯರಾದರು. ಇದೇ ಪರಂಪರೆಯಲ್ಲಿ ಮಹಾಂತೇಶ್ವರರು, ಸದಾಶಿವ ಸ್ವಾಮೀಜಿ ಮಠಾಧಿಪತಿಗಳಾಗಿ ಸೇವೆ ಸಲ್ಲಿಸಿದರು ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಡಿ.15ರಂದು ಬೆಳಗ್ಗೆ 7.30ಕ್ಕೆ ಲಿಂಗದೀಕ್ಷೆ, 9.30ಕ್ಕೆ ಸಾಮೂಹಿಕ ವಚನ ಪಠಣ ನಡೆಯಲಿದ್ದು, ಧಾರವಾಡ ಜಿಲ್ಲೆ ಮನಗುಂಡಿ ಗುರುಬಸವ ಮಹಾಮನೆ ಬಸವಾನಂದ ಸ್ವಾಮೀಜಿ 'ವಚನ ಚಿಂತನ' ಪ್ರವಚನ ನೀಡುವರು ಎಂದರು.

ಬೆಳಗ್ಗೆ 11ಕ್ಕೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮುರುಘ ರಾಜೇಂದ್ರ ಶ್ರೀಗಳ ಭಾವಚಿತ್ರ, ವಚನ ಸಂಪುಟ ಅದ್ದೂರಿ ಮೆರವಣಿಗೆ ನಡೆಯಲಿದೆ ಎಂದರು. ಬೆಳಗ್ಗೆ 11.30ಕ್ಕೆ ಕೃಷಿಮೇಳ, ವಸ್ತುಪ್ರದರ್ಶನ, ವಿಜ್ಞಾನ ಸಾಹಿತ್ಯ ಪ್ರದರ್ಶನಕ್ಕೆ ಹುಲ್ಲಹಳ್ಳಿ, ಕಾರಾಪುರ, ಕುಂದೂರು ಮಠದ ಸ್ವಾಮೀಜಿ ವಿದ್ಯುಕ್ತ ಚಾಲನೆ ನೀಡುವರು.

ಸಂಜೆ 4ಕ್ಕೆ ಸಂಸ್ಥೆಯ ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಂದ ವಚನ ನೃತ್ಯ ವೈಭವ ನಡೆಯಲಿದೆ. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದಿರುವ 25 ಸಾಧಕರಿಗೆ ಸನ್ಮಾನ ಕಾರ್ಯಕ್ರಮ, ಚಾಮರಾಜನಗರ ಹಾಸ್ಯ ಸಂಗಮ ಕಲಾವಿದರಿಂದ ಹಾಸ್ಯೋತ್ಸವ, ಜಾದು ಪ್ರದರ್ಶನ ಕಾರ್ಯಕ್ರಮ ನಡೆಯಲಿದೆ ಎಂದರು.

ಡಿ.16ರಂದು ಬೆಳಗ್ಗೆ 4ಕ್ಕೆ ಕರ್ತೃ ಗದ್ದುಗೆಗೆ ಪೂಜೆ, 7ಕ್ಕೆ ಷಟ್‌ಸ್ಥಲ ಧ್ವಜಾರೋಹಣ, 8.30ಕ್ಕೆ 25 ಜೊತೆ ಎತ್ತುಗಳ ಪ್ರದರ್ಶನ, ರೈತರಿಗೆ ಸಸಿ ವಿತರಣೆ, ಊಟಿಪಾಲಾಡ್ ಶಾಂತಿ ನಿಕೇತನ ಭಜನಾ ತಂಡದವರಿಂದ ಶಿವಭಜನೆ, ಬೆಳಗ್ಗೆ 9.30ಕ್ಕೆ ಮಠದ ಆವರಣದಲ್ಲಿ ನಿರ್ಮಿಸಿರುವ ನೂತನ ಮಹಾಂತ ಮಂಟಪ ಉದ್ಘಾಟನೆ ನಡೆಯಲಿದೆ ಎಂದರು.

ಬೆಳಗ್ಗೆ 10ಕ್ಕೆ ನಡೆಯುವ ಧಾರ್ಮಿಕ ಸಮಾರಂಭವನ್ನು ಬೀದರ್ ಜಿಲ್ಲೆ ಹಿರೇಮಠ ಮಹಾಸಂಸ್ಥಾನದ ಮಠದ ಬಸವಲಿಂಗ ಪಟ್ಟದೇವರು ಉದ್ಘಾಟಿಸುವರು. ಸುತ್ತೂರು ಮಠಾಧೀಶ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಮಾರಂಭದ ಸಾನಿಧ್ಯ ವಹಿಸುವರು ಎಂದರು.

ಎರಡು ದಿನಗಳ ಧಾರ್ಮಿಕ ಸಮಾರಂಭಕ್ಕೆ ಒಂದು ಲಕ್ಷ ಭಕ್ತಾದಿಗಳ ಆಗಮನ ನಿರೀಕ್ಷೆ ಹೊಂದಲಾಗಿದೆ. ಜಿಲ್ಲೆಯ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸಮಾರಂಭ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮರಿಯಾಲ ಮುರುಘ ರಾಜೇಂದ್ರ ಸ್ವಾಮೀಜಿ, ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಮಹದೇವಸ್ವಾಮಿ, ಮುಖ್ಯ ಶಿಕ್ಷಕ ಮಂಜು, ಕುಮಾರ್ ಹಾಜರಿದ್ದರು.

ಇಂದು ಬಸವೇಶ್ವರಸ್ವಾಮಿ ದೇವಾಲಯದ ಕಳಸಾರೋಹಣ


ಕಮರಹಳ್ಳಿ ಗ್ರಾಮದ ನೂತನ ಶ್ರೀ ಬಸವೇಶ್ವರಸ್ವಾಮಿ ದೇವಾಲಯ

ಬೇಗೂರು(ಗುಂಡ್ಲುಪೇಟೆ), ಡಿ.14– ಸಮೀಪದ ಕಮರಹಳ್ಳಿ ಗ್ರಾಮದಲ್ಲಿ ನೂತನ ಶ್ರೀ ಬಸವೇಶ್ವರಸ್ವಾಮಿ ದೇವಾಲಯದ ಕಳಸಾರೋಹಣ ಮತ್ತು ಪ್ರತಿಷ್ಠಾಪನೆ ಕಾರ್ಯಕ್ರಮ ಡಿ.15 ರಂದು ನಡೆಯಲಿದೆ

ದೇವಾಲಯದ ಆವರಣದಲ್ಲಿ ವಿವಿಧ ಹೋಮ ಮತ್ತು ದೇವರಿಗೆ ವಿಶೇಷ ಅಭಿಷೇಕ ಪ್ರತಿಷ್ಠಾಪನೆ ನಡೆಯಲಿದೆ ಹಾಗೂ ಬೆಳಗ್ಗೆ 10 ಗಂಟೆಗೆ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಶ್ರೀಬಸವೇಶ್ವರ ಸ್ವಾಮಿ ಉತ್ಸವ ನಡೆಯಲಿದ್ದು, ಸುಮಾರು ಹತ್ತಕ್ಕೂ ಹೆಚ್ಚು ಗ್ರಾಮಗಳಿಂದ ನಂದಿ ಕಂಬ, ವೀರಗಾಸೆ, ವಾದ್ಯ ಮೇಳಗಳ ನಡುವೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಉತ್ಸವ ನಡೆಯಲಿದೆ. ಭಕ್ತಾದಿಗಳಿಗೆ ಅನ್ನ ಸಂತರ್ಪಣೆಯನ್ನು ಸಹ ಏರ್ಪಡಿಸಲಾಗಿದೆ ಸುತ್ತಮುತ್ತಲ ಗ್ರಾಮಗಳ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ಕೃಪೆಗೆ ಪಾತ್ರರಾಗುವಂತೆ ದೇವಾಲಯದ ಆಡಳಿತ ಮಂಡಳಿ ತಿಳಿಸಿದೆ.

ಸದೃಢ ದೇಹ, ಉತ್ತಮ ಆರೋಗ್ಯಕ್ಕೆ ಜಿಮ್ ಅವಶ್ಯಕ

ಚಾಮರಾಜನಗರ: ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿ ನೂತನವಾಗಿ ಆರಂಭವಾದ ಈಗಲ್ ಫಿಟ್ನೆಸ್‌ನ್ನು ಜಿಲ್ಲಾಧಿಕಾರಿ ಶಿಲ್ಪಾನಾಗ್ ಹಾಗೂ ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀಚೆನ್ನಬಸವಾಸ್ವಾಮೀಜಿ ಉದ್ಘಾಟಿಸಿ ಶುಭ ಕೋರಿದರು.

ಬಿಪಿ, ಶುಗರ್, ಹೃದಯ ಸಮಸ್ಯೆ ಹೆಚ್ಚಾಗುತ್ತಿರುವ ದಿನಗಳಲ್ಲಿ ಸದೃಢ ದೇಹ, ಉತ್ತಮ ಆರೋಗ್ಯ ವ್ಯಾಯಾಮ ಅವಶ್ಯಕವಾಗಿದ್ದು ಅ ನಿಟ್ಟಿನಲ್ಲಿ ಮಹೇಶ್ ಅವರು ಉತ್ತಮ ವಾತಾವರಣದಲ್ಲಿ ಸುಸಜ್ಜಿತ ಜಿಮ್ ಮಾಡಿರುವುದು ಒಳ್ಳೆಯ ಕೆಲಸವಾಗಿದೆ ಇಂತಹ ಜಿಮ್‌ಗಳು ನಗರಕ್ಕೆ ಮತ್ತಷ್ಟು ಅವಶ್ಯಕತೆ ಇದೆ. ಜಿಲ್ಲಾಧಿಕಾರಿಗಳು ಶುಭ ಕೋರಿದರು.

ಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀ ಚೆನ್ನಬಸವಾ ಸ್ವಾಮೀಜಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಮಾತನಾಡಿ ಶುಭ ಕೋರಿದರು.

ಶ್ರೀಚಾಮರಾಜೇಶ್ವರ ದೇವಸ್ಥಾನ ಆರ್ಚಕ ರಾಮಕೃಷ್ಣ ಭಾರದ್ವಜ್, ಸರ್ಕಾರಿ ಅಭಿಯೋಜಕ ರಾಜೇಂದ್ರ, ಮಾಲೀಕ ಮಹೇಶ್ ಕುಮಾರ್, ಬಿಲ್ವ ಮಹೇಶ್, ರಾಜ್ಯ ಸರ್ಕಾರಿ ನೌಕರರ ಸಂಘ ಕಾರ್ಯಾಧ್ಯಕ್ಷ ಮಹಾದೇವಸ್ವಾಮಿ, ಡ್ರಾಮಾ ಮಾಸ್ಟರ್ ಶಿವಣ್ಣ, ಸಾಹಿತಿ ಕೆ.ಶ್ರೀಧರ್, ಸಿರಿ, ರಮೇಶ್ ಬಾಬು, ಆರ್. ನಾಗರಾಜು, ಆರ್.ಮಲ್ಲಿಕಾರ್ಜುನ ಇತರರು ಹಾಜರಿದ್ದರು.

ಸ್ವದೇಶಿ ಜಾಗೃತಿ ಸೈಕಲ್ ಜಾಥಾಗೆ ಅದ್ದೂರಿ ಸ್ವಾಗತ


ಸ್ವದೇಶಿ ಜಾಗೃತಿ ಸೈಕಲ್ ಜಾಥಾಗೆ ಉದ್ಯಮಿ ನಿತಿನ್ ಕುಮಾರ್, ಅದ್ದೂರಿ ಸ್ವಾಗತ ಕೋರಿ ಬರಮಾಡಿಕೊಂಡರು.

ಚಾಮರಾಜನಗರ: ಬೆಂಗಳೂರಿನಿಂದ ಚಾಮರಾಜನಗರಕ್ಕೆ ಆಗಮಿಸಿದ ಸ್ವದೇಶಿ ಜಾಗೃತಿ ಸೈಕಲ್ ಜಾಥಾಗೆ ಉದ್ಯಮಿ ನಿತಿನ್ ಕುಮಾರ್, ಮುಖ್ಯ ಶಿಕ್ಷಕ ಮಹದೇವೇಗೌಡ ಇತರರು ಅದ್ದೂರಿ ಸ್ವಾಗತ ಕೋರಿ ಬರಮಾಡಿಕೊಂಡರು.

ಶ್ರೀ ಪರಿಪೂರ್ಣ ಸನಾತನ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿರುವ ಸ್ವದೇಶಿ ಜಾಗೃತಿ ಸೈಕಲ್ ಜಾಥಾವು ಬೆಂಗಳೂರಿನಲ್ಲಿ ಚಾಲನೆ ಗೊಂಡು ಬಿಡದಿ, ರಾಮನಗರ, ಚನ್ನಪಟ್ಟಣ, ಮಂಡ್ಯ ಮೂಲಕ ಚಾಮ ರಾಜನಗರಕ್ಕೆ ಆಗಮಿಸಿದ ಜಾಥಾಗೆ ಶ್ರೀಚಾಮರಾಜೇಶ್ವರ ದೇವಸ್ಥಾನ ಮುಂಭಾಗದಲ್ಲಿ ಸ್ವಾಗತ ಕೋರಿ ಬರಮಾಡಿಕೊಳ್ಳಲಾಯಿತು.

ಬ್ರಿಗೇಡಿಯರ್ ರವಿ ಮುನಿಸ್ವಾಮಿ ಮಾತನಾಡಿ, ನಾಡಿನ ಪ್ರತಿಯೊಬ್ಬ ಯುವಕರನ್ನು ಬೆಂಗಳೂರಿನಿಂದ ಹಿಡಿದು ಅತ್ಯಂತ ದೂರದ ಗ್ರಾಮ ಗಳವರೆಗೆ– ನಾನು ಈ ಚಳವಳಿಗೆ ಸೇರುವಂತೆ ಆಹ್ವಾನಿಸುತ್ತೇನೆ. ಬನ್ನಿ, ಸ್ವದೇಶಿಯ ಆತ್ಮವನ್ನು ಪುನರುಜ್ಜೀವಗೊಳಿಸೋಣ. ನಮ್ಮ ಮಣ್ಣಿನಲ್ಲಿ ಬೇರುಬಿಟ್ಟ, ನಮ್ಮ ಕೈಗಳಿಂದ ರೂಪುಗೊಂಡ, ನಮ್ಮ ದೃಷ್ಟಿಯಿಂದ ಮುನ್ನಡೆಯುವ ಉದ್ಯಮಗಳನ್ನು, ಸಂಸ್ಥೆಗಳನ್ನು, ರಫ್ತು ಸಾಮ್ರಾಜ್ಯಗಳನ್ನು ನಿರ್ಮಿಸೋಣ ಎಂದರು.

ಇಂದಿನ ಭಾರತದಲ್ಲಿನ ಸ್ವದೇಶಿ ಚಿಂತನೆ ಈ ಪರಂಪರೆಯನ್ನು ಮುಂದುವರಿಸುತ್ತದೆ. ಭಾರತೀಯ ಕಲೆಗಾರರು, ತಯಾರಕರು, ರೈತರು, ಸಣ್ಣ ಪಟ್ಟಣಗಳ ಮತ್ತು ಗ್ರಾಮೀಣ ಉದ್ಯಮಿಗಳು– ಇವರನ್ನು ಬೆಂಬಲಿಸುವುದರಿಂದ ಜೀವನೋಪಾಯವನ್ನು ಬಲಪಡಿಸುವುದು, ಸ್ಥಳೀಯ ಆರ್ಥಿಕತೆಯನ್ನು ಗಟ್ಟಿಪಡಿಸುವುದು ಮತ್ತು ಆರ್ಥಿಕ ಸ್ವಾವಲಂಬನೆಯನ್ನು ವಿಸ್ತರಿಸುವುದು ಸಾಧ್ಯವಾಗುತ್ತದೆ.

ಆರ್ಥಿಕ ಶಕ್ತಿ ಎಂದರೆ ಪ್ರತಿರೋಧಕ ಸಾಮರ್ಥ್ಯ ಹೊರಗಿನ ಆಘಾತಗಳಿಂದ ರಕ್ಷಿಸಿಕೊಳ್ಳುವ ಸಾಮರ್ಥ್ಯ, ದೇಶೀಯ ಜೀವನೋಪಾಯಗಳನ್ನು ಬಲಪಡಿಸುವುದು, ಮತ್ತು ಬೆಳವಣಿಗೆಯನ್ನು ನಗರ ಕೇಂದ್ರಗಳಷ್ಟೇ ಅಲ್ಲ, ಗ್ರಾಮೀಣ ಭಾಗಗಳಿಗೂ ತಲುಪಿಸುವುದು ಅಗತ್ಯವಾಗಿದೆ ಎಂದರು.

ಅಂಬೇಡ್ಕರ್ ಸೇವಾ ಸಮಿತಿ ಟ್ರಸ್ಟ್‌ನಿಂದ ಹೊದಿಕೆ, ಸ್ವೆಟರ್ ವಿತರಣೆ


ಬಡ ಕುಟುಂಬಕ್ಕೆ ಚಾಪೆ, ಬೆಡ್ ಶೀಟು, ಸ್ವೆಟರ್ ಅನ್ನು ಅಂಬೇಡ್ಕರ್ ಸೇವಾ ಸಮಿತಿ ವಿತರಿಸಿತು.

ಚಾಮರಾಜನಗರ, ಡಿ.14–ರಾಮಾ ಬಾಯಿ ಡಾ.ಬಿ.ಆರ್.ಅಂಬೇಡ್ಕರ್ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ನಗರದ 14 ನೇ ವಾರ್ಡ್‌ನಲ್ಲಿ ಬಡ ಕುಟುಂಬಕ್ಕೆ ಚಾಪೆ, ಬೆಡ್ ಶೀಟು, ಸ್ವೆಟರ್ ವಿತರಿಸಲಾಯಿತು.

ಟ್ರಸ್ಟ್ ಅಧ್ಯಕ್ಷರಾದ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಂಯೋಜಕ ಸಿ.ಎಂ. ಶಿವಣ್ಣ ಮಾತನಾಡಿ, ನಗರದ 14ನೇ ವಾರ್ಡ್‌ನಲ್ಲಿ ಬಡ ಕುಟುಂಬವೊಂದು ಚಾಪೆ, ಹೊದಿಕೆ ಇಲ್ಲದೆ ಮೈ ಕೊರೆಯುವ ಚಳಿಯಲ್ಲಿದ್ದದ್ದ ಮನಗಂಡು ನಮ್ಮ ಟ್ರಸ್ಟ್ ವತಿಯಿಂದ ಅವರಿಗೆ ಬೆಚ್ಚನೆಯ ಹೊದಿಕೆ, ಚಾಪೆ, ಸ್ವೆಟರ್ ವಿತರಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಆಟೋ ಉಮೇಶ್, ಮಹಾದೇವಸ್ವಾಮಿ, ಭೈರ, ಮಹದೇವ ಸ್ವಾಮಿ, ನಾಗೇಶ್ ಇತರರು ಹಾಜರಿದ್ದರು.

ಗೋವಿಂದ ಶೆಟ್ಟರು ನಿಧನ



ಚಿಕ್ಕಾಟಿ, ಡಿ.14– ಗ್ರಾಮದ ಕುಂಬಾರ ಬೀದಿಯ ನಿವಾಸಿ ಗೋವಿಂದ ಶೆಟ್ಟರು (79) ಇಂದು ಸಂಜೆ ಅವರ ಸ್ವಗ್ರಾಮದಲ್ಲಿ ನಿಧನರಾದರು.

ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಅಪಾರ ಬಂಧುಗಳನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು ಸೋಮವಾರ ಸ್ವ ಗ್ರಾಮದಲ್ಲಿ ನಡೆಯಲಿದೆ.

ಪೃಥ್ವಿರಾಜ್ ಹಾಲಹಳ್ಳಿಗೆ ರಾಜ್ಯಮಟ್ಟದ ಪ್ರಶಸ್ತಿ



ಬೇಗೂರು, ಡಿ.14– ರಾಜ್ಯ ವೈಜ್ಞಾನಿಕ ಪರಿಷತ್ತು ನೀಡುವ ರಾಜ್ಯ ಮಟ್ಟದ ಹೆಚ್‌ಎನ್ (ಡಾ. ಎಚ್ ನರಸಿಂಹಯ್ಯ) ಪ್ರಶಸ್ತಿಗೆ ಪೃಥ್ವಿರಾಜ್ ಹಾಲಹಳ್ಳಿ ಭಾಜನರಾಗಿದ್ದಾರೆ.

ಹುಲಿಕಲ್ ನಟರಾಜ್ ರವರ ನೇತೃತ್ವದ ಈ ಪರಿಷತ್ತು ರಾಜ್ಯದ ಹಲವಾರು ಕಡೆ ವಿವಿಧ ಕಾರ್ಯಕ್ರಮಗಳನ್ನು ನೀಡಿ ವಿಜ್ಞಾನಕ್ಕೆ ಸಂಬಂಧಿಸಿದ ವಿಚಾರಗಳನ್ನು ಸಾರುತ್ತಿವೆ. ಪೃಥ್ವಿರಾಜ್ ಬೇಗೂರು ಸಮೀಪದ ಹಾಲಹಳ್ಳಿ ಗ್ರಾಮದವರು. ಸುಮಾರು 15 ವರ್ಷಗಳ ಕಾಲ ಮೈಸೂರಿನ ಸರಸ್ವತಿಪುರಂ ಮಹಿಳಾ ಕಾಲೇಜು, ಮರಿಮಲ್ಲಪ್ಪ ಕಾಲೇಜು. ನಂಜನಗೂಡು ಕಾಲೇಜುನಲ್ಲಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಗುಂಡ್ಲುಪೇಟೆಯ ಸಮಾಜ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತಿರುವ ಇವರಿಗೆ ಡಿ.27ರಂದು ಯಾದಗಿರಿಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಜಿಲ್ಲಾ ಅಧ್ಯಕ್ಷ ಎಮ್ ಕಿರಣ್‌ರಾಜ್ ತಿಳಿಸಿದ್ದಾರೆ.

3ನೇ ಟಿ20: ಭಾರತಕ್ಕೆ ಭರ್ಜರಿ ಜಯ



ಧರ್ಮಶಾಲಾ, ಡಿ.14– ತಂಡದ ಸಾಂಘಿಕ ಪ್ರದರ್ಶನದ ನೆರವಿನಿಂದ ಭಾರತ ದಕ್ಷಿಣ ಆಫ್ರಿಕಾ ವಿರುದ್ಧ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಇದರೊಂದಿಗೆ 5 ಪಂದ್ಯಗಳ ಟಿ20 ಸರಣಿಯಲ್ಲಿ ಭಾರತ 2–1ರಿಂದ ಮುನ್ನಡೆ ಸಾಧಿಸಿದೆ.

ಇಲ್ಲಿನ ಹಿಮಾಚಲ ಪ್ರದೇಶ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಟೂರ್ನಿಯ 3ನೇ ಟಿ20 ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ 20 ಓವರ್‌ಗಳಲ್ಲಿ 117 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ನಾಯಕ ಐಡನ್ ಮಾರ್ಕ‌ಮ್ 46 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸರ್ ಒಳಗೊಂಡ 61, ಡೊನೊವನ್ ಫೆರೀರಾ 20, ನೋರ್ಟ್ಜೆ 12ರನ್ ಗಳಿಸಿದ್ದು ಬಿಟ್ಟರೇ ಉಳಿದವರು ನಿರೀಕ್ಷಿತ ಪ್ರದರ್ಶನ ನೀಡಲಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಭಾರತದ ಪರ ಅರ್ಶದೀಪ್ ಸಿಂಗ್, ಹರ್ಷಿತ್ ರಾಣಾ, ವರುಣ್ ಚಕ್ರವರ್ತಿ ಹಾಗೂ ಕುಲದೀಪ್ ಯಾದವ್ ತಲಾ 2, ಹಾರ್ದಿಕ್ ಪಾಂಡ್ಯ, ಶಿವಂ ದುಬೆ ತಲಾ ಒಂದೊಂಡು ವಿಕೆಟ್ ಪಡೆದರು.

118 ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ಭಾರತಕ್ಕೆ ಆರಂಭಿಕರಾದ ಅಭಿಷೇಕ್ ಶರ್ಮಾ ಹಾಗೂ ಶುಭ್‌ಮನ್ ಗಿಲ್ ಮೊದಲ ವಿಕೆಟ್‌ಗೆ 60 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ ತಲಾ 3 ಸಿಕ್ಸರ್, ಬೌಂಡರಿ ಒಳಗೊಂಡ 35 ರನ್ ಗಳಿಸಿದ್ದ ಅಭಿಷೇಕ್ ಶರ್ಮಾ ವಿಕೆಟ್ ಒಪ್ಪಿಸಿದರು. ಬಳಿಕ 28 ರನ್ ಗಳಿಸಿ ಶುಭ್‌ಮನ್ ಗಿಲ್ ಔಟಾದರು. ಉಳಿದಂತೆ ತಂಡದ ಪರ ತಿಲಕ್ ವರ್ಮಾ 25, ಶಿವಂ ದುಬೆ 10 ರನ್ ಗಳಿಸಿ ಅಜೇಯರಾಗಿ ಉಳಿದರೇ, ನಾಯಕ ಸೂರ್ಯ ಕುಮಾರ್ ಯಾದವ್ 12 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ದಕ್ಷಿಣ ಆಫ್ರಿಕಾ ಪರ ಲುಂಗಿ ಎನ್‌ಗಿಡಿ, ಮಾರ್ಕೋ ಯಾನ್ಸನ್ ಹಾಗೂ ಕಾರ್ಬಿನ್ ಬಾಷ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಅರ್ಷದೀಪ್ ಸಿಂಗ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಒಂದೇ ವೇದಿಕೆಯಲ್ಲಿ ಮೆಸ್ಸಿ, ಸಚಿನ್, ಚೆಟ್ರಿ

ಚಾರಿತ್ರಿಕ ಘಟನೆಗೆ ಸಾಕ್ಷಿಯಾದ ವಾಂಖೆಡೆ ಕ್ರೀಡಾಂಗಣ



ಮುಂಬೈ: ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ಮತ್ತೊಂದು ಚಾರಿತ್ರಿಕ ಘಟನೆಗೆ ಸಾಕ್ಷಿಯಾಯಿತು. ವಿಶ್ವ ಫುಟ್ ಬಾಲ್ ದಿಗ್ಗಜ ಲಿಯೋನಲ್ ಮೆಸ್ಸಿ, ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಹಾಗೂ ಭಾರತದ ಫುಟ್ ಬಾಲ್ ದಂತಕಥೆ ಸುನಿಲ್ ಚೆಟ್ರಿ ಜೊತೆಗೆ ಕಾಣಿಸಿಕೊಳ್ಳುವ ಮೂಲಕ ಅಭಿಮಾನಿಗಳಿಗೆ ಹಬ್ಬವನ್ನುಂಟು ಮಾಡಿದರು.

ಕ್ರೀಡಾಂಗಣದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಅಭಿಮಾನಿಗಳು ಮೆಸ್ಸಿ, ಮೆಸ್ಸಿ ಎಂದು ಘೋಷಣೆ ಕೂಗಿ ಸಂಭ್ರಮಿಸಿದರು. ಸಂಜೆ ಮೆಸ್ಸಿ ಅವರ ಸಹ ಆಟಗಾರರಾದ ಲೂಯಿಸ್ ಸೂರೇಝ್ ಮತ್ತು ರಾಡ್ರಿಗೊ ಡಿ ಪಾಲ್ ಹಾಗೂ ಸಚಿನ್ ಬಂದ್ ಸೇರುತ್ತಿದ್ದಂತೆಯೇ, ಸಚಿನ್.. ಸಚಿನ್... ಘೋಷಣೆ ಮುಗಿಲು ಮುಟ್ಟಿತು.

'ಗೋಟ್ ಇಂಡಿಯಾ ಟೂರ್–2025' ಕಾರ್ಯಕ್ರಮ ಇಂತಹದ್ದೊಂದು ಐತಿಹಾಸಿಕ ಕ್ಷಣಗಳಿಗೆ ಸಾಕ್ಷಿಯಾಯಿತು. ಮೆಸ್ಸಿಯೊಂದಿಗೆ ವೇದಿಕೆ ಹಂಚಿಕೊಂಡ ಸಚಿನ್ ತೆಂಡೂಲ್ಕರ್, ಲಿಯೊನೆಲ್ ಮೆಸ್ಸಿ ಅವರನ್ನು ವರ್ಣಿಸಲು ಪದಗಳು ಸಾಲುವುದಿಲ್ಲ ಅವರ ಬದ್ಧತೆ, ಶ್ರದ್ಧೆ, ನಿರಂತರ ಪ್ರಯತ್ನಗಳು ಅನುಕರಣೀಯ ಎಂದಿದ್ದಾರೆ.

ಇದೇ ಸಂದರ್ಭದಲ್ಲಿ ಸಚಿನ್ ತೆಂಡೂಲ್ಕರ್ ಅವರು ತಮ್ಮ ಜೆರ್ಸಿಯನ್ನು ಅರ್ಜೆಂಟಿನಾದ ಲಿಯೋನಲ್ ಮೆಸ್ಸಿ ಅವರಿಗೆ ಉಡುಗೊರೆಯಾಗಿ ನೀಡಿದ್ದಾರೆ. ಬಳಿಕ ಮೆಸ್ಸಿ ಅವರು ಸುನಿಲ್ ಚೆಟ್ರಿ ಅವರೊಂದಿಗೆ ಬಹಳ ಸಮಯದವರೆಗೂ ಮಾತುಕತೆ ನಡೆಸಿದ್ದಾರೆ. ತಮ್ಮ ಪೋಷಾಕನ್ನು ಗಿಫ್ಟ್ ಆಗಿ ನೀಡಿದ್ದಾರೆ. ಐಐಎಫ್ ಎಫ್ ಅಧ್ಯಕ್ಷ ಪ್ರಫುಲ್ ಪಟೇಲ್, ಬಾಲಿವುಡ್ ಸ್ಟಾರ್ ಗಳಾದ ಅಜಯ್ ದೇವಗನ್, ಟೈಗರ್ ಶ್ರಾಫ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ವಾಟರ್ ಪ್ರೂಫಿಂಗ್, ಪೇಂಟಿಂಗ್ ಮತ್ತು ಬಿಲ್ಡಿಂಗ್ ಕೆಲಸಕ್ಕಾಗಿ
ಸಂಪರ್ಕಿಸಿ.
6363594339

ತೇಜಸ್ವಿನಿ ಟೂರಿಸ್ಟ್
31–12–2025, 2 ದಿನ ಕೋಟಿಲಿಂಗ, ಕೈವಾರ, ಈಶಾ ಟೆಂಪಲ್ ಇತ್ಯಾದಿ 13 ಸ್ಥಳಗಳು. 20–1–2026, 8 ದಿನ ತಮಿಳುನಾಡು, ರಾಮೇಶ್ವರಂ, ಕನ್ಯಾಕುಮಾರಿ, ಅನಂತಪದ್ಮನಾಭ ಇತ್ಯಾದಿ ಸ್ಥಳ. 23–2–2026 ಕಾಶಿ, ಅಯೋಧ್ಯೆ, ಪ್ರಯಾಗ್‌ರಾಜ್, ಗಯಾ, ರೈಲಿನಲ್ಲಿ, ವಿಮಾನದಲ್ಲಿ. 24–3–2026, 4 ಜ್ಯೋತಿರ್ಲಿಂಗ ಮಧ್ಯಪ್ರದೇಶ, ಗುಜರಾತ್, ರಾಜಸ್ಥಾನ, ಒಟ್ಟು 18 ಸ್ಥಳಗಳು. ವಿವರಗಳಿಗೆ ಸಂಪರ್ಕಿಸಿ:
Mob: 9379792644

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

SITES FOR SALE
MUDA Approved East Facing 40x62 Two Adjacent Sites for sale @ Bhugathahalli, Ready to Construct.
Contact
7411118490 / 9845114050

House For Sale
1500 Sq. ft, Corner House, North Facing, 2 BHK in Kandaya Nagara I Stage, Srirampura II Stage, Mysore.
8105079105, 9972669002

Nypunya School of Excellence MYSURU — DATTAGALLI and R.T.NAGAR
ಬೇಕಾಗಿದ್ದಾರೆ
Security Guard : ಶಾಲೆಯಲ್ಲಿ ಕೆಲಸ ಮಾಡಲು ಪುರುಷ/ಮಹಿಳಾ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. (ಕೆಲಸದ ಅವಧಿ 8 ಗಂಟೆಗಳು)
72046 32092
ಆಸಕ್ತರು ಒಂದು ವಾರದೊಳಗೆ ಸಂಪರ್ಕಿಸಿ.

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

House for Rent
16, 2 BHK house for rent available for PG & private hostels. Including bunkers available.
9980685348, 8970326846

RAI ESTATES — RERA APPROVED, MUDA APPROVED, E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

COMMERCIAL SPACE FOR RENT
SPACE FOR RENT ATTACHED TO RING ROAD OPPOSITE TO APMC, MYSORE
Mob : 9886386698

ಹೊಸ ಲೇಔಟ್ಸ್ ಆರಂಭವಾಗಿದೆ
- T.N ಪುರ ರಸ್ತೆ – ಸಪ್ತಮಾತೃಕ, ಪ್ರಶಾಂತ ಛಾಯ ಹೌಸಿಂಗ್ ಪ್ರಾಜೆಕ್ಟ್ ಪಕ್ಕ 14–25 ಲಕ್ಷ
- ಬನ್ನೂರು ರಸ್ತೆ – ಮಾನಸಿ ನಗರ ಹಿಂಬಾಗ ವಿದ್ಯಾವಿಕಾಸ್ ಕಾಲೇಜ್ ಎದುರು 25–49 ಲಕ್ಷ
- ಬೋಗಾದಿ ರಸ್ತೆ – ಹೊಸ ಕ್ರಿಕೆಟ್ ಸ್ಟೇಡಿಯಂ ಜಟ್ಟಿ ಹುಂಡಿ ಹಿಂಬಾಗ 29 ಲಕ್ಷ
- 30X50 ಮರಟಿಕ್ಯಾತನಹಳ್ಳಿ 42 ಲಕ್ಷ

Brokers Excuse
81230 75038

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಹಾಗೂ ಸೋಲಾರ್ ಸರ್ವೀಸ್
Mob: 9964733988

Nypunya School of Excellence MYSURU — DATTAGALLI and R.T.NAGAR
ಬೇಕಾಗಿದ್ದಾರೆ
Drivers : ಶಾಲಾ ವಾಹನ ಚಲಾಯಿಸಲು ಮೈಸೂರು ನಗರ ವ್ಯಾಪ್ತಿಯಲ್ಲಿ ವಾಸವಿರುವ ಹೆವಿ ಲೈಸೆನ್ಸ್ ಉಳ್ಳ ಡ್ರೈವರ್ ಬೇಕಾಗಿದ್ದಾರೆ.
70228 49856
ಆಸಕ್ತರು ಒಂದು ವಾರದೊಳಗೆ ಸಂಪರ್ಕಿಸಿ.

ಶ್ರೀ ಲಕ್ಷ್ಮೀದೇವಿ ಸರ್ವೀಸ್
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

SITE FOR SALE
Hunsur Main Road After YELAWALA (41x51) (2085) North-West Corner
99865 42211

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಾದ್ಯಂತ ಕಂಪನಿಗಳಿಗೆ, ಆಫೀಸ್‌ಗಳಿಗೆ & ಶೋರೂಂಗಳಿಗೆ ಯುವಕರು, ಯುವತಿಯರು ಬೇಕಾಗಿದ್ದಾರೆ. 7th, 10th, PUC, Any Degree ವಸತಿ, ಊಟ ಉಚಿತವಾಗಿದೆ. ಸಂಬಳ + ಓಟಿ. 20,000 ದಿಂದ 45,000. ಸಂಪರ್ಕಿಸಿ:
9916744622, 9916788422

100% ಉದ್ಯೋಗವಕಾಶ
ವರ್ಕ್ ಫ್ರಂ ಹೋಂ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಹಾಗೂ ಪುರುಷರಿಗೆ. ವಯಸ್ಸು: 18 ರಿಂದ 65 ರವರೆಗೆ. ಆಫೀಸ್‌ಗಳಿಗೆ 4th, 7th, 10th, ITI, Any Degree ಪಾಸ್ / ಫೇಲ್ ಆದ ಯುವಕ, ಯುವತಿಯರಿಗೆ ಹಾಗೂ ಇಎಸ್‌ಐ, ಪಿಎಫ್‌ನೊಂದಿಗೆ ಮೊದಲ ಕರೆ ಮಾಡಿ 22,000 – 45,000.
6362024878, 9019593297

ನೇರ ಆಯ್ಕೆ ಉದ್ಯೋಗವಕಾಶ
ವರ್ಕ್ ಫ್ರಮ್ ಹೋಂ ಮನೆಯಿಂದಲೇ ಕೆಲಸ ಪಾರ್ಟ್ ಟೈಮ್ & ಫುಲ್ ಟೈಮ್ ವರ್ಕ್‌ಗಳಿಗೆ ವಿದ್ಯಾರ್ಥಿಗಳಿಗೆ + ಮಹಿಳೆಯರಿಗೆ ಹಾಗೂ ವಯಸ್ಕರಿಗೆ ಮೊದಲ ಆದ್ಯತೆ. ಕೊರಿಯರ್ ಸೌಲಭ್ಯವಿದೆ. 7th, 10th, PUC, Any Degree ಪಾಸ್, ಫೇಲ್ ಆದವರು. 20,000 ದಿಂದ 25,000. ಸಂಪರ್ಕಿಸಿ:
Mob: 8095133188

WANTED
FIELD OFFICER
For a Security Agency (Mysore). Salary: 16,000/- to 18,000/- + Petrol. Education: Above PUC. Experience: Min. 1 year. *Contact:*
Mob: 97416 16826

FOR RENT
Ist Floor shop for rent suitable for Auditor Office, Tailor, Office etc. 1059, Near Kaveri Circle Main Road, Hebbal, Mysore.
Mob: 9886609990

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರಿವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ: 12000 (24 CT)
Mob: 9108146123

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

WANTED
Female candidates working in **Front Office**, any Degree, age 20 to 35 years. Working place: **Vijayanagar, Mysore.**
Mob: 89048 12796

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಖರೀದಿಗೆ ಜಮೀನು ಬೇಕಾಗಿದೆ
ಮೈಸೂರಿನಿಂದ 15 ಕಿ.ಮೀ. ಅಂತರದಲ್ಲಿ 1–2 ಎಕರೆ ಜಮೀನು ಬೇಕಾಗಿದೆ. ಮಧ್ಯವರ್ತಿಗಳು ಕ್ಷಮಿಸಿ.
Mob: 9538735551

WANTED
Telecallers and Marketing Executive
99865 42211

ಬೇಕಾಗಿದ್ದಾರೆ
ಪುರುಷರು ಮಾತ್ರ ಬೇಕಾಗಿದ್ದಾರೆ. ಹೆಲ್ಪರ್ ಕೆಲಸಕ್ಕೆ ಯಾವುದೇ ವಿದ್ಯಾಭ್ಯಾಸ ಬೇಕಿಲ್ಲ. ಸಂಬಳ 17,500 + ESI + PF. ವಯಸ್ಸು: 18 ರಿಂದ 45. 8 Hrs Duty, 3 Shifts. ಹೆಚ್ಚಿನ ಮಾಹಿತಿಗಾಗಿ ಸ್ಥಳಕ್ಕೆ ಭೇಟಿ ನೀಡಿ. ಸ್ಥಳ: CIPET College ಹತ್ತಿರ, ರಿಂಗ್ ರೋಡ್, ಮೇಟಗಳ್ಳಿ, ಮೈಸೂರು.
Mob: 99868 74574

FOR SALE — PRAKRUTHI PROPERTIES
- 20x30 Old Houses @ Kuvempunagar, RK Nagar
- 30x40 Duplex House @ Dattagalli
- 40x120 Site@ 80 Feet Road in Dattagalli
- *33x40 South West Corner Site @ Kabini Layout, Srirampura.*
- 40x60@ JP Ngr, Shardha Lyt
- 35x60 Commercial, 20x30/40x60 /50x80 Sites @ Srirampura
- 20x30 Properties @ VijayaNagar

PRAKRUTHI PROPERTIES
95386 90359, 90359 90359

FOR SALE — PRAKRUTHI PROPERTIES
30x40 Sites Near RT Nagar BSNL Layout @ Just 22 Lakhs
20x30, 30x40 MUDA Approved Sites Near Rainbow School Bogadi
30x40|30x50 MUDA Sites KHB Attach, HD Kote Road.
2 & 3 BHK Apartments @ Ramakrishna Ngr
Commercial Properties Also Available
PRAKRUTHI PROPERTIES
95386 90359, 90359 90359

URGENT ACCOUNTANT REQUIRED
For working In Sapthagiri Enterprises (Kuvempunagara). Age Below 35 years. Salary - 25,000/-. Tally & 5 years experience compulsory. For stock in & out billing.
Mob: 9880151303
NAME - BHARATH

ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ, ಹೂಟಗಳ್ಳಿ, ಕೂರ್ಗಳ್ಳಿ ಕೈಗಾರಿಕಾ ಪ್ರದೇಶಗಳಿಗೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: Diploma, Mech. ITI , 8th To 2nd PUC ವರೆಗೆ. ಊಟ, ವಸತಿ, ESI, PF ಸೌಲಭ್ಯ ಸಂಬಳ 13,000 ರಿಂದ 20,000 ಇರುತ್ತದೆ.
8951869646 / 9902645646

ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
Washing Machine, Refrigerator, Dishwasher, Microwave oven, TV installation ಹಾಗೂ service ಮಾಡಲು ಎಕ್ಸ್‌ಪೀರಿಯನ್ಸ್ ಉಳ್ಳ ಟೆಕ್ನಿಷಿಯನ್‌ಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ. ವಯಸ್ಸು below 35 years.
Mob: 9880151303

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಕೂಡಲೇ ಬೇಕಾಗಿದ್ದಾರೆ
1) ಗಾಂಧಿವನ ಹತ್ತಿರ ಅಪಾರ್ಟ್‌ಮೆಂಟ್‌ಗೆ ಅನುಭವ ಇರುವ 45 ವರ್ಷ ಒಳಗಿನ ಸೆಕ್ಯೂರಿಟಿ ಗಾರ್ಡ್ಸ್‌ಗಳು ಬೇಕಾಗಿದ್ದಾರೆ.
2) ಟಿ ನರಸೀಪುರ ರೋಡ್, ಕೀಳನಪುರ ಹೋಟಲ್‌ಗೆ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ.
3) ಸಾತಗಳ್ಳಿ ಹತ್ತಿರ ಕಾಲೇಜ್‌ಗೆ ಹೌಸ್‌ಕೀಪಿಂಗ್ ಮಹಿಳೆಯರು ಬೇಕಾಗಿದ್ದಾರೆ.
8073722464

PGಯಲ್ಲಿ ಅಡುಗೆ ಸಹಾಯಕಿ ಹಾಗೂ ವಾರ್ಡನ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ.
ಕಡ್ಡಾಯವಾಗಿ PGಯಲ್ಲೇ ಉಳಿಯಬೇಕು. ಊಟ, ವಸತಿ ಇರುತ್ತದೆ,
9900944982

SITE FOR SALE
73 lakh, 30x30, NF At Heart of the City, 2km from Palace Gated Community, Free lifetime amenities (Swimming pool, Club house, etc.) KNS Ethos, Oaty Road. Opposite JSS College.
7760358706 / 8747042341

ಬಾಡಿಗೆಗೆ
ಬ್ರಾಯ್ಲರ್ ಕೋಳಿ ಶೆಡ್ ಬಾಡಿಗೆಗೆ ದೊರೆಯುತ್ತದೆ. ಕಳಲವಾಡಿ, ಮೈಸೂರು, ಸಂಪರ್ಕಿಸಿ :
9880363856

ಟಿ. ನರಸೀಪುರದಲ್ಲಿ ಮನೆ ಮಾರಾಟಕ್ಕಿದೆ
ವಿವೇಕಾನಂದನಗರ, 9ನೇ ವಾರ್ಡ್‌ನಲ್ಲಿ, 53x36 ಅಳತೆಯ ಸೈಟ್‌ನಲ್ಲಿ ನಿರ್ಮಿಸಿರುವ ಗ್ರೌಂಡ್‌ಫ್ಲೋರ್ 12 ಚದರ, ಫಸ್ಟ್ ಫ್ಲೋರ್ 12 ಚದರ ಮನೆ ಮಾರಾಟಕ್ಕಿದೆ. ಬೆಲೆ 80 ಲಕ್ಷ, ಸಂಪರ್ಕಿಸಿ
9686939479 (ಮಹೇಶ್)

ಬೇಕಾಗಿದ್ದಾರೆ
ಕೊರಿಯರ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಲು Part time ಹಾಗೂ Full time ಮತ್ತು ಡೆಲಿವರಿ ಬಾಯ್ಸ್ ಆಗಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. (ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು) ಸಮಯ : ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ಸಂಪರ್ಕಿಸಿ
9449871790

ಬೇಕಾಗಿದ್ದಾರೆ
ಮಂಗಳೂರು ಶೈಲಿ ಅಡುಗೆ ಮಾಡುವ (ಫಿಷ್) ಕುಕ್, ಇಂಡಿಯನ್, ಚೈನೀಸ್, ತಂದೂರಿ, ಕ್ಯಾಪ್ಟನ್, ಆಲ್‌ರೌಂಡರ್ ಹಾಗೂ ವೈಟರ್‌ಗಳು ಬೇಕಾಗಿದ್ದಾರೆ. ಕುವೆಂಪುನಗರ, ಮೈಸೂರು
9900282914

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು, ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ, ಒಂದು ಫೋನಿನ ಕರೆ ನಿಮ್ಮ ಬದುಕನ್ನೇ ಬದಲಾಯಿಸಬಹುದು.
9448229184, 7899625268

SITE FOR SALE
SITE NO.:3
SHIVASHAKTHI LAYOUT
SOUTH & NORTH-50 FEET, EAST & WEST-30 FEET
Opp. to Srinagara Railway Gate
For Details Contact
80959 77241

WANTED
Computer Operator, Male or Female Graduates for Akshaya Aahara Foundation, Contact:
9148987375 / 7899277001

ಬೇಕಾಗಿದ್ದಾರೆ
ಇನ್ಫೋಸಿಸ್ ಹತ್ತಿರ ಇರುವ ಒಂದು ಕಂಪನಿ ಗೆ Army / BSF / Para Military / CISF ನ 55 ವರ್ಷದೊಳಗಿನ ಮಾಜಿ ಯೋಧರು ಸೆಕ್ಯೂರಿಟಿ ಸೂಪರ್‌ವೈಸರ್ ಕೆಲಸಕ್ಕಾಗಿ ತುರ್ತಾಗಿ ಬೇಕಾಗಿದ್ದಾರೆ. 8:Hrs ಡ್ಯೂಟಿ. 26 ದಿನಕ್ಕೆ 25 ಸಾವಿರ ಸಂಬಳ ದೊರೆಯುತ್ತದೆ. ಆಸಕ್ತರು ಸಂಪರ್ಕಿಸಿ.
99000 66284

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಷೋರೂಮ್ ಹಾಗೂ ಬೈಕ್ ಷೋರೂಮ್‌ಗಳಿಗೆ, CASHIER, RECEPTIONIST, HR, ADMIN, ACCOUNT, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ, (18k -38k), SSLC, PUC, DEGREE
6366718368 / 9739121355

SPACE FOR RENT
2520 SqFt Commercial Showroom Space for Rent Opp. to Dominos Pizza In J.P. NAGAR DOUBLE ROAD, MYSORE
Call: 9845111662

House for Lease
New build 30x40 duplex house with lift facility, borewell and office space on ground floor. Location: Vijayanagar 3rd Stage.
Call: 9591319191

ಬೇಕಾಗಿದ್ದಾರೆ
ಮೈಸೂರಿನ KRS ರಸ್ತೆ ಜೆ.ಕೆ. ಟೈರ್ ಹತ್ತಿರ, ಕೆಮಿಕಲ್ಸ್ ಕಾರ್ಖಾನೆಗೆ ಜನರಲ್ ಶಿಫ್ಟ್ ಪುರುಷ ಹೌಸ್‌ಕೀಪಿಂಗ್ ಕೆಲಸ ಮಾಡಲು ಬೇಕಾಗಿದ್ದಾರೆ. ವೇತನ 14,500/–ರೂ ಹಾಗೂ ಹೆಚ್.ಡಿ.ಕೋಟೆ ರಸ್ತೆ ಜಯಪುರ ಇಲ್ಲಿನ ಶಾಲೆಗೆ ಬೆಳಗ್ಗೆ 8 ರಿಂದ 5 ರವರೆಗೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ವೇತನ 10,000/– ಸಂಪರ್ಕಿಸಿ
9731976148

OLD AGE HOME
ನಮ್ಮಲ್ಲಿ ಎಲ್ಲಾ ತರಹದ ಹಿರಿಯ ನಾಗರಿಕರನ್ನು ಅಥವಾ ವೃದ್ಧರನ್ನು ಮನೆಯ ವಾತಾವರಣದಲ್ಲಿ ಊಟ, ವಸತಿ, ನರ್ಸಿಂಗ್ ಕೇರ್ ಮತ್ತು ವೈದ್ಯರ ಆರೈಕೆಯೊಂದಿಗೆ ನೋಡಿಕೊಳ್ಳುತ್ತೇವೆ. ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ.
9607172737

HOUSE FOR RENT
2 BHK independent house (South side door), J.P. Nagar 2nd Stage, Near JSS Public School (Salaried persons only). *Contact:*
Mob: 9448738751

'R' Real Estate
ಸೈಟುಗಳನ್ನು ಕೊಳ್ಳಲು/ಮಾರಲು ಸೈಟುಗಳು ಮಾರಾಟಕ್ಕಿದೆ. 30x40 W/F 4ನೇ ಹಂತ, ವಿಜಯನಗರ, 50x80 ಕಾರ್ನರ್ ಸುವರ್ಣನಗರ, 40x60 W/F ದಡದಹಳ್ಳಿ, ಸಂಪರ್ಕಿಸಿ
9538412881

ತಕ್ಷಣ ಬೇಕಾಗಿದ್ದಾರೆ
ತಕ್ಷಣ ಟೆಲಿಕಾಲಿಂಗ್ ಮಾಡಲು ಹುಡುಗಿಯರು ಸಂಬಳ 10000)+ Incentive) ಸ್ಥಳ ಚಾಮುಂಡಿಪುರಂ ಮತ್ತು ಎನ್.ಆರ್ ಮೊಹಲ್ಲಾ, Field Executives(17000)+ (Incentive) Collection Department ಟೀಮ್ ಲೀಡರ್ ಬೇಕಾಗಿದ್ದಾರೆ (ಸಂಬಳ – 12000)
Mobile : 81500 05111

ಬೇಕಾಗಿದ್ದಾರೆ
ಅನುಭವವುಳ್ಳ ಸೌತ್ ಇಂಡಿಯನ್ ಸಸ್ಯಹಾರಿ ಅಡುಗೆ ಭಟ್ಟರು (ಗಂಡಸರು) ಸಂಬಳ : 30,000/– ಸ್ಥಳ : ಮೈಸೂರು
9964242430

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ ಕೆಲಸಕ್ಕೆ 16,000 ಸಾವಿರ ESI, PF ಸೌಲಭ್ಯವಿರುತ್ತದೆ. ಹೆಬ್ಬಾಳು ಮತ್ತು ಮೇಟಗಳ್ಳಿ ಸುತ್ತಮುತ್ತ ಆಸಕ್ತರು ಸಂಪರ್ಕಿಸಿ
9035367083, 6361548626



ಹಸಿರು ನಮ್ಮ ಉಸಿರು

Nypunya School of Excellence MYSURU — DATTAGALLI and R.T.NAGAR
ಬೇಕಾಗಿದ್ದಾರೆ
Ayah/Attenders: ಶಾಲೆಯಲ್ಲಿ ಕೆಲಸ ಮಾಡಲು ಆರ್.ಟಿ. ನಗರ ಮತ್ತು ದಟ್ಟಗಳ್ಳಿ ವ್ಯಾಪ್ತಿಯಲ್ಲಿರುವ ಮಹಿಳಾ ಆಯಾ ಬೇಕಾಗಿದ್ದಾರೆ.
96069 59451
ಆಸಕ್ತರು ಒಂದು ವಾರದೊಳಗೆ ಸಂಪರ್ಕಿಸಿ.

SITE FOR SALE
30x40 & 30x50 Site Sale at Railway Layout. Bogadi 25x80 Site Sale at Kuvempunagar 50x80 Site sale at Saraswathipuram, Dattagalli, Call
7353430309

JOB OPPORTUNITY SEMINAR
Reputed Government Approved Financial Company is to invite you for Job Opportunity Seminar in Mourya Residence Hotel on 15-12-2025 at 11 am near Wood Land Talkies, Mysore-01, Exclusively Retired Officials. Education SSLC & above any Degree
Call: 70220-34200

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ


ಗ್ರಾಮಸ್ಥರ ನಾಲ್ಕು ದಶಕದ ಕನಸು ನನಸು

ಹುಣಸೂರು ತಾಲೂಕಿನ 19 ಬೇಚರಾಕ್ ಗ್ರಾಮಗಳು ಕಂದಾಯ ಗ್ರಾಮಗಳಾಗಿ ಪರಿವರ್ತನೆ

ಹುಣಸೂರು, ಡಿ.14– ಸರ್ಕಾರ ತಾಲೂಕಿನ 19 ಬೇಚರಾಕ್ (ಅಧಿಕೃತವಾಗಿ ಕಂದಾಯ ಸ್ಥಾನಮಾನ ಮತ್ತು ಜನವಸತಿ ಇಲ್ಲದ) ಗ್ರಾಮಗಳನ್ನು ಕಂದಾಯ ಗ್ರಾಮವಾಗಿಸುವ ಮೂಲಕ 4 ದಶಕಗಳ ಗ್ರಾಮಸ್ಥರ ಬೇಡಿಕೆ ಈಡೇರಿದಂತಾಗಿದೆ.

2019ರಲ್ಲಿ ರಾಜ್ಯ ಸರಕಾರ ಬೇಚರಾಕ್ ಗ್ರಾಮಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಆದೇಶಿಸಿತ್ತು. ಅದರಂತೆ ಎಲ್ಲಾ ಪ್ರಕ್ರಿಯೆಗಳು ನಡೆದು ತಿಂಗಳ ಹಿಂದಷ್ಟೆ ತಾಲೂಕಿನಲ್ಲಿರುವ 19 ಬೇಚರಾಕ್ ಗ್ರಾಮಗಳ ಪೈಕಿ 18 ಕಂದಾಯ ಗ್ರಾಮಗಳಾಗಿ ಮತ್ತು ಉಪಗ್ರಾಮಗಳ ಪೈಕಿ ಒಂದು ಉಪಗ್ರಾಮ ಕಂದಾಯ ಗ್ರಾಮವಾಗಿ ಪರಿವರ್ತಿಸಲಾಗಿದೆ. 5 ದಶಕಗಳ ಕಾಲ ತಮ್ಮ ಆಸ್ತಿ, ಪಾಸ್ತಿ, ಹಕ್ಕು, ವ್ಯವಹಾರ ಎಲ್ಲಿಯು ನಡೆಸಲಾಗದೆ ಜನರು ತೊಂದರೆ ಅನುಭವಿಸಿದ್ದರು.

ಸಂಕಷ್ಟಕ್ಕೆ ಸಿಲುಕಿದ್ದ ಗ್ರಾಮಸ್ಥರು: ಈ ಬೇಚರಾಕ್ ಗ್ರಾಮಗಳು ಅಧಿಕೃತವಾಗಿ ಕಂದಾಯ ಸ್ಥಾನಮಾನ ಹೊಂದಿಲ್ಲದ ಗ್ರಾಮಗಳಾಗಿದ್ದ ಕಳೆದ 40 ವರ್ಷಗಳಿಂದ ಗ್ರಾಮಸ್ಥರು ಜನಪ್ರತಿನಿಧಿಗಳು ಹಾಗೂ ಸರ್ಕಾರಕ್ಕೆ ಮನವಿ ಮಾಡುತ್ತಲೇ ಬಂದಿದ್ದರು. ಪ್ರಮುಖ ಗ್ರಾಮವೊಂದರ ಹೊರವಲಯದಲ್ಲಿ ಹುಟ್ಟಿಕೊಂಡ ಸಮೂಹವೊಂದರ ಪ್ರದೇಶ ತನ್ನ ಎಲ್ಲ ಆಗುಹೋಗುಗಳನ್ನು ಪ್ರಮುಖ ಗ್ರಾಮದೊಂದಿಗೆ ಹೊಂದಿರುತ್ತವೆ. ಭೂಮಿಯ ಆಸ್ತಿಯ ದಾಖಲೆಗಳು ಪ್ರಮುಖ ಗ್ರಾಮದ ಹೆಸರಿನಲ್ಲಿಯೇ ಇರುತ್ತವೆ.



ಕಂದಾಯ ಗ್ರಾಮವೊಂದರ ಚಿತ್ರಣ.

ಸಣ್ಣ ಸಮೂಹವಿರುವ ಪ್ರದೇಶದಲ್ಲಿ ಗ್ರಾಮಠಾಣೆಯಾಗಲಿ, ಮೂಲಸೌಕರ್ಯಗಳಾಗಲಿ ಲಭಿಸದೆ ಅಲ್ಲಿನ ಕುಟುಂಬಗಳಲ್ಲಿ ತಮ್ಮ ಆಸ್ತಿಯ ಮೇಲಿನ ಹಕ್ಕನ್ನು ಪ್ರತಿಪಾದಿಸಲು ಅಗತ್ಯ ದಾಖಲೆಗಳು ಇರುವುದಿಲ್ಲ, ಆಸ್ತಿ ಹಂಚಿಕೆ, ಮಾರಾಟ, ಖರೀದಿ, ಬ್ಯಾಂಕ್ ಸಾಲ ಸೌಲಭ್ಯ ಪಡೆಯಲಾಗದೆ ಸಂಕಷ್ಟಕ್ಕೆ ಸಿಲುಕಿದ್ದರು. ಅಲ್ಲದೆ ಗ್ರಾಮಗಳು ಬೇಚರಾಕ್ ಗ್ರಾಮವಾಗಿದ್ದ ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿಯ ಗೌರಿಪುರ ಗ್ರಾಮ. ಅಭಿವೃದ್ಧಿ ಮರೀಚಿಕೆಯಾಗಿತ್ತು. ಇದೀಗ ಈ ಎಲ್ಲಾ ಸಮಸ್ಯೆಗಳೂ ಬಗೆಹರಿದಂತಾಗಿದೆ.

ಪರಿವರ್ತಿತ ಕಂದಾಯ ಗ್ರಾಮಗಳು: ತಾಲೂಕಿನ ಮಧುಗಿರಿಕೊಪ್ಪಲು (ಮೂಲ ಕಂದಾಯ ಗ್ರಾಮ ಬನ್ನಿಕುಪ್ಪೆ), ಮರಳಯ್ಯನಕೊಪ್ಪಲು (ಬನ್ನಿಕುಪ್ಪೆ), ತೆಕ್ಕಲಹಾಡಿ (ಕಾಡುವಡ್ಡರಗುಡಿ), ಯಲಚವಾಡಿ (ದಲ್ಲಾಳು), ಮಹದೇವಪುರ ಹಾಡಿ (ದೈತ್ಯನಕೆರೆ ಹಾಡಿ), ವಿಜಯಗಿರಿಹಾಡಿ (ದಾಸನಪುರ), ಈರದಾಸನಕೊಪ್ಪಲು (ಗಾಗೇನಹಳ್ಳಿ), ಗೌರಿಪುರ (ಉದ್ದೂರು), ಕೆಂಪಮ್ಮನ ಹೊಸೂರು (ಅಂಕನಹಳ್ಳಿ), ಜೋಳೇನಹಳ್ಳಿ(ಕೆಂಪನಹಳ್ಳಿ), ಹುಂಡಿಮಾಳ (ಉಯಿಗೊಂಡನಹಳ್ಳಿ), ಹೊಸವಾರಂಚಿ (ಉಯಿಗೊಂಡನಹಳ್ಳಿ), ಲಕ್ಕನಕೊಪ್ಪಲು (ಮುಳ್ಳೂರು), ಹರವೆ ಕಲ್ಲಹಳ್ಳಿ (ರಾಮೇನಹಳ್ಳಿ), ಕಟ್ಟೆಮಳಲವಾಡಿ ಕೊಪ್ಪಲು(ಕಟ್ಟೆಮಳಲವಾಡಿ). ಶಂಕರೇಗೌಡನಕೊಪ್ಪಲು (ಕೆರೆಯೂರು), 1ನೇ ಪಕ್ಷಿರಾಜಪುರ (ಉಮ್ಮತ್ತೂರು), ಕಳ್ಳಿಕೊಪ್ಪಲು (ಜಾಬಗೆರೆ) ಈ ಗ್ರಾಮಗಳು ಕಂದಾಯ ಗ್ರಾಮಗಳಾಗಿವೆ.

ಐದು ಉಪಗ್ರಾಮಗಳ ಪೈಕಿ ಬಿಳಿಕೆರೆ ಹೋಬಳಿಯ ಕೊಮ್ಮೇಗೌಡನಕೊಪ್ಪಲು (ಗೆರಸನಹಳ್ಳಿ) ಕಂದಾಯ ಗ್ರಾಮವಾಗಿ ರಚಿತವಾಗಿದೆ. ಉಳಿದಂತೆ ಪ್ರಸ್ತಾವನೆ ಹಂತದಲ್ಲಿ ತೆಂಕಲಕೊಪ್ಪಲು (ಹುಸೇನ್‌ಪುರ), ಉಪಗ್ರಾಮಗಳಾದ ಲಕ್ಷ್ಮೀಪುರ (ಕೂಡೂರು), ಕಲ್ಕಡ(ಹರೀನಹಳ್ಳಿ), ಯಾಲಕ್ಕಿಕಟ್ಟೆ (ಕುಡಿನೀರು ಮುದ್ದನಹಳ್ಳಿ) ಮತ್ತು ದೇವರಾಜ ಕಾಲನಿ(ಕರಣಕುಪ್ಪೆ) ಕಂದಾಯ ಗ್ರಾಮಗಳಾಗಲು ಬಾಕಿ ಉಳಿದುಕೊಂಡಿವೆ.

ಏನಿದು ಬೇಚರಾಕ್ ಗ್ರಾಮ?: 'ಬೇಚರಾಕ್' ಗ್ರಾಮ ಎಂದರೆ ಅಧಿಕೃತವಾಗಿ ಕಂದಾಯ ಸ್ಥಾನಮಾನ ಇಲ್ಲದ ಮತ್ತು ಜನವಸತಿ ಇಲ್ಲದ ಗ್ರಾಮಗಳನ್ನು ಬೇಚರಾಕ್ ಗ್ರಾಮಗಳೆಂದು ಕರೆಯುತ್ತಾರೆ. ಬೇಚರಾಕ್ ಗ್ರಾಮಗಳ ಜಮೀನಿನ ದಾಖಲೆಗಳು ಅಕ್ಕ ಪಕ್ಕದ ಗ್ರಾಮಗಳ ಹೆಸರಿನಲ್ಲಿ ದಾಖಲಾಗಿರುತ್ತವೆ.



ಕಂದಾಯ ಗ್ರಾಮವಾಗಿ ಪರಿವರ್ತಿಸಲಾಗಿರುವ 18 ಗ್ರಾಮಗಳಲ್ಲಿ ಒಟ್ಟು 592 ಹಕ್ಕು ಪತ್ರಗಳು ಅನುಮೋದನೆಗೊಂಡಿದ್ದು, 274 ಆಸ್ತಿಗಳನ್ನು ನೋಂದಣಿ ಮಾಡಿಕೊಡಲಾಗಿದೆ. ಬಾಕಿಯಿರುವ ಹಕ್ಕುಪತ್ರಗಳನ್ನು ನೋಂದಣಿ ಮಾಡಿಸಿ, ಕಾರ್ಯಕ್ರಮ ಏರ್ಪಡಿಸಿ ವಿತರಿಸಲಾಗುವುದು. ನಾಲ್ಕು ಉಪ ಗ್ರಾಮಗಳನ್ನು ಆಯ್ಕೆ ಮಾಡಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

–ಜೆ.ಮಂಜುನಾಥ್ ತಹಸೀಲ್ದಾರ್, ಹುಣಸೂರು



ಬೇಚರಾಕ್ ಗ್ರಾಮವಾಗಿದ್ದ ಗೌರಿಪುರ ಸೇರಿದಂತೆ ತಾಲೂಕಿನ 19 ಗ್ರಾಮಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಿ, ದಾಖಲೆ ಮಾಡಿಕೊಡುವ ಮೂಲಕ ಎಷ್ಟೋ ವರ್ಷಗಳ ಗ್ರಾಮಸ್ಥರ ಕನಸು ನನಸಾದಂತಾಗಿದೆ. ಒಡೆತನದ ಹಕ್ಕಿಲ್ಲದೆ ಬದುಕುತ್ತಿದ್ದ ನಮಗೆ ನ್ಯಾಯ ಸಿಕ್ಕಿದೆ.

–ಮನುಕುಮಾರ್, ಉದ್ದೂರ್ ಕಾವಲ್ ಗ್ರಾ.ಪಂ. ಸದಸ್ಯ

ಬಡಗಲಪುರದಲ್ಲಿ ಅಂಗನವಾಡಿ ಹಬ್ಬ ಆಚರಣೆ



ಬಡಗಲಪುರ ವೃತ್ತದ ಅಂಗನವಾಡಿ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಅನಿಲ್ ಚಿಕ್ಕಮಾದುರವರ ಪತ್ನಿ ಸೌಮ್ಯಾ ಅನಿಲ್ ಮಾತನಾಡಿದರು.

ಸರಗೂರು, ಡಿ.14–ಅಂಗನವಾಡಿಗಳಲ್ಲಿ ಶಾಲಾ ಪೂರ್ವ ಶಿಕ್ಷಣದ ಪ್ರಾಮುಖ್ಯತೆಯನ್ನು ಸಮುದಾಯಕ್ಕೆ ತಿಳಿಸುವ ಸಲುವಾಗಿ ಹಾಗೂ ಆರಂಭಿಕ ಶಿಕ್ಷಣದ ಗುಣಮಟ್ಟವನ್ನು ಬಲಪಡಿಸಲು ಸಮುದಾಯದ ಪಾತ್ರ ಬಹುಮುಖ್ಯವಾದದ್ದು ಎಂದು ಶಾಸಕರ ಪತ್ನಿ ಸೌಮ್ಯಾ ಅನಿಲ್ ತಿಳಿಸಿದರು.

ತಾಲೂಕಿನ ಹಾದನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಡಗಲಪುರ ಗ್ರಾಮದಲ್ಲಿ ಮಕ್ಕಳ ಜಾಗೃತಿ ಸಂಸ್ಥೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಬಡಗಲಪುರ ವೃತ್ತದ ಅಂಗನವಾಡಿ ಹಬ್ಬ ಉದ್ಘಾಟಿಸಿ ಮಾತನಾಡಿದರು. ಶಾಸಕ ಅನಿಲ್ ಚಿಕ್ಕಮಾದು ಬೆಳಗಾವಿ ಚಳಿಗಾಲದ ಅಧಿವೇಶನ ಇರುವುದರಿಂದ ಅವರು ಬಾರದ ಕಾರಣ ಕಾರ್ಯಕ್ರಮಕ್ಕೆ ಸ್ವಾಗತಿಸಿದಕ್ಕೆ ಇಲಾಖೆಗೆ ಧನ್ಯವಾದಗಳು ತಿಳಿಸಿದರು.

ಹಾದನೂರು ಗ್ರಾಪಂ ಉಪಾಧ್ಯಕ್ಷ ಪ್ರಕಾಶ್ ಮಾತನಾಡಿ, ಮಕ್ಕಳ ಹಬ್ಬವನ್ನು ಅಂಗನವಾಡಿ ಹಬ್ಬವನ್ನಾಗಿ ಆಚರಣೆ ಮಾಡಲು ನಿರ್ಧರಿಸಿದಾಗ ಅಧಿಕಾರಿಗಳು ಹಾಗೂ ಗ್ರಾಪಂ ಆಡಳಿತ ಮತ್ತು ಮುಖಂಡರು ಹಾಗೂ ಜಾಗೃತಿ ಸಂಸ್ಥೆಯವರು ಸಹಕಾರ ನೀಡಿದ್ದು, ಮಕ್ಕಳಿಗೆ ನಮ್ಮ ಸಂಪ್ರದಾಯ ಸಂಸ್ಕೃತಿಗಳನ್ನು ತಿಳಿಸಿಕೊಡುವ ಕಾರ್ಯ ಮಾಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ಹೆಚ್.ಡಿ.ಕೋಟೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ದೀಪಾ ಮಾತನಾಡಿ, ಅಂಗನವಾಡಿಯಲ್ಲಿ ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣದಲ್ಲಿ ಮಕ್ಕಳ ಬೆಳವಣಿಗೆಗೆ ಪೂರಕವಾದ ಚಟುವಟಿಕೆಗಳನ್ನು ಪರಿಚಯ ಮಾಡಿಸುವುದರ ಮೂಲಕ ಪೋಷಕರು ಅಂಗನವಾಡಿ ಕಡೆ ತಿರುಗಿ ನೋಡುವಂತೆ ಮಾಡಲು ಮಕ್ಕಳ ಜಾಗೃತಿಗೆ ಸಾಕಷ್ಟು ಬೆಂಬಲವನ್ನು ನೀಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಹಾದನೂರು ಗ್ರಾಪಂ ಅಧ್ಯಕ್ಷೆ ಜ್ಯೋತಿ ರಮೇಶ್, ಉಪಾಧ್ಯಕ್ಷ ಪ್ರಕಾಶ್, ಸದಸ್ಯ ಗಂಗಾಧರ, ರತ್ನಮ್ಮ, ಶಿವಲಿಂಗಯ್ಯ, ಶಿವರಾಜು, ಭಾಗ್ಯಾ ಕೆಂಪಸಿದ್ದ, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು, ಶಿಶು ಅಭಿವೃದ್ಧಿ ಇಲಾಖೆ ಮೇಲ್ವಿಚಾರಕಿ ರಜಿನಿ ಮಕ್ಕಳ ಅಭಿವೃದ್ಧಿ ಸಂಸ್ಥೆಯ ಸಿಬ್ಬಂದಿಗಳು ಹಾಗೂ ಅಂಗನವಾಡಿಯ ಮೇಲ್ವಿಚಾರಕಿಯರು ಹಾಗೂ ಗ್ರಾಮಸ್ಥರು ಮತ್ತು ಪ್ರಾಥಮಿಕ ಶಾಲೆಯ ಶಿಕ್ಷಕರು ಹಾಗೂ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಹೆಚ್.ಡಿ.ಕೋಟೆಯಲ್ಲಿ ಹನುಮ ಜಯಂತಿ ಅಂಗವಾಗಿ ತಾಲೂಕು ಆಡಳಿತ ಸಭೆ

ಹೆಚ್.ಡಿ.ಕೋಟೆ, ಡಿ.14– ಹೆಚ್.ಡಿ.ಕೋಟೆ ಪಟ್ಟಣದಲ್ಲಿ ಡಿ.20ರಂದು ನಡೆಯುವ ಹನುಮ ಜಯಂತಿಯನ್ನು ಶಾಂತಿಯುತವಾಗಿ ನಡೆಸಬೇಕು ಎಂದು ಡಿವೈಎಸ್ಪಿ ಶ್ರೀಕಾಂತ್ ತಿಳಿಸಿದರು.

ಪಟ್ಟಣದ ತಾಲೂಕು ಆಡಳಿತ ಸೌಧದಲ್ಲಿ ಪೊಲೀಸ್ ಇಲಾಖೆ ಮತ್ತು ತಾಲೂಕು ಆಡಳಿತದ ವತಿಯಿಂದ ಹನುಮ ಜಯಂತಿ ಸಭೆಯಲ್ಲಿ ಮಾತನಾಡಿದ ಅವರು, ಎಂದಿನಂತೆ ತಾಲೂಕಿನ ಹೃದಯ ಭಾಗದಲ್ಲಿ ಆಚರಿಸಲು ಹನುಮ ಸೇವಾ ಸಮಿತಿ ಆಯೋಜಿಸಿದ್ದು, ಈ ಕಾರ್ಯಕ್ರಮವು ಯಾರಿಗೂ ತೊಂದರೆಯಾಗದ ರೀತಿ, ಶಾಂತಿ ಮತ್ತು ಸೌಹಾರ್ದತೆಯಿಂದ ಆಚರಿಸಬೇಕು ಎಂದು ತಿಳಿಸಿದರು.

ಹನುಮ ಜಯಂತಿಯ ಮೆರವಣಿಗೆಯಲ್ಲಿ ಯಾವುದೇ ರಾಜಕೀಯ ವ್ಯಕ್ತಿಗಳ ಹಾಗೂ ಚಲನಚಿತ್ರ ನಟರ ಭಾವಚಿತ್ರಗಳು ಮತ್ತು ಬಾವುಟಗಳನ್ನು ಬಳಸಬಾರದು, ಪಟ್ಟಣದಲ್ಲಿ ಸ್ವಚ್ಛತೆಯನ್ನ ಕಾಪಾಡಬೇಕು, ನಂತರ ಪ್ರಸಾದ ವಿನಿಯೋಗದ ಸಮಯದಲ್ಲಿ ಆರೋಗ್ಯ ಇಲಾಖೆಯಿಂದ ತಪಾಸಣೆಗೊಳಪಟ್ಟ ಪ್ರಸಾದವನ್ನು ಮಾತ್ರ ವಿತರಿಸಬೇಕು ಎಂದು ಸೂಚಿಸಿದರು.



ಪಟ್ಟಣದ ತಾಲೂಕು ಆಡಳಿತ ಸೌಧದಲ್ಲಿ ಪೊಲೀಸ್ ಇಲಾಖೆ ಮತ್ತು ತಾಲೂಕು ಆಡಳಿತದ ವತಿಯಿಂದ ಹನುಮ ಜಯಂತಿ ಸಭೆ.

ಹನುಮ ಸೇವಾ ಸಮಿತಿ ಅಧ್ಯಕ್ಷ ಬಿಡುಗಲು ರಾಜು ಮಾತನಾಡಿ, ಈ ಬಾರಿ ನಡೆಯುವ ಹನುಮ ಜಯಂತಿಯ ಅಂಗವಾಗಿ ತಾಲೂಕಿನಾದ್ಯಂತ ಪ್ರಚಾರ ಮಾಡಲಾಗಿದೆ, ಕರಪತ್ರಗಳನ್ನು ಸಹ ಹಂಚಲಾಗಿದೆ, ಕಾರ್ಯಕ್ರಮಕ್ಕೆ ವಿವಿಧ ಮಠಗಳ ಮಠಾಧಿಪತಿಗಳು, ಶಾಸಕ ಅನಿಲ್ ಚಿಕ್ಕಮಾದು, ಸಂಸದ ಸುನೀಲ್ ಬೋಸ್, ತಾಲೂಕಿನ ಮಾಜಿ ಶಾಸಕರು ಹಾಗೂ ವಿವಿಧ ಪಕ್ಷಗಳ ಮುಖಂಡರು, ಸಹಸ್ರಾರು ಸಂಖ್ಯೆಯಲ್ಲಿ ಹನುಮ ಭಕ್ತಾದಿಗಳು ಭಾಗವಹಿಸಲಿದ್ದಾರೆ. ಆದ್ದರಿಂದ ಪೊಲೀಸ್ ಇಲಾಖೆ ಸೂಕ್ತ ಬಂದೋಬಸ್ತ್ ನೀಡಬೇಕು ಎಂದು ಮನವಿ ಮಾಡಿದರು.

ಪೊಲೀಸ್ ಇನ್ಸ್‌ಪೆಕ್ಟರ್ ಎಸ್.ಗಂಗಾಧರ್ ಮಾತನಾಡಿ, ದೇಶದಲ್ಲಿ ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ್ದು ಎಲ್ಲಾ ಜಯಂತಿಗಳನ್ನು ಶಾಂತಿ ಸೌಹಾರ್ದತೆಯಿಂದ ಆಚರಿಸಬೇಕು, ಹನುಮ ಜಯಂತಿಯ ಅಂಗವಾಗಿ ಪಟ್ಟಣದಲ್ಲಿರುವ ಎಲ್ಲಾ ವೈನ್ ಸ್ಟೋರ್‌ಗಳನ್ನು ತೆರೆಯದಂತೆ ಆದೇಶಿಸಲು ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆಯಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಶ್ರೀನಿವಾಸ್, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಎಸ್.ಐ. ಚಿಕ್ಕನಾಯಕ, ಸುರೇಶ್ ನಾಯಕ, ಹನುಮ ಸೇವಾ ಸಮಿತಿ ಉಪಾಧ್ಯಕ್ಷ ರೂಪೇಶ್, ಮಾಜಿ ಅಧ್ಯಕ್ಷ ಡೈರಿ ಶ್ರೀಕಾಂತ್, ಚಂದ್ರಮೌಳೇಶ್ವರ್, ಮುತ್ತುರಾಜು, ನಂದೀಶ್, ಕನ್ನಡ ಪ್ರಮೋದ, ಜಯಂತ್, ಪೂರ್ಣೇಶ್, ನಾಗೇಶ್, ಸುರೇಶ್, ಪ್ರಶಾಂತ್, ಮಹೇಶ್, ಸಂತೋಷ್, ವಕೀಲರಾದ ಮೋಹನ್, ನಾಗೇಶ್, ಪುರುಷೋತ್ತಮ, ಪಂಡಿತ್, ಯಶವಂತ್, ನಾಗೇಶ್, ಮಾದೇವನಾಯಕ, ಎಲ್ಲಾ ಸಂಘಟನೆ ಕಾರ್ಯಕರ್ತರು ಮುಖಂಡರು ಹಾಜರಿದ್ದರು.

ಮಾದಾಪುರದಲ್ಲಿ ಶ್ರೀ ಮುರುಡೇಶ್ವರ ಸ್ವಾಮಿ ಉತ್ಸವ ಸಂಪನ್ನ



ತಿ.ನರಸೀಪುರ ತಾಲೂಕು ಮಾದಾಪುರ ಗ್ರಾಮದಲ್ಲಿ ಶ್ರೀ ಗಣೇಶ, ಶ್ರೀ ಮುರುಡೇಶ್ವರ ಸ್ವಾಮಿ ಉತ್ಸವ ಮೂರ್ತಿಯ ಕುದುರೆ ವಾಹನ ಉತ್ಸವ, ನಾಗಾಭರಣ ಸಹಿತ ಕೊಳಗದ ಜಂಬೂಸವಾರಿ ಉತ್ಸವವು ವಿಜೃಂಭಣೆಯಿಂದ ಜರುಗಿತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಭಕ್ತ ಸಾಗರದ ನಡುವೆ ನಡೆದ ಉತ್ಸವವು ಅರ್ಥಪೂರ್ಣವಾಗಿ ಸಂಪನ್ನಗೊಂಡಿತು. ಶ್ರೀ ಮುರುಡೇಶ್ವರ ಸ್ವಾಮಿ ಸಮಿತಿಯ ವತಿಯಿಂದ ಸಾವಿರಾರು ಭಕ್ತರಿಗೆ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿತ್ತು.

ಸರ್ಕಾರಿ ನೌಕರರ ಸಂಕಷ್ಟ ಪರಿಹಾರಕ್ಕಾಗಿ ಹೋರಾಟ

ರಾಜ್ಯ ಸರ್ಕಾರಿ ನೌಕರರ ಸಂಘದ ಸಂಘಟನಾ ಕಾರ್ಯದರ್ಶಿ ಸೋಮಶೇಖರ್ ಇಂಗಿತ



ಸರ್ಕಾರಿ ನೌಕರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಸೋಮಶೇಖರ್ ಅವರನ್ನು ಅಭಿನಂದಿಸಲಾಯಿತು.

ಪಿರಿಯಾಪಟ್ಟಣ, ಡಿ14– ರಾಜ್ಯದಲ್ಲಿ ಸರ್ಕಾರಿ ನೌಕರರ ಸಂಕಷ್ಟಗಳ ಪರಿಹರಿಸುವತ್ತ ನನ್ನ ಹೋರಾಟ ಸದಾ ಇರುತ್ತದೆ ಎಂದು ನೂತನವಾಗಿ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ನೇಮಕವಾದ ಸೋಮಶೇಖರ್ ಅವರು ತಿಳಿಸಿದರು.

ಪಟ್ಟಣದ ಸರ್ಕಾರಿ ನೌಕರರ ಸಂಘದ ಕಚೇರಿಗೆ ಪ್ರಥಮವಾಗಿ ಭೇಟಿ ನೀಡಿ ಮಾತನಾಡಿದ ಅವರು, ಸಂಘದ ರಾಜ್ಯಾಧ್ಯಕ್ಷ ಷಡಕ್ಷರಿ ಅವರು ನನಗೆ ಈ ಅವಕಾಶವನ್ನು ಕಲ್ಪಿಸಿದ್ದು ನನ್ನ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಿ ಮುಂದಿನ ದಿನಗಳಲ್ಲಿ ನೌಕರರ ಸಮಸ್ಯೆಗಳನ್ನು ಪರಿಹಾರ ಮಾಡುವುದು ಹಾಗೂ ಸೇವಾ ಕಾರ್ಯ ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಂಡು ಸರ್ಕಾರಿ ನೌಕರರಲ್ಲಿ ಯಾವುದೇ ಸಮಸ್ಯೆ ಕಂಡು ಬಂದರು ಅದನ್ನು ಪರಿಹರಿಸುವುದೇ ನನ್ನ ಧ್ಯೇಯವಾಗಿದೆ ಎಂದರು.

ಸರ್ಕಾರದಿಂದ ಸರ್ಕಾರಿ ನೌಕರರಿಗೆ ಯಾವುದೇ ರೀತಿಯ ಕೆಲಸವಾಗಬೇಕಾದರೂ ನಾವು ಮುಂದೆ ನಿಂತು ಮಾಡಿಕೊಡುವುದು ನಮ್ಮ ಕರ್ತವ್ಯವಾಗಿದೆ. ಯಾವುದೇ ಜಟಿಲವಾದ ಸಮಸ್ಯೆ ಇದ್ದರೂ ಕೂಡ ನಮ್ಮ ಗಮನಕ್ಕೆ ತನ್ನಿ ಎಂದರು.

ಈ ಸಂದರ್ಭದಲ್ಲಿ ತಾಲೂಕು ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಕೆ.ಹೊಸಳ್ಳಿ ಕೃಷ್ಣೇಗೌಡ ಮಾತನಾಡಿ, ಸೋಮಶೇಖರ್ ಅವರು ಪಿರಿಯಾಪಟ್ಟಣದ ಸರ್ಕಾರಿ ಐಟಿಐ ಕಾಲೇಜ್‌ನಲ್ಲಿ ಕೆಲಸ ಮಾಡುತ್ತಿದ್ದು, ಇವರ ಕಾರ್ಯಧ್ಯಕ್ಷತೆ ಹಾಗೂ ನೈಪುಣ್ಯತೆ ಸಂಘಟನಾ ಚತುರತೆಯನ್ನು ಅರಿತ ರಾಜ್ಯ ಸಂಘದ ರಾಜ್ಯಾಧ್ಯಕ್ಷ ಷಡಕ್ಷರಿ ಅವರು ಇವರನ್ನು ರಾಜ್ಯ ಸಂಘಟನಾ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿರುವುದು ನಮಗೆಲ್ಲರಿಗೂ ಹಾಗು ಈ ತಾಲೂಕಿನ ನೌಕರರಿಗೆ ಒಂದು ಹೆಮ್ಮೆಯ ವಿಷಯವಾಗಿ ನೌಕರರ ಸೇವೆಯನ್ನು ಉತ್ತಮವಾಗಿ ನಿರ್ವಹಿಸಿ ತಾಲೂಕು ಹಾಗೂ ರಾಜ್ಯಕ್ಕೂ ಕೀರ್ತಿ ತರಲಿ ಎಂದು ಶುಭ ಹಾರೈಸಿದರು. ಸಂದರ್ಭದಲ್ಲಿ ಉಪಾಧ್ಯಕ್ಷ ರಮೇಶ್, ಕಾರ್ಯದರ್ಶಿ ಧರ್ಮಪಾಲ್ ಉಪಸ್ಥಿತರಿದ್ದರು.

14 ವರ್ಷದೊಳಗಿನ ವಿದ್ಯಾರ್ಥಿಗಳು ಕ್ರಿಕೆಟ್ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ



ವಿದ್ಯಾರ್ಥಿಗಳನ್ನು ಶಾಲೆ ವತಿಯಿಂದ ಅಭಿನಂದಿಸಲಾಯಿತು.

ತಿ.ನರಸೀಪುರ, ಡಿ.14– ಪಟ್ಟಣದ ಶ್ರೀಎಂ.ಸಿ.ಶಿವಾನಂದ ಶರ್ಮ ಸ್ಮಾರಕ ವಿದ್ಯೋದಯ ಆಂಗ್ಲ ಮಾಧ್ಯಮ ಪ್ರೌಢಶಾಲೆ ಮತ್ತು ಆದರ್ಶ ಪ್ರೌಢಶಾಲೆ ವಿದ್ಯಾರ್ಥಿಗಳು ಕೋಲಾರದ ಕೆಜಿಎಫ್‌ನಲ್ಲಿ ನಡೆದ ರಾಜ್ಯ ಮಟ್ಟದ 14 ವರ್ಷದೊಳಗಿನ ಕ್ರಿಕೆಟ್ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಶಿವಾನಂದ ಶರ್ಮ ಸ್ಮಾರಕ ವಿದ್ಯೋದಯ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಶಿವನ್ ಪಟೇಲ್ ಮತ್ತು ಧನೇಶ್ ಅರಸ್ ಹಾಗೂ ಆದರ್ಶ ಶಾಲೆ ಲೋಕಾರ್ಜುನ್ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಆ ಮೂಲಕ ಕ್ರಿಕೆಟ್‌ನಲ್ಲಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾದ ತಾಲೂಕಿನ ಮೊದಲ ಆಟಗಾರರಾಗಿ ಇತಿಹಾಸ ನಿರ್ಮಿಸಿದ್ದಾರೆ.

ಶಾಲೆ ಆಡಳಿತ ಮಂಡಳಿ, ಶಾಲಾ ಮುಖ್ಯ ಶಿಕ್ಷಕ ನಂದೀಶ, ದೈಹಿಕ ಶಿಕ್ಷಣ ಶಿಕ್ಷಕಿ ಅಮೂಲ್ಯ, ಶಾಲಾ ಶಿಕ್ಷಕ ವೃಂದ, ತರಬೇತುದಾರ ಶಿವಶಂಕರ್ ಸ್ಪೋರ್ಟ್ಸ್ ಅಕಾಡೆಮಿಯ ನವೀನ್ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ನಾಳೆ ಕೆ.ಆರ್.ನಗರದಲ್ಲಿ ಸಾ.ರಾ. ಮಹೇಶ್ ನೇತೃತ್ವದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಹುಟ್ಟುಹಬ್ಬ

ಕೆ.ಆರ್.ನಗರ, ಡಿ.14– ಡಿಸೆಂಬರ್ 16 ರಂದು ಕೇಂದ್ರದ ಬೃಹತ್ ಕೈಗಾರಿಕೆ ಸಚಿವರು ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟು ಹಬ್ಬವನ್ನು ಮಾಜಿ ಸಚಿವ ಸಾ.ರಾ. ಮಹೇಶ್ ಅವರ ನೇತೃತ್ವದಲ್ಲಿ ಕೆ.ಆರ್.ನಗರ ಪಟ್ಟಣದಲ್ಲಿ ವಿಶಿಷ್ಟವಾಗಿ ಆಚರಣೆ ಮಾಡಲು ಜೆಡಿಎಸ್ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ತಾಲೂಕು ಜಾದಳ ಅಧ್ಯಕ್ಷ ಹಂಪಾಪುರ ಕುಮಾರ್ ಮತ್ತು ತಾಲೂಕು ಜಾದಳ ವಕ್ತಾರ ಕೆ.ಎಲ್.ರಮೇಶ್ ಜಂಟಿಯಾಗಿ ಪತ್ರಿಕಾ ಹೇಳಿಕೆ ನೀಡಿದ್ದಾರೆ.




ಮಂಗಳವಾರ ಬೆಳಗ್ಗೆ 8.30 ಗಂಟೆಗೆ ಪಟ್ಟಣದ ಬಸವೇಶ್ವರ ಬ್ಲಾಕ್‌ನಲ್ಲಿರುವ ಜೆಡಿಎಸ್ ಪಕ್ಷದ ಕಚೇರಿಯಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಅವರು ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬದಲ್ಲಿ ಭಾಗಿಯಾಗಿ ಹೆಚ್.ಡಿ.ಕೆ. ಅಭಿಮಾನಿಗಳು, ಪಕ್ಷದ ಕಾರ್ಯಕರ್ತರ ಸಮ್ಮುಖದಲ್ಲಿ ಕೇಕ್ ಕತ್ತರಿಸುವರು. ಬಳಿಕ ಮೈಸೂರು–ಹಾಸನ ರಸ್ತೆಯಲ್ಲಿರುವ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಪುತ್ಥಳಿ ಹಾಗೂ ಗರುಡಗಂಭ ವೃತ್ತದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿ, ಪುರಸಭೆ ಆವರಣದಲ್ಲಿರುವ ಬಾಬು ಜಗಜೀವನ್ ರಾಂ ಪುತ್ಥಳಿಗೆ ಮಾಲಾರ್ಪಣೆ ಮಾಡುವರು ಇದಾದ ನಂತರ ಪಟ್ಟಣದ ತಾಯಿ ಮಕ್ಕಳ ಆಸ್ಪತ್ರೆ, ಸಾರ್ವಜನಿಕ ಆಸ್ಪತ್ರೆಗೆ ತೆರಳಿ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ ಮಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇದಕ್ಕೂ ಮೊದಲು ಹೆಚ್.ಡಿ.ಕುಮಾರಸ್ವಾಮಿ ಅವರ ಅಭಿಮಾನಿಗಳು, ಜೆಡಿಎಸ್ ಕಾರ್ಯಕರ್ತರು ವಿವಿಧ ದೇವಾಲಯಗಳಲ್ಲಿ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅರ್ಚನೆ, ಪೂಜಾ ಕಾರ್ಯಗಳನ್ನು ಹಮ್ಮಿಕೊಂಡಿದ್ದಾರೆ ಎಂದು ತಾಲೂಕು ಜಾದಳ ಅಧ್ಯಕ್ಷ ಹಂಪಾಪುರ ಕುಮಾರ್ ಮತ್ತು ತಾಲೂಕು ಜಾದಳ ವಕ್ತಾರ ಕೆ.ಎಲ್.ರಮೇಶ್ ಜಂಟಿಯಾಗಿ ಪತ್ರಿಕಾ ಹೇಳಿಕೆ ಕೋರಿದ್ದಾರೆ.

ಆಡಳಿತ ವೈದ್ಯಾಧಿಕಾರಿಗೆ ಸನ್ಮಾನ

ಭೇರ್ಯ ಸಮೀಪದ ಬಟಿಗನಹಳ್ಳಿಯಲ್ಲಿರುವ ಶ್ರೀಸಾಯಿ ಬಾಬಾ ಇಂಟರ್ ನ್ಯಾಷನಲ್ ಸ್ಕೂಲ್ ವತಿಯಿಂದ ನಡೆದ 4ನೇ ವರ್ಷದ ಶ್ರೀಸಾಯಿಬಾಬಾ ಪೂಜೆ ಮತ್ತು ದೀಪೋತ್ಸವದಲ್ಲಿ ಆಡಳಿತ ವೈದ್ಯಾಧಿಕಾರಿ ಡಾ.ನಟರಾಜ್ ಅವರಿಗೆ ಸಾಯಿಬಾಬಾ ಪೋಟೋ ನೀಡಿ ಕಾರ್ಯದರ್ಶಿ ಲೋಕೇಶ್, ವ್ಯವಸ್ಥಾಪಕ ರಾಕೇಶ್ ಸನ್ಮಾನಿಸಿದರು.



ಹುಣಸೂರಲ್ಲಿ ನಂದಿನಿ ಗ್ಯಾಲಕ್ಸಿ ಕೇಂದ್ರ ಉದ್ಘಾಟನೆ



ಹುಣಸೂರಲ್ಲಿ ನೂತನ ನಂದಿನಿ ಗ್ಯಾಲಕ್ಸಿ ಕೇಂದ್ರವನ್ನು ಶಾಸಕ ಹರೀಶ್‌ಗೌಡ ಉದ್ಘಾಟಿಸಿದರು.

ಹುಣಸೂರು, ಡಿ.14– ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಗ್ರಾಹಕರು ಹೆಚ್ಚು ಬಳಸುವುದರಿಂದ ರೈತರನ್ನು ಹೆಚ್ಚು ಪ್ರೋತ್ಸಾಹಿಸಿದಂತಾಗುತ್ತದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ರೇಷ್ಮೆ ಮಾರುಕಟ್ಟೆ ರಸ್ತೆಯ ಕಸಬಾ ಸೊಸೈಟಿ ನೂತನ ಕಟ್ಟಡದಲ್ಲಿ ಮೈಮುಲ್ ವತಿಯಿಂದ ಪ್ರಾರಂಭಿಸಿರುವ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟ ಕೇಂದ್ರ (ನಂದಿನಿ ಗ್ಯಾಲಾಕ್ಸಿ ಕೇಂದ್ರ) ಉದ್ಘಾಟಿಸಿ ಮಾತನಾಡಿದ ಅವರು, ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್ ಅವರ ಪರಿಶ್ರಮದಿಂದ ತಾಲೂಕಿನಲ್ಲಿ ಸಾಕಷ್ಟು ಡೇರಿಗಳು ಪ್ರಾರಂಭವಾಗಿದ್ದು, ರೈತರು ಸಹ ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗುವ ಮೂಲಕ ಹಾಲಿನ ಹೊಳೆಯೇ ಹರಿಸಿದ್ದಾರೆ ಎಂದರು.

ಕಸಬಾ ಸಹಕಾರ ಸಂಘದ ಅಧ್ಯಕ್ಷ ವಾಸೇಗೌಡ ಮಾತನಾಡಿ, ಶಾಸಕ ಜಿ.ಡಿ. ಹರೀಶ್‌ಗೌಡರ ಬೆಂಬಲ ಹಾಗೂ ಸಹಕಾರದಿಂದ ನಮ್ಮ ಸಹಕಾರ ಸಂಘ ನೂತನ ಕಟ್ಟಡ ಕಟ್ಟಲು ಸಾಧ್ಯವಾಯಿತು. ಮುಂದಿನ ದಿನಗಳಲ್ಲಿ ಶಾಸಕರ ಸಹಕಾರದಿಂದ ಮತ್ತಷ್ಟು ಜನಪರ ಕೆಲಸ ಮಾಡಲು ಮುಂದಾಗುತ್ತೇನೆ ಎಂದರು.

ಈ ವೇಳೆ ಮೈಮುಲ್ ಅಧ್ಯಕ್ಷ ಈರೇಗೌಡ, ನಿರ್ದೇಶಕರಾದ ಎ.ಟಿ.ಸೋಮಶೇಖರ್, ಕೆ.ಜಿ.ಮಹೇಶ್, ಶಿವಗಾಮಿ, ಕೆ.ಎಸ್.ಕುಮಾರ್, ಪ್ರಕಾಶ್, ನೀಲಾಂಬಿಕೆ, ಲೀಲಾ, ಮಲ್ಲಿಕಾ, ದಾಕ್ಷಾಯಿಣಿ, ಕೆ.ಉಮಶಂಕರ್, ಸದಾನಂದ, ಕಸಬಾ ಟಿಎಪಿಸಿಎಂಎಸ್ ಅಧ್ಯಕ್ಷ ಪ್ರೇಮೇಗೌಡ, ನಿರ್ದೇಶಕರಾದ ಗೋವಿಂದೇಗೌಡ, ಜಿ.ಎನ್. ವೆಂಕಟೇಶ್, ಕೆಂಪೇಗೌಡ, ಹೆಚ್.ಟಿ. ಬಾಬು, ಸೇರಿದಂತೆ ಇನ್ನಿತರರಿದ್ದರು.

ಯುವ ಬ್ರಿಗೇಡ್ ವತಿಯಿಂದ ಕಪಿಲಾ ನದಿ ಸ್ವಚ್ಛತೆ

ನಂಜನಗೂಡು, ಡಿ.14– ನಗರದ ಯುವ ಬ್ರಿಗೇಡ್ ವತಿಯಿಂದ ಭಾನುವಾರ ನಡೆದ ಕಪಿಲಾ ನದಿ ಸ್ವಚ್ಛತೆ ಅಭಿಯಾನದಲ್ಲಿ ಹಲವು ಸಂಘ ಸಂಸ್ಥೆಗಳ ನೂರಾರು ಯುವಕರು ಭಾಗಿಯಾಗಿದ್ದರು. ಅಂತಿಮವಾಗಿ ಶುಕ್ರವಾರದಿಂದ ಭಾನುವಾರದವರೆಗೆ ನಡೆದ ನದಿ ಸ್ವಚ್ಚತಾ ಕಾರ್ಯ ಯಶಸ್ವಿಯಾಗಿ ಪೂರ್ಣಗೊಂಡಿತು.

ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಕಪಿಲಾ ನದಿ ಸ್ನಾನಘಟ್ಟದ ಸ್ವಚ್ಛತಾ ಕಾರ್ಯವನ್ನು ಯುವ ಬ್ರಿಗೇಡ್ ಕಾರ್ಯಕರ್ತರು ಶ್ರೀಕಂಠೇಶ್ವರ ದೋಣಿ ಸಂಘ, ಧರ್ಮಸ್ಥಳ ಸಂಘ, ಎನ್‌ಐ ಕಾಲೇಜು ವಿದ್ಯಾರ್ಥಿಗಳು, ರೋಟರಿ, ಕೆಂಪೇಗೌಡ ಬಡಾವಣೆ ಯುವಕರು ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡು ಕಪಿಲಾ ನದಿ ಹಾಗೂ ಸ್ನಾನಘಟ್ಟ ಸ್ವಚ್ಛಗೊಳಿಸಿದರು.



ಯುವ ಬ್ರಿಗೇಡ್ ಹಾಗೂ ಹಲವು ಸಂಘ ಸಂಸ್ಥೆಗಳ ನೂರಾರು ಮಂದಿ ಕಪಿಲಾ ನದಿ ಸ್ವಚ್ಛಗೊಳಿಸಿದರು.

ನೂರಾರು ಯುವಕರು ಸ್ವಯಂಸೇವಾ ಕಾರ್ಯದಲ್ಲಿ ತೊಡಗಿಕೊಂಡು ನದಿಯಲ್ಲಿ ಭಕ್ತರು ಬಿಟ್ಟಿದ್ದ ಬಟ್ಟೆ ಬರೆ, ಮಡಿಕೆ ಕುಡಿಕೆ, ಅಯ್ಯಪ್ಪನ ಮಾಲೆ, ದೇವರ ಫೋಟೋ, ಪ್ಲಾಸ್ಟಿಕ್ ಕವರ್, ಪೂಜಾ ತ್ಯಾಜ್ಯಗಳು ಸೇರಿದಂತೆ ಸುಮಾರು 6 ಟಿಪ್ಪರ್‌ನಷ್ಟು ತ್ಯಾಜ್ಯವನ್ನು ನದಿಯಿಂದ ಹೊರ ತೆಗೆದರು. ಅಂತಿಮವಾಗಿ ನದಿ ಸ್ವಚ್ಛಗೊಂಡಿದ್ದು, ಭಕ್ತರಿಗೆ ನದಿಗೆ ಬಟ್ಟೆ, ಪೂಜಾ ತ್ಯಾಜ್ಯ ಎಸೆಯದಂತೆ ಮನವಿ ಮಾಡಿ ಅರಿವು ಮೂಡಿಸಿದರು.

ಈ ಅಭಿಯಾನಕ್ಕೆ ನಗರಸಭೆ ಟಿಪ್ಪರ್ ಹಾಗೂ ಜೆಸಿಬಿ ವ್ಯವಸ್ಥೆ ಮಾಡಿತ್ತು. ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದವರಿಗೆ ಶ್ರೀಕಂಠೇಶ್ವರ ದೇವಾಲಯದಿಂದ ಊಟ ತಿಂಡಿ ವ್ಯವಸ್ಥೆ ಮಾಡಲಾಗಿತ್ತು.

ಅಭಿಯಾನದಲ್ಲಿ ಯುವ ಬ್ರಿಗೇಡ್ ರಾಜ್ಯ ಸಂಚಾಲಕ ಎಸ್.ಚಂದ್ರಶೇಖರ್, ತಾಲೂಕು ಸಂಚಾಲಕ ಚಂದನ್, ಸುನೀಲ್, ಗಿರೀಶ್, ರವಿಶಾಸ್ತ್ರಿ ರವಿ, ಮಹದೇವ ಪವನ್, ಸೂರಿ, ಪ್ರಜ್ವಲ್, ಚರಣ್, ಅರ್ಜುನ್, ಶಶಾಂಕ್, ಅನಂತ ಹಾಗೂ ದೋಣಿ ಸಂಘದ ಸುರೇಶ್, ರಂಗಸ್ವಾಮಿ, ಸುಬ್ಬಣ್ಣ, ಚಂದ್ರು, ಶ್ರೀಕಂಠ, ಧರ್ಮಸ್ಥಳದ ಸಂಘದ ಧರ್ಮರಾಜ್, ರೋಟರಿ ಮುರುಳಿ, ರಾಘವೇಂದ್ರ, ಎನ್‌ಐ ಕಾಲೇಜಿನ ವಿದ್ಯಾರ್ಥಿಗಳಾದ ಸಂಜನ್, ಪವನ್, ರಮಿತ, ಯಾನ ಸೀತಮ್ಮ ಉಪಸ್ಥಿತರಿದ್ದರು.

ಮನೋರೋಗಕ್ಕೆ ಸೂಕ್ತ ಚಿಕಿತ್ಸೆ ಲಭ್ಯತೆ; ಸುತ್ತೂರು ಶ್ರೀಗಳ ಶ್ಲಾಘನೆ

ಮಾನಸಿಕ ಸಮಸ್ಯೆ ಇರುವವರ ಚಿಕಿತ್ಸೆ ಮೂಲಕ ಸಮಾಜದ ಮುಖ್ಯವಾಹಿನಿಗೆ ತರುವ ಅವಶ್ಯಕತೆ ಪ್ರತಿಪಾದನೆ

ಮೈಸೂರು, ಡಿ.14(ಎಂಕೆ)– ಬದಲಾದ ಜೀವನ ಶೈಲಿಯಿಂದಾಗಿ ಮನೋರೋಗಗಳು ಹೆಚ್ಚಾಗುತ್ತಿದ್ದು, ಅವರಿಗೆ ಸೂಕ್ತ ಚಿಕಿತ್ಸೆ ಕೊಡಿಸಿ ಅವರನ್ನು ಮತ್ತೆ ಸಮಾಜದ ಮುಖ್ಯ ವಾಹಿನಿಗೆ ತರುವುದು ಅವಶ್ಯವಾಗಿದೆ ಎಂದು ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಮೈಸೂರಿನ ನಿವೇದಿತಾನಗರದ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿ ಮನೋರೋಗಿಗಳಿಗೆ ಚಿಕಿತ್ಸೆ ನೀಡುವ ಕಡಬಮ್ಸ್ ಸ್ಪಾರ್ಕ್ ಆಸ್ಪತ್ರೆಯನ್ನು ಭಾನುವಾರ ಉದ್ಘಾಟಿಸಿ ಮಾತನಾಡಿದ ಅವರು, ಮನೋರೋಗಕ್ಕೆ ಮದ್ದಿಲ್ಲ ಎಂದು ಭಾವಿಸಿ ಸಾಕಷ್ಟು ಮಂದಿ ಮನೋರೋಗಿಗಳಿಗೆ ಚಿಕಿತ್ಸೆ ಕೊಡಿಸದೇ ಅವರನ್ನು ನಿಕೃಷ್ಟವಾಗಿ ಕಾಣುವ ಕಾಲವಿತ್ತು. ಆದರೀಗ ಮಾನಸಿಕ ರೋಗಕ್ಕೂ ಚಿಕಿತ್ಸೆ ನೀಡುವ ಹಂತಕ್ಕೆ ವ್ಯವಸ್ಥೆ ಬೆಳೆದಿದೆ ಎಂದು ಶ್ಲಾಘಿಸಿದರು.

ಹಿಂದೆ ಮಾನಸಿಕ ರೋಗ ಆಸ್ಪತ್ರೆಗೆ ಬಂದವರನ್ನು ಅತ್ಯಂತ ಕೆಟ್ಟದಾಗಿ ಕಾಣಲಾಗುತ್ತಿತ್ತು. ಆದರೆ, ಈಗ ಕಾಲ ಬದಲಾಗಿದ್ದು ಎಲ್ಲರಂತೆ ಅವರೂ ಒಳ್ಳೆ ಜೀವನ ನಡೆಸಬಹುದು. ಸಮಾಜವೂ ಅವರನ್ನು ನೋಡುವ ರೀತಿ ಬದಲಾಗಿದೆ ಈ ನಿಟ್ಟಿನಲ್ಲಿ ಮನೋರೋಗಿಗಳಿಗೆ ಚಿಕಿತ್ಸೆ ನೀಡುವ ಉದ್ದೇಶದಿಂದ ಸ್ಥಾಪಿತವಾಗಿರುವ ಕಡಬಮ್ಸ್ ಗ್ರೂಪ್ ಭಾರತದ ದೊಡ್ಡ ಮಾನಸಿಕ ಆರೋಗ್ಯ ಸಂಸ್ಥೆಯಾಗಿದೆ' ಹಾಗೆಯೇ ಜನರು ಕೂಡ ಸೂಕ್ಷ್ಮಾತಿ ಸೂಕ್ಷ್ಮ ಸಂಗತಿಗಳನ್ನು ಗಂಭೀರವಾಗಿ ಪರಿಗಣಿಸಿ ಒತ್ತಡಕ್ಕೆ ಒಳಗಾಗದೇ ಜೀವನದಲ್ಲಿ ಬಂದದ್ದನ್ನು ಅದೇ ರೀತಿ ಸ್ವೀಕರಿಸಿದರೆ ಮನೋರೋಗದಿಂದ ದೂರ ಉಳಿಯಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.

ಮಾಜಿ ಸಚಿವ ಎಸ್.ಎ.ರಾಮದಾಸ್ ಮಾತನಾಡಿ, ಮಾನಸಿಕ ಸಮಸ್ಯೆಯಿಂದ ಜೀವನವನ್ನೇ ಕಳೆದುಕೊಳ್ಳುವ ಹಂತ ತಲುಪಿದ ಸಾವಿರಾರು ಮಂದಿ ಸೂಕ್ತ ಚಿಕಿತ್ಸೆ ಪಡೆದು ಸಹಜ ಜೀವನಕ್ಕೆ ಮರಳುತಿದ್ದಾರೆ. ಭಾರತ ಅಭಿವೃದ್ಧಿಯಲ್ಲಿ ನಾಲ್ಕನೇ ಸ್ಥಾನದಿಂದ 3ನೇ ಸ್ಥಾನಕ್ಕೆ ಬರುತ್ತಿದ್ದರೂ ಸಮಾಜದಲ್ಲಿರುವ ಸಂತೋಷದ ಸೂಚ್ಯಂಕದಲ್ಲಿ 116ನೇ ಸ್ಥಾನದಲ್ಲಿದೆ. ಇದಕ್ಕೆ ಒತ್ತಡದ ಜೀವನವೇ ಕಾರಣವಾಗಿದೆ. ಈ ರೀತಿ ಸಮಸ್ಯೆಗಳನ್ನು ಎದುರಿಸಲು ಖಾಸಗಿ ಸಂಸ್ಥೆಗಳೂ ಕೈ ಜೋಡಿಸಬೇಕಿದೆ ಎಂದರು. ಕಡಬಮ್ಸ್ ಸ್ಪಾರ್ಕ್ ಹಾಸ್ಪಿಟಲ್ಸ್ ವ್ಯವಸ್ಥಾಪಕ ನಿರ್ದೇಶಕ ಸಂದೇಶ್ ಆರ್.ಕಡಬಮ್, ಮನೋವೈದ್ಯ ಡಾ.ಕೆ.ಆರ್.ಕೃಷ್ಣ, ಸಂಸ್ಥೆಯ ಎನ್.ಪವನ್‌ಕುಮಾರ್ ಮತ್ತಿತರರಿದ್ದರು.



ಮೈಸೂರಿನ ನಿವೇದಿತಾನಗರದ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿ ಮನೋರೋಗಿಗಳಿಗೆ ಚಿಕಿತ್ಸೆ ನೀಡುವ ಕಡಬಮ್ಸ್ ಸ್ಪಾರ್ಕ್ ಆಸ್ಪತ್ರೆಯನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಭಾನುವಾರ ಉದ್ಘಾಟಿಸಿದರು. ಮಾಜಿ ಸಚಿವ ಎಸ್.ಎ.ರಾಮದಾಸ್, ಕಡಬಮ್ಸ್ ಸ್ಪಾರ್ಕ್ ಹಾಸ್ಪಿಟಲ್ಸ್ ವ್ಯವಸ್ಥಾಪಕ ನಿರ್ದೇಶಕ ಸಂದೇಶ್ ಆರ್.ಕಡಬಮ್, ಮನೋವೈದ್ಯ ಡಾ.ಕೆ.ಆರ್.ಕೃಷ್ಣ, ಎನ್.ಪವನ್‌ಕುಮಾರ್ ಮತ್ತಿತರರಿದ್ದರು.

ಎಸ್.ಎ.ರಾಮದಾಸ್ ಸಕ್ರಿಯ ರಾಜಕಾರಣಕ್ಕೆ ಮರಳಲಿ


ಸಮಾಮುಖಿ ಕಾಳಜಿ, ಜನಪರ ಚಿಂತನೆ ಹೊಂದಿರುವ ಮಾಜಿ ಸಚಿವ ಎಸ್.ಎ. ರಾಮದಾಸ್ ಅವರು ಮತ್ತೆ ಸಕ್ರಿಯ ರಾಜಕಾರಣಕ್ಕೆ ಬರಬೇಕು. ಕೆ.ಆರ್.ಕ್ಷೇತ್ರದ ಶಾಸಕರಾಗಿ ಬಹಳಷ್ಟು ಉತ್ತಮ ಕೆಲಸ ಮಾಡಿದ್ದಾರೆ. ಕಳೆದ ಎರಡು ವರ್ಷಗಳಿಂದ ಅವರು ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿಲ್ಲ. ಹೀಗಾಗಿ ಅವರನ್ನು ನೋಡಿ ಬಹಳ ದಿನವಾಗಿತ್ತು. ಸಮಾಜದ ಬಗ್ಗೆ ಅತ್ಯಂತ ಕಾಳಜಿ ಉಳ್ಳವರಾದ ರಾಮದಾಸ್, ಸಮಾಜದ ಅಭಿವೃದ್ಧಿ ಬಗ್ಗೆ ತಮ್ಮದೇ ಕಲ್ಪನೆಗಳನ್ನು ಹೊಂದಿದವರು. ಅವರು, ಮತ್ತೆ ರಾಜಕಾರಣಕ್ಕೆ ಮರಳಿ ತಮ್ಮ ಕಾರ್ಯಚಟುವಟಿಕೆ ಆರಂಭಿಸಬೇಕು.

– ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾಸೇನಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಡೆವಿಲ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕಿಸ್ ಕಿಸ್ಕೋ ಪ್ಯಾರ್ ಕರೂ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಖಂಡ–2 (ತೆ)	4 ಪ್ರದರ್ಶನಗಳು
ಸಂಗಂ	
ಡೆವಿಲ್ (ಕ)	3 ಪ್ರದರ್ಶನಗಳು
ಲಿಡೋ	
ಅಖಂಡ–2 (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಂತಾರ–2 (ಕ)	4 ಪ್ರದರ್ಶನಗಳು

ನಾಳೆ ವಿಶೇಷ ಸ್ವಾತಿ ಪೂಜೆ



ಮೈಸೂರು, ಡಿ.14– ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಡಿ.16ರಂದು ಮಂಗಳವಾರ ಸ್ವಾತಿ ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ.

ಅಂದು ಬೆಳಿಗ್ಗೆ 9 ಗಂಟೆಯಿಂದ ಸಂಕಲ್ಪದೊಂದಿಗೆ ಪ್ರಾರಂಭವಾಗಿ ಮಧ್ಯಾಹ್ನ 1.30ಕ್ಕೆ ಮಹಾಮಂಗಳಾರತಿ, ತೀರ್ಥ ಪ್ರಸಾದ ಏರ್ಪಡಿಸಲಾಗಿದೆ. ಸಂಜೆ ಧನುರ್ಮಾಸದ ಪ್ರಯುಕ್ತ ಪ್ರಾಕಾರೋತ್ಸವ ಇರುವುದಿಲ್ಲ. 16 ಡಿಸೆಂಬರ್‌ರಿಂದ 16 ಜನವರಿ 2026ರವರೆಗೆ ಬೆಳಿಗ್ಗೆ 5.30ರಿಂದ 10 ಗಂಟೆವರೆಗೆ ಮತ್ತು ಸಂಜೆ 5.30ರಿಂದ 7.30ವರೆಗೆ ಧನುರ್ಮಾಸದ ಪ್ರಯುಕ್ತ ದೇವಸ್ಥಾನದ ಪೂಜಾ ವೇಳೆಯನ್ನು ನಿಗದಿಪಡಿಸಲಾಗಿದೆ. ಡಿ.30ರಂದು ವೈಕುಂಠ ಏಕಾದಶಿ ವಿಶೇಷ ಪೂಜೆ ಸಹ ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಮುಖ್ಯಸ್ಥ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ತಿಳಿಸಿದ್ದಾರೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರಿದ್ದಾರೆ. ಮಾಹಿತಿಗೆ ಮೊಬೈಲ್ 9342188323, 7598832271 ಸಂಪರ್ಕಿಸಬಹುದು.

ತ್ವರಿತವಾಗಿ ನಡೆಯುತ್ತಿದೆ ಮೈಸೂರಿನಲ್ಲಿ

ಅಂಡರ್ ಗ್ರೌಂಡ್ ವಿದ್ಯುತ್ ಕೇಬಲ್ ಅಳವಡಿಕೆ ಕಾಮಗಾರಿ

408 ಕೋಟಿ ವೆಚ್ಚದಲ್ಲಿ 1,100 ಕಿಲೋ ಮೀಟರ್‌ವರೆಗೆ ಭೂಗತ ಕೇಬಲ್ ವ್ಯವಸ್ಥೆ



ಮೈಸೂರಿನ ಶಿವರಾಂಪೇಟೆಯಲ್ಲಿ ಅಂಡರ್ ಗ್ರೌಂಡ್ ಕೇಬಲ್ ಅಳವಡಿಸಲು ಡ್ರಿಲ್ ಮಾಡುತ್ತಿರುವುದು.

ಮೈಸೂರು, ಡಿ.14(ಬಿಸಿಟಿ, ಬಿಎಲ್‌ಯು)– ಮೈಸೂರು ನಗರದಲ್ಲಿ ಓವರ್ ಹೆಡ್ (ಮೇಲ್ಭಾಗದ) ವಿದ್ಯುತ್ ಮಾರ್ಗ ತೆರವು ಮಾಡಿ ವಿದೇಶಿ ಮಾದರಿಯಲ್ಲಿ ಭೂಗತ ಕೇಬಲ್‌ಗಳನ್ನು ಅಳವಡಿಸುವ 408 ಕೋಟಿ ರೂಪಾಯಿಗಳ ಯೋಜನೆಯನ್ನು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್) ಅನುಷ್ಠಾನಗೊಳಿಸುತ್ತಿದೆ.

ಅನಗತ್ಯ ವಿದ್ಯುತ್ ವ್ಯತ್ಯಯ ಹಾಗೂ ವಿದ್ಯುತ್ ಅವಘಡಗಳನ್ನು ತಪ್ಪಿಸುವ ಉದ್ದೇಶದಿಂದ ಸೆಸ್ಕ್ ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದೆ.

ಈ ಮೂಲಕ ಮೈಸೂರು ನಗರದಾದ್ಯಂತ ಸುರಕ್ಷಿತ ಹಾಗೂ ಹೆಚ್ಚು ವಿಶ್ವಾಸಾರ್ಹ ವಿದ್ಯುತ್ ಸರಬರಾಜು ಖಚಿತಪಡಿಸಿಕೊಳ್ಳಲು ಭೂಗತ ಕೇಬಲ್ ಅಳವಡಿಸಲಾಗುತ್ತಿದೆ.

ಮೈಸೂರು ನಗರದ ನಾಲ್ಕು ಉಪ ವಿಭಾಗಗಳಲ್ಲಿ 408.94 ಕೋಟಿ ವೆಚ್ಚದಲ್ಲಿ ಈ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಈ ಮೂಲಕ 1,100 ಕಿಲೋ ಮೀಟರ್‌ವರೆಗೆ ಭೂಗತ ಕೇಬಲ್ ಅಳವಡಿಸಲಾಗುತ್ತಿದೆ. ಇದರಿಂದ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳು ಹಾಗೂ ತಾಂತ್ರಿಕ ದೋಷಗಳಿಂದ ಉಂಟಾಗುವ ವಿದ್ಯುತ್ ಅಡಚಣೆಗಳನ್ನು ಗಮನಾರ್ಹವಾಗಿ ಕಡಿಮೆ ಮಾಡಬಹುದು.

ಮೈಸೂರು ನಗರದ ವಿ.ವಿ. ಮೊಹಲ್ಲಾ ವಿಭಾಗ, ಆರ್.ಕೆ.ನಗರ ಉಪ ವಿಭಾಗ, ಎನ್.ಆರ್.ವಿಭಾಗ, ಚಾಮುಂಡಿಪುರಂ ಮತ್ತು ಜ್ಯೋತಿನಗರ ಉಪ ವಿಭಾಗಗಗಳಲ್ಲಿ ಅಂಡರ್ ಗ್ರೌಂಡ್ ಕೇಬಲ್ ಅಳವಡಿಸಲಾಗುತ್ತಿದೆ.

ಇದರ ಪ್ರಯೋಜನಗಳು

ವಿದ್ಯುತ್ ಅಡಚಣೆ ಕಡಿಮೆ ಆಗುತ್ತದೆ, ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡಬಹುದು, ಸುರಕ್ಷತೆ ಹೆಚ್ಚಳವಾಗುತ್ತದೆ, ತಾಂತ್ರಿಕ ನಷ್ಟ ಕಡಿಮೆಯಾಗುತ್ತದೆ, ನಗರದ ಸೌಂದರ್ಯಕ್ಕೆ ಪೂರಕವಾಗಿರುತ್ತದೆ, ನಿರ್ವಹಣೆಯ ವೆಚ್ಚ ಕಡಿಮೆ ಆಗುತ್ತದೆ.

ಅಮೇರಿಕಾ, ಚೀನಾ, ಜಪಾನ್ ಸೇರಿದಂತೆ ಹಲವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಓವರ್ ಹೆಡ್ ವಿದ್ಯುತ್ ಮಾರ್ಗ ಕಾಣುವುದೇ ಇಲ್ಲ. ಎಲ್ಲೆಡೆ ಭೂಗತ ಕೇಬಲ್‌ಗಳನ್ನು ಅಳವಡಿಸಲಾಗಿದೆ. ಇದೇ ಮಾದರಿಯಲ್ಲಿ ಮೈಸೂರಿನಲ್ಲಿ ಕೂಡ ಭೂಗತ ಕೇಬಲ್ ಅಳವಡಿಸಲಾಗುತ್ತಿದ್ದು, ಇದರಿಂದ ಬಹಳಷ್ಟು ಪ್ರಯೋಜನವಿದೆ.

ಕ್ರಿಸ್ಮಸ್ ಕ್ಯಾರಲ್ ಗೀತಗಾಯನ ಸ್ಪರ್ಧೆ

ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ಚಾಂಪಿಯನ್ ಆಫ್ ದಿ ಇಯರ್



ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ಆಯೋಜಿಸಿದ್ದ 33ನೇ ಕ್ರಿಸ್ಮಸ್ ಕ್ಯಾರಲ್ ಗೀತಗಾಯನ ಸ್ಪರ್ಧೆಯ ಚಾಂಪಿಯನ್ ಆಫ್ ದಿ ಇಯರ್–2025ರ ವಿಜಯನಗರದ ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ತಂಡದೊಂದಿಗೆ ಗಣ್ಯರು.

ಮೈಸೂರು, ಡಿ.14(ಎಂಟಿವೈ/ವಿವಿಹೆಚ್)– ಮೈಸೂರಿನ ಟೆರೆಷಿಯನ್ ಕಾಲೇಜಿನ ಸಭಾಂಗಣದಲ್ಲಿ ಕ್ರಿಸ್‌ಮಸ್ ಅಂಗವಾಗಿ ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿ ಯೇಷನ್ ಆಯೋಜಿಸಿದ್ದ 33ನೇ ಕ್ರಿಸ್ಮಸ್ ಕ್ಯಾರಲ್ ಗೀತಗಾಯನ ಸ್ಪರ್ಧೆಯಲ್ಲಿ ಚಾಂಪಿಯನ್ ಆಫ್ ದಿ ಇಯರ್–2025ರ ಚಾಂಪಿಯನ್ ಆಗಿ ವಿಜಯನಗರದ ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ಹೊರಹೊಮ್ಮಿತು.

ಈ ಸ್ಪರ್ಧೆಯಲ್ಲಿ 12 ವಿವಿಧ ವಿಭಾಗಗಳಿಗೆ 3 ಸಾವಿರಕ್ಕೂ ಅಧಿಕ ಮಂದಿಗಳನ್ನೊಳಗೊಂಡ 110 ತಂಡಗಳು ಭಾಗವಹಿಸಿದ್ದವು. ಇದರಲ್ಲಿ ಮಕ್ಕಳು, ವಿದ್ಯಾರ್ಥಿಗಳು, ಚರ್ಚ್‌ಗಳ ಪಾದ್ರಿಗಳು ಭಾಗವಹಿಸಿದ್ದರು. ಅದರಲ್ಲಿ 12 ವಿಭಾಗಗಳಿಂದ ಒಟ್ಟು 36 ತಂಡಗಳು ಪ್ರಶಸ್ತಿಗಳನ್ನು ಬಾಚಿಕೊಂಡವು.

ಭಾನುವಾರ ನಡೆದ ಸಮಾರೋಪ ಸಮಾರಂಭದಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ಮಾತನಾಡಿದ ಅವರು, ಈ ದಿನಮಾನದಲ್ಲಿ ಯೇಸು ಕ್ರಿಸ್ತರ ಸಂದೇಶಗಳು ನಿಜವಾಗಿಯೂ ಮುಖ್ಯವಾಗಿದೆ. ಅವರ ಸಂದೇಶಗಳ ಮೂಲಕ ಸಂತೋಷವನ್ನು ಹೊಂದಬಹುದು. ಪ್ರತಿಯೊಬ್ಬರಲ್ಲಿಯೂ ಕೆಲವು ಶ್ರೇಷ್ಠತೆಯ ಅಂಶಗಳಿವೆ. ಅವುಗಳೊಂದಿಗೆ ನಮ್ಮ ಅದ್ಭುತ ಜೀವನವನ್ನು ಆನಂದಿಸಲು ಮರೆತಿದ್ದೇವೆ ಎಂದು ಹೇಳಿದರು.

ರೆ.ಫಾ. ಎಡ್ವರ್ಡ್ ವಿಲಿಯಂ ಸಲ್ಡಾನ್ಹಾ ಅವರು ಎಲ್ಲರಿಗೂ ಕ್ರಿಸ್ಮಸ್ ಹಬ್ಬದ ಸಂದೇಶ ಸಾರಿದರು. ಈ ವೇಳೆ ಇನ್ಫೋಸಿಸ್‌ನ ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿ ಶಾಜಿ ಮ್ಯಾಥ್ಯೂ, ಡಾ. ಎ.ಟಿ.ಸದೆಬೋಸ್ ಅವರನ್ನು ಸನ್ಮಾನಿಸಲಾಯಿತು.

ಫಾ. ಅಗಸ್ಟಿನ್ ಪಯಂಪಲ್ಲಿ, ಸಂಘದ ಅಧ್ಯಕ್ಷ ಜೋಸೆಫ್ ಮ್ಯಾಥ್ಯೂ, ಕಾರ್ಯದರ್ಶಿ ಎಂ.ಕೆ.ಜಾನ್ ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ಕ್ಯಾರಲ್ ಗೀತ ಗಾಯನ ಸ್ಪರ್ಧೆಯನ್ನು ರೆ.ಫಾ.ಥಾಮಸ್ ಅಂಥೋಣಿ ವಾಜಪಿಳ್ಳೆ ಉದ್ಘಾಟಿಸಿ, ಸ್ಪರ್ಧಿಗಳಿಗೆ ಶುಭ ಕೋರಿದರು. ಈ ಸಂದರ್ಭದಲ್ಲಿ ರೆ.ಫಾ.ಅಗಸ್ಟಿನ್ ಪಯಂಪಲ್ಲಿ, ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ಅಧ್ಯಕ್ಷ ಪ್ರೊ.ಜೋಸೆಫ್ ಮ್ಯಾಥ್ಯೂವ್, ಕಾರ್ಯದರ್ಶಿ ಎಂ.ಕೆ.ಜಾನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪ್ರಶಸ್ತಿ ವಿಜೇತರು

ಕಿಂಡರ್ ಗಾರ್ಡನ್ ವಿಭಾಗ: ಎನ್‌ಪಿಎಸ್ ಇಂಟರ್ ನ್ಯಾಷನಲ್ ಸ್ಕೂಲ್(ವಿನ್ನರ್), **1 ರಿಂದ 4ನೇ ತರಗತಿ ವಿಭಾಗ:** ಎನ್‌ಪಿಎಸ್ ಇಂಟರ್ ನ್ಯಾಷನಲ್ ಸ್ಕೂಲ್(ವಿನ್ನರ್), **5 ರಿಂದ 7ನೇ ತರಗತಿ ವಿಭಾಗ:** ವಿಜಯನಗರದ ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ (ವಿನ್ನರ್), **5 ರಿಂದ 8ನೇ ತರಗತಿ ವಿಭಾಗ:** ಸೆಂಟ್ ಅರ್ನಾಲ್ಡ್ಸ್ ಸೆಂಟ್ರಲ್ ಸ್ಕೂಲ್(ವಿನ್ನರ್), **8 ರಿಂದ 10ನೇ ತರಗತಿ ವಿಭಾಗ:** ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್(ವಿನ್ನರ್), **8 ರಿಂದ 10ನೇ ತರಗತಿ ವಿಭಾಗ:** ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್(ವಿನ್ನರ್), **ಪಿಯು ಕಾಲೇಜು ವಿಭಾಗ:** ಸೆಂಟ್ ಫಿಲೋಮಿನಾಸ್ ಪಿಯು ಕಾಲೇಜು(ವಿನ್ನರ್), **ಯುಜಿ/ಪಿಜಿ ಕಾಲೇಜು ವಿಭಾಗ:** ಪುಷ್ಪಾಶ್ರಮ ಇನ್‌ಸ್ಟಿಟ್ಯೂಟ್ ಆಫ್ ಫಿಲೋಸಫಿ ಅಂಡ್ ರಿಲೀಜಿಯನ್ (ವಿನ್ನರ್), **ಕನ್ನಡ, ಇತರೆ ಭಾಷೆ–** ಪುಷ್ಪಾಶ್ರಮ ಇನ್‌ಸ್ಟಿಟ್ಯೂಟ್ ಆಫ್ ಫಿಲೋಸಫಿ ಅಂಡ್ ರಿಲೀಜಿಯನ್(ವಿನ್ನರ್), **ಚರ್ಚ್/ಪ್ಯಾರಿಷ್–ಇಂಗ್ಲಿಷ್ ವಿಭಾಗ:** ಸಿಎಸ್‌ಐ ಸೆಂಟ್ ಬಾರ್ತಲೋಮೇವ್ ಚರ್ಚ್ (ವಿನ್ನರ್), **ಕನ್ನಡ, ಇಂಗ್ಲಿಷ್, ಇತರೆ ಭಾಷೆ ವಿಭಾಗ:** ವರ್ಜಿನ್ ಆಫ್ ದಿ ಪೂರ್ ಚರ್ಚ್ (ವಿನ್ನರ್), **ವೃತ್ತಿಪರರು ವಿಭಾಗ:** ರಾಜೀವ್ ನಗರ ಸೆಂಟ್ ಜೆರೆಸಾ ಆಫ್ ಕಲ್ಕತ್ತಾ ಚರ್ಚ್(ವಿನ್ನರ್), **ಸಮಗ್ರ ಪ್ರಶಸ್ತಿ:** ವಿಜಯನಗರದ ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್.

ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ತರಬೇತಿ ಕಾರ್ಯಕ್ರಮ



ಮೈಸೂರು, ಡಿ. 14– ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಬಿಸಿಎ ವಿಭಾಗ ಹಾಗೂ ಐಕ್ಯೂಎಸಿ ವತಿಯಿಂದ ಐಸಿಟಿ ಅಕಾಡೆಮಿ ಹಾಗೂ ಐಬಿಎಂ ಕಂಪನಿ ಸಹಯೋಗದೊಂದಿಗೆ ಬಿಸಿಎ ವಿದ್ಯಾರ್ಥಿಗಳಿಗೆ ಆರ್ಟಿಫಿಷಿಯಲ್ ಇಂಟೆಲೆಜೆನ್ಸ್ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ವೇಳೆ ಸಂಪನ್ಮೂಲ ವ್ಯಕ್ತಿ ದಿಲನ್ ಸೋಮಣ್ಣ, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಡಾ. ಎಸ್.ಆರ್. ರಮೇಶ್, ಪರೀಕ್ಷಾ ನಿಯಂತ್ರಣಾಧಿಕಾರಿ ಶ್ರೀಮತಿ ಶೃತಿ ಪೂಣಚ್ಚ, ಡೀನ್ ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಶ್ರೀಧರ ಹೆಚ್., ಬಿಸಿಎ ವಿಭಾಗದ ಮುಖ್ಯಸ್ಥ ಎ ರಾಧೇಶ್, ಸಹಾಯಕ ಪ್ರಾಧ್ಯಾಪಕಿ ಅಪೂರ್ವ ಡಿ, ನಿತ್ಯಶ್ರೀ ಆರ್, ಪ್ರಿಯ ವಿ.ಎನ್., ಅನ್ಮೋಲ್ ಮತ್ತಿತರರು ಉಪಸ್ಥಿತರಿದ್ದರು.

ಎ.ಟಿ. ಸದೆಬೋಸ್‌ಗೆ ಸನ್ಮಾನ



ಮೈಸೂರು, ಡಿ. 14– ಮೈಸೂರಿನ ಸಂತ ಫಿಲೋಮಿನಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಎ.ಟಿ. ಸದೆಬೋಸ್ ಅವರು ಡಾ. ಎಸ್. ಚಂದ್ರಕಿರಣ್ ಮಾರ್ಗದರ್ಶನದಲ್ಲಿ 'ನವೋತ್ತರ ಕನ್ನಡ ಸಾಹಿತ್ಯದಲ್ಲಿ ಜಾಗತೀಕರಣದ ಆಯಾಮಗಳು' ವಿಷಯ ಕುರಿತು ಸಂಶೋಧನೆ ನಡೆಸಿ ಮಂಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸಂತ ಫಿಲೋಮಿನಾ ಕಾಲೇಜಿನ ಕನ್ನಡ ವಿಭಾಗದ ಇತಿಹಾಸದಲ್ಲಿ ಪಿಎಚ್.ಡಿ ಪದವಿ ಪಡೆದ ಮೊದಲಿಗರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿ ಕಳೆದ 32 ವರ್ಷಗಳಿಂದ ಕನ್ನಡ ಅಧ್ಯಾಪಕ ವೃತ್ತಿಯಲ್ಲಿ ಸಾರ್ಥಕ ಸೇವೆ ಸಲ್ಲಿಸಿದ್ದಾರೆ. ಇವರ ಕನ್ನಡ ಕಟ್ಟುವ ನಿಷ್ಠೆ ಮತ್ತು ಪ್ರಾಮಾಣಿಕತೆಗಾಗಿ ಮೈಸೂರು ವಿಶ್ವವಿದ್ಯಾನಿಲಯದ ಪದವಿ ಕನ್ನಡ ಅಧ್ಯಾಪಕರ ಸಂಘದ ಮಾಜಿ ಅಧ್ಯಕ್ಷರಾದ ಡಾ. ಎಚ್.ಆರ್. ತಿಮ್ಮೇಗೌಡ ಹಾಗೂ ವಿವಿಧ ಕಾಲೇಜಿನ ಅಧ್ಯಾಪಕರು ಸನ್ಮಾನಿಸಿದರು.

ಮೈಸೂರು ಅಭಿವೃದ್ಧಿ, ಜನರ ಜೀವನ ಸುಧಾರಣೆಗೆ ಮಾಧ್ಯಮ ಸಹಕರಿಸಬೇಕು

● ಸಂಸದ ಯದುವೀರ್ ಸಲಹೆ ● ಪತ್ರಿಕಾ ದಿನಾಚರಣೆ; ವಾರ್ಷಿಕ ಪ್ರಶಸ್ತಿ ಪ್ರದಾನ



ಮೈಸೂರು ವಿಜ್ಞಾನ ಭವನದಲ್ಲಿ ಭಾನುವಾರ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ವಾರ್ಷಿಕ ಪ್ರಶಸ್ತಿ ಪ್ರದಾನ ಹಾಗೂ ಹಿರಿಯ ಪತ್ರಕರ್ತರಿಗೆ ಅಭಿನಂದನಾ ಕಾರ್ಯಕ್ರಮ ನಡೆಯಿತು.

ಮೈಸೂರು, ಡಿ.14(ಎಂಕೆ)– ಪ್ರಜಾಪ್ರಭುತ್ವ ರಕ್ಷಣೆಯಲ್ಲಿ ಮಾಧ್ಯಮದ ಪಾತ್ರ ಮಹತ್ವದ್ದಾಗಿದ್ದು, ಈ ವ್ಯವಸ್ಥೆ ಉಳಿಸಲು ಪತ್ರಕರ್ತರು ಕೆಲವೊಂದು ತ್ಯಾಗ ಮಾಡುವುದು ಅನಿವಾರ್ಯವಾಗಿದೆ ಹಾಗೆಯೇ ಮೈಸೂರು ಅಭಿವೃದ್ಧಿ, ಜನರ ಜೀವನ ಸುಧಾರಣೆಗೆ ಮಾಧ್ಯಮಗಳು ಸಹಕರಿಸಬೇಕಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ, ವಾರ್ಷಿಕ ಪ್ರಶಸ್ತಿಗಳ ಪ್ರದಾನ ಹಾಗೂ ಹಿರಿಯ ಪತ್ರಕರ್ತರಿಗೆ ಅಭಿನಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರಿನಲ್ಲಿ ಅರಸರ ಕಾಲದಿಂದಲೂ ಪತ್ರಕರ್ತರು ಉತ್ತಮ ಸೇವೆ ನೀಡುತ್ತಿದ್ದು, ಮೈಸೂರಿನ ಪರಂಪರೆಯನ್ನು ತಿಳಿಯಬೇಕಾದರೆ ಹಳೆ ಪತ್ರಿಕೆಗಳು ಸಹಕಾರಿಯಾಗಿವೆ ಎಂದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘಕ್ಕೆ ತನ್ನದೇ ಇತಿಹಾಸವಿದ್ದು, ಒಗ್ಗಟ್ಟಿನಿಂದ ಮುನ್ನಡೆಯುತ್ತಿದೆ. ಮೈಸೂರು ಮತ್ತು ಮೈಸೂರು ಸಮುದಾಯದ ಬೆಳವಣಿಗೆಗೆ ಪತ್ರಕರ್ತರ ಕೊಡುಗೆ ಅಪಾರವಿದೆ. ಈ ನಿಟ್ಟಿನಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಮುನ್ನಡೆಯಲಿ ಎಂದು ಆಶಿಸಿದರಲ್ಲದೆ ನಾವು ಅಭಿವೃದ್ಧಿ ವಿರೋಧಿಗಳಲ್ಲ. ಆದರೆ ಅದು ಮೈಸೂರು ಪರಂಪರೆ, ಹಿತಾಸಕ್ತಿಗೆ ಅನುಗುಣವಾಗಿರಬೇಕು. ಜನರ ಜೀವನ ಸುಧಾರಣೆಯೇ ನಮಗೆ ಮುಖ್ಯ. ಈ ನಿಟ್ಟಿನಲ್ಲಿ ಮಾಧ್ಯಮಗಳೂ ಉಪಯುಕ್ತ ಸಲಹೆ ನೀಡುವ ಮೂಲಕ ಬೆಂಬಲಿಸಬೇಕೆಂದು ಮನವಿ ಮಾಡಿದರು.

ಯಾರಿಗೂ ನೋವುಂಟು ಮಾಡಬೇಡಿ: ಮಾಜಿ ಸಚಿವರೂ ಆದ ಶಾಸಕ ಜಿ.ಟಿ. ದೇವೇಗೌಡ ಮಾತನಾಡಿ, ಮೈಸೂರು ಭಾಗದ ಪತ್ರಿಕಾ ರಂಗ ದೇಶದಾದ್ಯಂತ ಹೆಸರು ಮಾಡಿದೆ. ಅನೇಕ ದಿಗ್ಗಜರು ಇಲ್ಲಿ ಬಂದು ಹೋಗಿದ್ದಾರೆ. ಯಾರಿಗಾದರೂ ಒಳಿತಾಗುವ ಕೆಲಸ ಮಾಡಲಿ, ಮಾಡದೆಯೂ ಇರಲಿ, ಆದರೆ ಯಾರೊಬ್ಬರ ಮನಸ್ಸಿಗೆ ನೋವುಂಟು ಮಾಡುವ ಕೆಲಸವನ್ನು ಮಾಧ್ಯಮಗಳು ವೃಥಾ ಮಾಡುವುದು ಬೇಡ ಎಂದು ಸಲಹೆ ನೀಡಿದರು.


ವಿಶ್ವಾಸಾರ್ಹತೆ ಉಳಿಸಿಕೊಳ್ಳಬೇಕು: ನ್ಯೂಸ್ 18 ಕನ್ನಡ ಸುದ್ದಿ ವಾಹಿನಿಯ ಸಂಪಾದಕ ಎ.ಹರಿಪ್ರಸಾದ್ ಮಾತನಾಡಿ, ಮಾಧ್ಯಮಗಳ ವಿಶ್ವಾಸಾರ್ಹತೆ ಸದಾ ಚರ್ಚೆಗೆ ಒಳಗಾಗುತ್ತಿರುವ ವಿಷಯವಾಗಿದೆ. ಮಾಧ್ಯಮಗಳು ವಿಶ್ವಾಸಾರ್ಹತೆ ಉಳಿಸಿಕೊಳ್ಳುತ್ತಿಲ್ಲ ಎಂಬ ಆತಂಕವೂ ಸಹಾ ಆಗಾಗ್ಗೆ ಉಂಟಾಗುತ್ತಿರುತ್ತದೆ. ಆದ್ದರಿಂದ ವಿಶ್ವಾಸಾರ್ಹತೆ ಉಳಿಸಿಕೊಳ್ಳುವುದು ನಮ್ಮ ಜವಾಬ್ದಾರಿ ಹಾಗೂ ಕರ್ತವ್ಯವಾಗಿದೆ. ಭಾರತದ ಸ್ವಾತಂತ್ರ ಹೋರಾಟದ ವೇಳೆಯೂ ಅಪಸ್ವರ ಕೇಳಿಬಂದರೂ ಅಂದಿನ ಕಾಲಘಟ್ಟದ ಪತ್ರಕರ್ತರ ಪರಿಶ್ರಮ ದಿಂದಾಗಿ ವಿಶ್ವಾಸಾರ್ಹತೆ ಉಳಿದುಕೊಂಡಿತ್ತು. ಇದೇ ನಿಟ್ಟಿನಲ್ಲಿ ಈಗಲೂ ಪತ್ರಿಕೋದ್ಯಮದಲ್ಲಿರುವವರು ಕೆಲಸ ಮಾಡಬೇಕಿದೆ. ಮಾಧ್ಯಮಗಳು ಸದಾ ಜನಪರವಾಗಿ ಧ್ವನಿಯೆತ್ತಬೇಕು. ಸರ್ಕಾರಕ್ಕೆ ಕಿರಿಕಿರಿ ಆಗುತ್ತದೆ ಎಂಬ ಕಾರಣದಿಂದಾಗಿ ಟೀಕಿಸುವುದನ್ನು ಬಿಡಬಾರದು ಎಂದು ಸಲಹೆ ನೀಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಜಿಎಸ್‌ಎಸ್ ಸಮೂಹ ಸಂಸ್ಥೆ ಮುಖ್ಯಸ್ಥ ಶ್ರೀಹರಿ ದ್ವಾರಕನಾಥ್, ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ ಮತ್ತಿತರರಿದ್ದರು.

ವಾರ್ಷಿಕ ಪ್ರಶಸ್ತಿ ಪ್ರದಾನ, ಹಿರಿಯ ಪತ್ರಕರ್ತರಿಗೆ ಅಭಿನಂದನೆ...

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ನಗರ ಪ್ರದೇಶದಿಂದ ಜಸ್ಟ್ ಕನ್ನಡ ಸುದ್ದಿ ಸಂಸ್ಥೆಯ ಪ್ರಧಾನ ಸಂಪಾದಕ ವಿ.ಮಹೇಶ್ ಕುಮಾರ್, ಗ್ರಾಮೀಣ ಭಾಗದಿಂದ ಆಂದೋಲನ ದಿನಪತ್ರಿಕೆಯ ಹಿರಿಯ ವರದಿಗಾರ ಟಿ.ಎ.ಸಾದಿಕ್ ಪಾಷ, ವಿಜಯ ಕರ್ನಾಟಕ ಪತ್ರಿಕೆಯ ಕೆ.ಎಸ್.ಮಂಜುನಾಥಸ್ವಾಮಿ, ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್‌ನ ಹಿರಿಯ ಛಾಯಾಗ್ರಾಹಕ ಎಸ್.ಉದಯಶಂಕರ್, ದೃಶ್ಯ ಮಾಧ್ಯಮ ವಿಭಾಗದಿಂದ ಸುವರ್ಣ ನ್ಯೂಸ್‌ನ ಜಿಲ್ಲಾ ವರದಿಗಾರ ಸಿ.ಎಂ.ಮಧುಸೂದನ್, ಛಾಯಾಗ್ರಾಹಕ ಪ್ರಮೋದ್ ಪ್ರಭು ಅವರನ್ನು ಅಭಿನಂದಿಸಲಾಯಿತು. ಪ್ರತಿಷ್ಠಿತ ಟಿಎನ್‌ಐಟಿ ಪ್ರಶಸ್ತಿಗೆ ನ್ಯೂಸ್ ಫಸ್ಟ್ ಜಿಲ್ಲಾ ವರದಿಗಾರ ರವಿ ಪಾಂಡವಪುರ ಮತ್ತು ಟಿವಿ 9 ವಾಹಿನಿಯ ಜಿಲ್ಲಾ ವರದಿಗಾರ ರಾಮ್ ಭಾಜನರಾದರು. ಹಾಗೆಯೇ ಅತ್ಯುತ್ತಮ ಕನ್ನಡ ವರದಿಗಾರಿಕೆ ಪ್ರಶಸ್ತಿಗೆ ಆಂದೋಲನ ದಿನಪತ್ರಿಕೆ ದಾ.ರಾ.ಮಹೇಶ್, ಇಂಗ್ಲಿಷ್ ವರದಿಗಾರಿಕೆಗೆ ಸ್ಟಾರ್ ಆಫ್ ಮೈಸೂರ್ ವರದಿಗಾರ ಎ.ಗಣೇಶ್, ಅತ್ಯುತ್ತಮ ಛಾಯಾಚಿತ್ರ ಪ್ರಶಸ್ತಿಗೆ ಎಸ್.ಆರ್. ಮಧುಸೂದನ್, ದೃಶ್ಯ ಮಾಧ್ಯಮ ವಿಭಾಗದಲ್ಲಿ ನ್ಯೂಸ್ 18 ವಾಹಿನಿಯ ಕೆ.ಎಸ್.ಆನಂದ ಮತ್ತು ವೀಡಿಯೋಗ್ರಾಫರ್ ಪಿ. ರಾಹುಲ್ ಹಾಗೂ ಇಂಡಿಯನ್ ಟಿವಿ ವರದಿಗಾರ ಚಂದನ್ ಬಲರಾಮ ಮತ್ತು ವೀಡಿಯೋಗ್ರಾಫರ್ ಎಲ್.ಸತೀಶ್ ಅವರಿಗೆ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರವೂ ವಿಕಸಿತ ಕ್ಷೇತ್ರವಾಗಬೇಕಿದೆ



ಮೈಸೂರು, ಡಿ.14(ಎಂಕೆ)– ವಿಕಸಿತ ಭಾರತದಂತೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರವೂ ವಿಕಸಿತ ಕ್ಷೇತ್ರವಾಗಬೇಕಾಗಿದೆ. ಈ ನಿಟ್ಟಿನಲ್ಲಿ ಮೈಸೂರು ಪತ್ರಕರ್ತರು ಸಲಹೆ, ಮಾರ್ಗದರ್ಶನ, ಸಹಕಾರ ನೀಡಬೇಕಾದ ಅಗತ್ಯವಿದೆ ಎಂದು ಸಂಸದ ಯದುವೀರ್ ಹೇಳಿದರು.

ನಾನು ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದಾಗ ಅನನುಭವಿ ಆಗಿದ್ದೆ. ಈ ವೇಳೆ ಮಾಧ್ಯಮದವರು ನೀಡಿದ ಉಪಯುಕ್ತ ಸಲಹೆ, ಮಾರ್ಗದರ್ಶನ ಏನಾದರೂ ಸಾಧನೆ ಮಾಡಲು ಸಾಧ್ಯವಾಗುವಂತೆ ಮಾಡಿದೆ. ಮೈಸೂರು–ಕೊಡಗು ಹೆದ್ದಾರಿ ನಿರ್ಮಾಣ ಕಾಮಗಾರಿ 2027ರ ಮಾರ್ಚ್ ವೇಳೆಗೆ ಮುಗಿಯಲಿದೆ. ಹಾಗೆಯೇ ಕುಶಾಲನಗರ ರೈಲು ಯೋಜನೆಗೆ ಭೂ ಸ್ವಾಧೀನ ಆಗಬೇಕಿದೆ. ಮುಂದಿನ ದಿನಗಳಲ್ಲಿ ಮೈಸೂರು ರೈಲ್ವೆ ನಿಲ್ದಾಣದಲ್ಲಿ ಒಟ್ಟು 12 ಪ್ಲಾಟ್ ಫಾರ್ಮ್ ಆಗಲಿದೆ. ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತ ಸ್ಥಾನಮಾನ ಸಿಗಲಿದ್ದು, ಒಟ್ಟಾರೆಯಾಗಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವಿಕಸಿತ ಕ್ಷೇತ್ರ ಆಗಲಿದೆ ಎಂದು ಅಭಿಪ್ರಾಯಪಟ್ಟರು.

ಚಳಿಗೆ ತತ್ತರಿಸಿದ ಸಿಲಿಕಾನ್ ಸಿಟಿ ಬೆಂಗಳೂರು!

9 ವರ್ಷಗಳಲ್ಲೇ ಡಿಸೆಂಬರ್‌ನಲ್ಲಿ ಅತ್ಯಂತ ಕನಿಷ್ಠ ತಾಪಮಾನ!



ಬೆಂಗಳೂರು: ಉದ್ಯಾನ ನಗರಿ ಬೆಂಗಳೂರಿನಲ್ಲಿ ದಿನೇ ದಿನೆ ಚಳಿ ಹೆಚ್ಚಾಗುತ್ತಿದ್ದು, ಚಳಿಗೆ ಬೆಂಗಳೂರು ಮಂದಿ ತತ್ತರಿಸಿ ಹೋಗಿದ್ದಾರೆ. ಚಳಿಯಲ್ಲೂ ಬೆಂಗಳೂರು ದಾಖಲೆ ಬರೆದಿದೆ.

ಬೆಂಗಳೂರಿನಲ್ಲಿ ಕನಿಷ್ಠ ತಾಪಮಾನ 10ಡಿಗ್ರಿಗೆ ಇಳಿಕೆಯಾ ಗಿದ್ದು, 9 ವರ್ಷಗಳಲ್ಲೇ ಡಿಸೆಂಬರ್ ನಲ್ಲಿ ಅತ್ಯಂತ ಕನಿಷ್ಠ ತಾಪಮಾನ ದಾಖಲಾಗಿದೆ. ಇಂದು ಬೆಂಗಳೂರಿನಲ್ಲಿ ತಾಪ ಮಾನ 10ಕ್ಕೆ ಕುಸಿದಿದ್ದು, ಇದು ಕಳೆದ 9 ವರ್ಷಗಳಲ್ಲೇ ನಗರದಲ್ಲಿ ದಾಖಲಾದ ಅತ್ಯಂತ ಕನಿಷ್ಠ ತಾಪಮಾನವಾಗಿದೆ.

ಬೆಂಗಳೂರು ದಕ್ಷಿಣದಲ್ಲಿ 10.1 ಡಿಗ್ರಿ ತಾಪಮಾನ ದಾಖಲಾಗಿದ್ದು, ಬೆಂಗಳೂರು ಗ್ರಾಮಾಂತರದಲ್ಲಿ 10.4 ಡಿಗ್ರಿ ತಾಪಮಾನ ದಾಖಲಾಗಿದೆ. ಅಂತೆಯೇ ಬೆಂಗಳೂರು ನಗರದಲ್ಲಿ 10.8 ಡಿಗ್ರಿ ತಾಪಮಾನ ದಾಖಲಾಗಿದೆ.

ಅಂತೆಯೇ ಮುಂಬರುವ ವಾರದಲ್ಲಿ ರಾತ್ರಿ ತಾಪಮಾನದಲ್ಲಿ ತೀವ್ರ ಇಳಿಕೆಯಾಗುವ ಮುನ್ಸೂಚನೆ ನೀಡಿರುವುದರಿಂದ ನಗರವು ತೀವ್ರ ಚಳಿಗಾಲಕ್ಕೆ ಸಜ್ಜಾಗುತ್ತಿದೆ.

ಶುಕ್ರವಾರ ಬೆಂಗಳೂರಿನಲ್ಲಿ ಕನಿಷ್ಠ ತಾಪಮಾನವು 12 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿದ್ದು, ಇದು 2016 ರ ನಂತರ ಡಿಸೆಂಬರ್‌ನಲ್ಲಿ ದಾಖಲಾದ ಅತ್ಯಂತ ಕನಿಷ್ಠ ತಾಪಮಾನವಾಗಿದೆ. ಚಳಿಯೊಂದಿಗೆ ಮಂಜು ಕವಿದ ಬೆಳಗಿನ ಸಮಯ, ಒಣ ಗಾಳಿ ಮತ್ತು ಸ್ಪಷ್ಟ ಆಕಾಶ ಇರುತ್ತದೆ. ಇವು ದಕ್ಷಿಣ ಭಾರತದಲ್ಲಿ ಚಳಿಗಾಲವನ್ನು ತೀವ್ರಗೊಳಿಸುವ ಪರಿಸ್ಥಿತಿಗಳಾಗಿವೆ ಎಂದು ಹವಾಮಾನ ಇಲಾಖೆ ಹೇಳಿದೆ.

ಕಳೆದ ವಾರದಲ್ಲಿ, ಬೆಂಗಳೂರಿನ ಕನಿಷ್ಠ ತಾಪಮಾನವು 16 °C ಸುತ್ತಲೂ ಇದ್ದು, ಈಗಾಗಲೇ ನಿವಾಸಿ ಗಳಿಗೆ ಋತುವಿನ ಚಳಿಯ ರುಚಿಯನ್ನು ನೀಡಿದೆ. ಆದರೆ ಮುಂಬರುವ ವಾರದಲ್ಲಿ ತಾಪಮಾನ ಮತ್ತಷ್ಟು ಕುಸಿತವಾಗುವ ಸಾಧ್ಯತೆ ಇದ್ದು, ತಾಪಮಾನ 12 °C ಮತ್ತು 14 °C ನಡುವೆ ಏರಿಳಿತಗೊಳ್ಳುವ ಸಾಧ್ಯತೆಯಿದೆ ಎಂದು IMD ಅಧಿಕಾರಿಗಳು ಹೇಳಿದ್ದಾರೆ. ದೀರ್ಘಾವಧಿಯ ಡಿಸೆಂಬರ್ ಸರಾಸರಿ 16.4 °C ಗಿಂತ ಕಡಿಮೆ, ಇದು ಸಾಮಾನ್ಯಕ್ಕಿಂತ ಬಲವಾದ ಚಳಿಗಾಲವನ್ನು ಸೂಚಿಸುತ್ತದೆ.

9 ವರ್ಷಗಳಲ್ಲಿ ಕನಿಷ್ಠ ತಾಪಮಾನ: ಇನ್ನು ಬೆಂಗಳೂರು ಒಂಬತ್ತು ವರ್ಷಗಳ ಹಿಂದೆ ಅಂದರೆ ಡಿಸೆಂಬರ್ 11, 2016 ರಂದು ದಾಖಲಾದ 12° C ಗಿಂತ ಕಡಿಮೆ ತಾಪಮಾನ ಈ ವರೆಗೆ ಬೆಂಗಳೂರಿನಲ್ಲಿ ದಾಖಲಾದ ಕನಿಷ್ಠ ತಾಪಮಾನವಾಗಿದೆ. ಆದರೆ ಡಿಸೆಂಬರ್ 12ರಂದು ಬೆಂಗಳೂರನಲ್ಲಿ ಮತ್ತೆ 12 ಡಿಗ್ರಿ ತಾಪಮಾನ ದಾಖಲಾಗಿತ್ತು. ಇದಕ್ಕೂ ಮೊದಲು ಅಂದರೆ ಗುರುವಾರ ಮುಂಜಾನೆ, ನಗರದ ಕೆಲವು ವಾರ್ಡ್‌ಗಳು ತಾಪಮಾನ ಕನಿಷ್ಟ 13.2° C ಯನ್ನು ದಾಖಲಿಸಿವೆ.

ಬೆಂಗಳೂರಿನ ಬಾಣಸವಾಡಿ, ಥಣಿಸಂದ್ರ ಮತ್ತು ಚೌಡೇಶ್ವರಿ ಮುಂತಾದ ಪ್ರದೇಶಗಳಲ್ಲಿ ತಾಪಮಾನ ಮುಂಜಾನೆ 12 ಡಿಗ್ರಿ ದಾಖಲಾಗಿತ್ತು.

ಈ ಕುರಿತು ಬೆಂಗಳೂರಿನ ಐಎಂಡಿ ಅಧಿಕಾರಿ ಸಿ.ಎಸ್. ಪಾಟೀಲ್, ತಾಪಮಾನದಲ್ಲಿನ ಕುಸಿತವು ಶುಷ್ಕ ಗಾಳಿ, ಸ್ಪಷ್ಟ ಆಕಾಶ ಮತ್ತು ಸ್ಥಿರವಾದ ವಾತಾವರಣದ ಪರಿಸ್ಥಿತಿಗಳ ಸಂಯೋಜನೆಯಿಂದ ಉಂಟಾಗಿದೆ. ಇವೆಲ್ಲವೂ ರಾತ್ರಿಯಲ್ಲಿ ವಿಕಿರಣ ತಂಪಾಗಿಸುವಿಕೆಯನ್ನು ಸುಗಮಗೊಳಿಸುತ್ತದೆ.

ಚಳಿಗಾಲದ ವಿಶಿಷ್ಟ ವಿದ್ಯಮಾನವಾದ ಈಶಾನ್ಯ ಮಾರುತಗಳು ಬಲಗೊಳ್ಳುವುದು ಸಹ ಒಂದು ಪ್ರಮುಖ ಅಂಶವಾಗಿದೆ. ಈ ಗಾಳಿಗಳು ಉತ್ತರ ಮತ್ತು ಮಧ್ಯ ಭಾರತದ ಮೇಲೆ ದಕ್ಷಿಣದ ಕಡೆಗೆ ಹೆಚ್ಚಿನ ಒತ್ತಡದ ವಲಯಗಳಿಂದ ಶೀತ, ಶುಷ್ಕ ಗಾಳಿಯನ್ನು ಒಯ್ಯುತ್ತವೆ, ಬೆಚ್ಚಗಿನ ಗಾಳಿಯ ದ್ರವ್ಯರಾಶಿಗಳನ್ನು ಸ್ಥಳಾಂತರಿ ಸುತ್ತವೆ ಮತ್ತು ತಾಪಮಾನದಲ್ಲಿ ತೀವ್ರ ಕುಸಿತ, ಬೆಳಗಿನ ಮಂಜು ಮತ್ತು ವರ್ಧಿತ ಗಾಳಿ–ಚಳಿ ಪರಿಣಾಮಕ್ಕೆ ಕಾರಣವಾಗುತ್ತವೆ ಎಂದು ಹೇಳಿದರು.

ಕರ್ನಾಟಕದ ಇತರೆ ಭಾಗಗಳಲ್ಲೂ ಚಳಿ ಮುಂದುವರಿಕೆ: ಇನ್ನು ಚಳಿ ಬೆಂಗಳೂರಿಗೆ ಮಾತ್ರ ಸೀಮಿತವಾಗಿಲ್ಲ. ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ರಾಯಚೂರು, ಬಾಗಲಕೋಟೆ, ಬೆಳಗಾವಿ ಮತ್ತು ಧಾರವಾಡ ಸೇರಿದಂತೆ ಉತ್ತರ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲೂ ತಾಪಮಾನದಲ್ಲಿ ಇಳಿಕೆಯಾಗುವ ನಿರೀಕ್ಷೆಯಿದೆ. ಉಳಿದಂತೆ ಕರಾವಳಿ ಪ್ರದೇಶಗಳು ಮತ್ತು ಒಳನಾಡಿನ ಜಿಲ್ಲೆಗಳು ಪ್ರಧಾನವಾಗಿ ಶುಷ್ಕ ಹವಾಮಾನವನ್ನು ಅನುಭವಿಸಲಿವೆ.



ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ
(ಭಾರತ ಸರ್ಕಾರದ ಶಾಸನಬದ್ಧ ಸಂಸ್ಥೆ)
ನೆಲ್ಸನ್ ಮಂಡೇಲಾ ಮಾರ್ಗ್, ವಸಂತ್ ಕುಂಜ್, ನವದೆಹಲಿ–110 070
ದೂರವಾಣಿ ಸಂಖ್ಯೆ: 011–2958–1000/1050, ವೆಬ್‌ಸೈಟ್: www.aicte.gov.in

ಸಾರ್ವಜನಿಕ ಪ್ರಕಟಣೆ

ವಿಷಯ: AICTE ಅನುಮೋದನೆ– ನೋಂ. ಸ್ಥಿತಿಗತಿ ಪರಿಶೀಲನೆ

ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಅಡಿಯ ಶಾಸನಬದ್ಧ ಸಂಸ್ಥೆಯಾದ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (AICTE) ಸಂಸತ್ತಿನ ಒಂದು ಕಾಯ್ದೆಯನುಸಾರ (1987 ರ ಕಾಯ್ದೆ 52) ಸ್ಥಾಪಿಸಲ್ಪಟ್ಟಿದೆ. ಯಾವುದೇ ತಾಂತ್ರಿಕ ಕಾರ್ಯಕ್ರಮ ಹಮ್ಮಿಕೊಳ್ಳುವ ಮುನ್ನ ಎಲ್ಲಾ ಸಂಸ್ಥೆಗಳು AICTE ಯಿಂದ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿದೆ.

ಪೋಷಕರು, ವಿದ್ಯಾರ್ಥಿಗಳು ಮತ್ತು ಇತರ ಪಾಲುದಾರರು ಸಂಸ್ಥೆಗಳ AICTE ಅನುಮೋದನೆ ಸ್ಥಿತಿಯನ್ನು ದೃಢೀಕರಿಸುವಲ್ಲಿ ಆಗಾಗ್ಗೆ ತೊಂದರೆ ಎದುರಿಸುತ್ತಿರುವುದು ಕಂಡುಬರುತ್ತಿದೆ. ಇದನ್ನು ಸರಾಗಗೊಳಿಸಲು, ಪಾಲುದಾರರು AICTE ವೆಬ್‌ಸೈಟ್ www.aicte. gov.in ಮೂಲಕ ನೇರವಾಗಿ ಅನುಮೋದನೆ ವಿವರಗಳನ್ನು ಪರಿಶೀಲಿಸುವಂತೆ ಸೂಚಿಸಲಾಗಿದೆ.

AICTE ಕಾಯಿದೆ, 1987 ಮತ್ತು ಭಾರತಿದಾಸನ್ ವಿಶ್ವವಿದ್ಯಾಲಯ vs. AICTE ಪ್ರಕರಣದಲ್ಲಿ ಸೆಪ್ಟೆಂಬರ್ 24, 2001ರ ಭಾರತದ ಗೌರವಾನ್ವಿತ ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ, ವಿಶ್ವವಿದ್ಯಾಲಯಗಳು ತಾಂತ್ರಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು AICTE ಯಿಂದ ಪೂರ್ವಾನುಮತಿ ಪಡೆಯುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಆದಾಗ್ಯೂ, ವಿಶ್ವವಿದ್ಯಾಲಯಗಳಿಗೆ ಸಂಯೋಜಿತವಾಗಿರುವ ತಾಂತ್ರಿಕ ಸಂಸ್ಥೆಗಳು, ವಿಶ್ವವಿದ್ಯಾಲಯಗಳೆಂದು ಪರಿಗಣಿಸಲಾದ ಸಂಸ್ಥೆಗಳು ಮತ್ತು PGDM ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಂಸ್ಥೆಗಳಿಗೆ ಅಂತಹ ಅನುಮೋದನೆಯ ಅಗತ್ಯವಿರುತ್ತದೆ.

ವಿವಿಧ ಮೂಲಗಳಿಂದ ಪಡೆದ ಮಾಹಿತಿಯ ಆಧಾರದ ಮೇಲೆ AICTE ಅನುಮೋದಿಸದ ಸಂಸ್ಥೆಗಳ ಪಟ್ಟಿಯನ್ನು ಸಹ ನಿರ್ವಹಿಸುತ್ತದೆ. ಈ ಪಟ್ಟಿಯನ್ನು AICTE ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಅನುಮೋದಿಸದ ಕೋರ್ಸ್‌ಗಳನ್ನು ನಡೆಸುತ್ತಿರುವ ಸಂಸ್ಥೆಗಳಿಗೆ ಸಾರ್ವಜನಿಕ ಪ್ರಕಟಣೆಗಳು ಮತ್ತು ವೈಯಕ್ತಿಕ ಸಂವಹನಗಳ ಮೂಲಕ ನಿಯಮಿತವಾಗಿ ತಿಳಿಸಲಾಗುತ್ತದೆ, ಆಯಾಯ ರಾಜ್ಯ ಸರ್ಕಾರಗಳಿಗೆ ತಿಳಿಸಿದಂತೆ, AICTE ಅನುಮೋದನೆ ಪಡೆಯಲು ಇಲ್ಲವೇ ಅಂತಹ ಕಾರ್ಯಕ್ರಮಗಳನ್ನು ಮುಂದುವರಿಸದಂತೆ ನಿರ್ದೇಶನಗಳನ್ನು ನೀಡಲಾಗುತ್ತದೆ. ಅಂತಹ ತಪ್ಪಿತಸ್ಥ ಸಂಸ್ಥೆಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರಗಳಿಗೆ ಸೂಚಿಸಲಾಗಿದೆ. ಸಂಪೂರ್ಣ ಸಾರ್ವಜನಿಕ ಪ್ರಕಟಣೆ ಮಾಹಿತಿಗಾಗಿ AICTE ವೆಬ್‌ಸೈಟ್ www.aicte.gov.in ಗೆ ಭೇಟಿ ನೀಡಿ.

ಸಾರ್ವಜನಿಕರ ಮತ್ತು ಎಲ್ಲಾ ಪಾಲುದಾರರಿಗೆ ಮಾಹಿತಿ ಮತ್ತು ಹಿತಾಸಕ್ತಿಗಾಗಿ ಈ ಪ್ರಕಟಣೆಯನ್ನು ನೀಡಲಾಗಿದೆ.

ಜಾಹೀರಾತು ಸಂಖ್ಯೆ:
ರೆಗ್ಯುಲೇಷನ್ ಬ್ಯೂರೋ/AICTE/12(01)/2025
cbc21300/12/0011/2526

(ಪ್ರೊ. ಶ್ಯಾಮ್ ರಥ್)
ಸದಸ್ಯ ಕಾರ್ಯದರ್ಶಿ, AICTE